ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 15 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 151 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ರಾಜ್ಯದಲ್ಲಿ 161 ತಾಲೂಕಲ್ಲಿ ತೀವ್ರ, 34ರಲ್ಲಿ ಸಾಧಾರಣ ಬರ ಪರಿಸ್ಥಿತಿ

ಸೂಕ್ತ ಪರಿಹಾರ ಕಲ್ಪಿಸಲು ಕೇಂದ್ರಕ್ಕೆ ಮನವಿ

ಮೈಸೂರು ಭಾಗದಲ್ಲಿ ಬರ

- **ಮೈಸೂರು ಜಿಲ್ಲೆ:** ಎಚ್.ಡಿ.ಕೋಟೆ, ಹುಣಸೂರು, ಮೈಸೂರು, ನಂಜನಗೂಡು, ಪಿರಿಯಾಪಟ್ಟಣ, ಟಿ.ನರಸೀಪುರ, ಸರಗೂರು, ಸಾಲಿಗ್ರಾಮ.
- **ಮಂಡ್ಯ:** ಕೆ.ಆರ್.ಪೇಟೆ, ಮದ್ದೂರು, ಮಳವಳ್ಳಿ, ಮಂಡ್ಯ ನಾಗಮಂಗಲ, ಪಾಂಡವಪುರ, ಶ್ರೀರಂಗಪಟ್ಟಣ.
- **ಹಾಸನ:** ಅರಕಲಗೂಡು.
- **ಕೊಡಗು:** ಮಡಿಕೇರಿ, ವಿರಾಜಪೇಟೆ, ಕುಶಾಲನಗರ.





ಬೆಂಗಳೂರು, ಸೆ.14(ಕೆಎಂಶಿ)– ಮುಂಗಾರು ಮಳೆ ವೈಫಲ್ಯದ ಹಿನ್ನೆಲೆಯಲ್ಲಿ ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್ ಮಾರ್ಗಸೂಚಿಯ ಪ್ರಕಾರ ರಾಜ್ಯದ 195 ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಿಸಲಾಗಿದ್ದು, ಬರಪರಿಹಾರ ಒದಗಿಸಲು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಂದಾಯ ಸಚಿವ ಕೃಷ್ಣಭೈರೇಗೌಡ ಅವರ ಅಧ್ಯಕ್ಷತೆಯಲ್ಲಿ ನಿನ್ನೆ ನಡೆದ ರಾಜ್ಯ ಸಚಿವ ಸಂಪುಟ ಉಪ ಸಮಿತಿ ಸಭೆಯು ರಾಜ್ಯದ 161 ತಾಲೂಕುಗಳಲ್ಲಿ ತೀವ್ರ ಬರ ಹಾಗೂ 34 ತಾಲೂಕು ಸಾಧಾರಣ ಬರಪೀಡಿತ ಪ್ರದೇಶವೆಂದು ತೀರ್ಮಾನಿಸಿದೆ ಎಂದರು. ಸಮಿತಿಯ ತೀರ್ಮಾನದಂತೆ ಕಂದಾಯ ಇಲಾಖೆ ಬರಪೀಡಿತ ತಾಲೂಕುಗಳ ಘೋಷಣೆ ಮಾಡಿ ಆದೇಶ ಹೊರಡಿಸಿದೆ. ಬರ ನಿರ್ವಹಣೆ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸರ್ಕಾರದಿಂದ ಕಾಲಕಾಲಕ್ಕೆ ಎಸ್‌ಡಿಆರ್‌ಎಫ್ ಹಾಗೂ ಎನ್‌ಡಿಆರ್‌ಎಫ್ ನಿಯಮಗಳನ್ವಯ ನೀಡುವ ಮಾರ್ಗಸೂಚಿಗಳನ್ನು ಪಾಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

ಸಾಧಾರಣ ಬರಪೀಡಿತ ತಾಲೂಕುಗಳ ಪಟ್ಟಿ: ಬೆಂಗಳೂರು ನಗರ ಜಿಲ್ಲೆ, ಆನೇಕಲ್, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಯಲಹಂಕ, ರಾಮನಗರ ಜಿಲ್ಲೆ–ಚನ್ನಪಟ್ಟಣ, ಮಾಗಡಿ, ಕೋಲಾರ ಜಿಲ್ಲೆ–ಮಾಲೂರು, ತುಮಕೂರು ಜಿಲ್ಲೆ–ತುಮಕೂರು, ಚಾಮರಾಜನಗರ ಜಿಲ್ಲೆ–ಗುಂಡ್ಲುಪೇಟೆ, ಕೊಳ್ಳೆಗಾಲ, ಹನೂರು, ರಾಯಚೂರು ಜಿಲ್ಲೆ–ದೇವದುರ್ಗ, ಮಸ್ಕಿ, ಹಾಸನ ಜಿಲ್ಲೆ–ಚನ್ನರಾಯಪಟ್ಟಣ, ಹೊಳೆನರಸೀಪುರ, ಸಕಲೇಶಪುರ, ಚಿಕ್ಕಮಗಳೂರು ಜಿಲ್ಲೆ–ಕೊಪ್ಪ, ನರಸಿಂಹರಾಜಪುರ, ಶೃಂಗೇರಿ, ಕಳಸ, ಕೊಡಗು ಜಿಲ್ಲೆ–ಸೋಮವಾರಪೇಟೆ, ದಕ್ಷಿಣ ಕನ್ನಡ ಜಿಲ್ಲೆ–ಮಂಗಳೂರು, ಮೂಡಬಿದ್ರೆ, ಉಡುಪಿ ಜಿಲ್ಲೆ, ಬ್ರಹ್ಮಾವರ, ಉತ್ತರ ಕನ್ನಡ ಜಿಲ್ಲೆ–ಅಂಕೋಲ, ಭಟ್ಕಳ, ಕಾರವಾರ, ಕುಮಟ, ಜೋಯಿಡ (ಸೂಪ), ಯಾದಗಿರಿ ಜಿಲ್ಲೆ–ಶೋರಾಪುರ, ಯಾದಗಿರಿ, ಗುರುಮಿಟ್ಕಲ್, ಹುಣಸಿಗಿ.

ಮತ್ತೆ ನೀರು ಹರಿಸಲು ಸಾಧ್ಯವೇ ಇಲ್ಲ


● ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರಸಿಂಗ್ ಶೇಖಾವತ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ ಬರೆದು ಸ್ಪಷ್ಟನೆ ● ಇರುವ ನೀರು ನಮ್ಮ ರೈತರ ಬೆಳೆಗೆ, ಜಾನುವಾರು, ಜನರಿಗೆ ಕುಡಿಯಲೂ ಸಾಲದು ● ಸದ್ಯಕ್ಕೆ ನಿರೀಕ್ಷಿತ ಪ್ರಮಾಣದಲ್ಲಿ ಮಳೆ ಬರುವ ಸಾಧ್ಯತೆ ಕಡಿಮೆ ● ಈಗ ಮೆಟ್ಟೂರು ಜಲಾಶಯದಲ್ಲಿನ ನೀರಿನ ಸಂಗ್ರಹ ತಮಿಳ್ನಾಡಿನ ಅಗತ್ಯಕ್ಕೆ ಸಾಕಾಗಲಿದೆ



ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರಸಿಂಗ್ ಶೇಖಾವತ್ ಅವರಿಗೆ ಜೈಪುರದಲ್ಲಿ ಮುಖ್ಯಮಂತ್ರಿಗಳ ಮನವಿ ಪತ್ರ ಸಲ್ಲಿಸಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್.

ಬೆಂಗಳೂರು, ಸೆ.14(ಕೆಎಂಶಿ)–ಕಾವೇರಿ ನೀರಿನ ಮೇಲೆ ಅವಲಂಬಿತರಾಗಿರುವ ರೈತರು, ಜಾನುವಾರು ಹಾಗೂ ಜನರ ಹಿತಾಸಕ್ತಿ ಯನ್ನು ಸಂಕಷ್ಟಕ್ಕೆ ದೂಡಿ ಕಾವೇರಿ ನೀರು ನಿಯಂತ್ರಣ ಸಮಿತಿಯ ಆದೇಶವನ್ನು ಅನುಷ್ಠಾನ ಮಾಡಲು ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರಸಿಂಗ್ ಶೇಖಾವತ್ ಅವರಿಗೆ ಬರೆದಿರುವ ಪತ್ರದಲ್ಲಿ ಸ್ಪಷ್ಟಪಡಿಸಿದ್ದಾರೆ. ಕಾವೇರಿ ನೀರು ನಿಯಂತ್ರಣ ಸಮಿತಿ ನಿರ್ಧರಿಸಿರುವಂತೆ 15 ದಿನಗಳ ಕಾಲ ಕೆಆರ್‌ಎಸ್ ಹಾಗೂ ಕಬಿನಿಯಿಂದ 5000 ಕ್ಯೂಸೆಕ್ ನೀರನ್ನು ಬಿಳಿಗುಂಡ್ಲುವಿನಿಂದ ಹರಿಸುವುದು ಸಾಧ್ಯವಿಲ್ಲ.

ಕರ್ನಾಟಕದ ಮನವಿಯನ್ನು ಪರಿಗಣಿಸಿ ಕಾವೇರಿ ನೀರು ನಿಯಂತ್ರಣ ಸಮಿತಿಯ ನಿರ್ಧಾರವನ್ನು ಮರು ಪರಿಶೀಲಿಸುವಂತೆ ಕೋರಿದ್ದಾರಲ್ಲದೆ, ಬರಪೀಡಿತವಾಗಿರುವ ರಾಜ್ಯದ ಜನತೆ ಹಾಗೂ ಜಾನುವಾರುಗಳ ಹಿತಾಸಕ್ತಿಯನ್ನು ಕಾಪಾಡಲು ಮನವಿ ಮಾಡಿದ್ದಾರೆ. ಕರ್ನಾಟಕ ರಾಜ್ಯ, ಸಮಿತಿಯ ಹಿಂದಿನ ನಿರ್ದೇಶನವನ್ನು ಪಾಲಿಸಿದ್ದು, ಕಾವೇರಿ ಜಲಾನಯನ ಪ್ರದೇಶದಲ್ಲಿರುವ ಬಹುತೇಕ ತಾಲೂಕುಗಳು ಮುಂಗಾರು ವೈಫಲ್ಯದಿಂದ ತೀವ್ರಬರಕ್ಕೆ ತುತ್ತಾಗಿವೆ ಎಂದು ವಿವರಿಸಿದ್ದಾರೆ.



ಜೂನ್ ಮಾಹೆಯಿಂದ ಸೆಪ್ಟೆಂಬರ್ ಮಧ್ಯದವರೆಗೂ 92 ದಿನಗಳ ಕಾಲ 100 ಟಿಎಂಸಿ ನೀರನ್ನು ತಮಿಳುನಾಡು ಬಳಸಿಕೊಂಡಿದ್ದು, ಇದು ಹಿಂದೆ 1987–88, 2002–03, 2012–13, 2016–17 ಹಾಗೂ 2017–18ರ ಬರ ಪರಿಸ್ಥಿತಿಯಲ್ಲಿ ಬಳಕೆಯಾದ ನೀರಿಗಿಂತಲೂ ಹೆಚ್ಚಾಗಿದೆ. ಕರ್ನಾಟಕದ ಜಲಾಶಯಗಳಲ್ಲಿ ಸಂಕಷ್ಟದ ಸ್ಥಿತಿಯಿದ್ದರೂ ತಮಿಳುನಾಡು ಭತ್ತವನ್ನು ವ್ಯಾಪಕವಾಗಿ ಬೆಳೆಯುತ್ತಿದೆ ಎಂದು ಪತ್ರದಲ್ಲಿ ಮುಖ್ಯಮಂತ್ರಿಗಳು ವಿವರಿಸಿದ್ದಾರೆ. ಸೆಪ್ಟೆಂಬರ್ 12 ಹಾಗೂ 24 ವರೆಗೆ ಐಎಂಡಿಯ ● 6ನೇ ಪುಟಕ್ಕೆ

ಸನಾತನ ಧರ್ಮವನ್ನು ನಾಶ ಮಾಡಲು 'ಇಂಡಿಯಾ' ಸಂಕಲ್ಪ



ಭೋಪಾಲ್: ಸನಾತನ ಧರ್ಮವನ್ನು ನಿರ್ಮೂಲನೆ ಮಾಡುವ ಮೂಲಕ ವಿಪಕ್ಷಗಳ ಮೈತ್ರಿಕೂಟ I.N.D.I.A ದೇಶವನ್ನು ಸಾವಿರ ವರ್ಷಗಳ ಹಿಂದಿನ ಗುಲಾಮಗಿರಿ ಪದ್ಧತಿಗೆ ತಳ್ಳಲು ಬಯಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ವರ್ಷಾಂತ್ಯದಲ್ಲಿ ಚುನಾವಣೆ ನಡೆಯಲಿರುವ ಮಧ್ಯಪ್ರದೇಶದ ರಾಯ್‌ಘರ್‌ನಲ್ಲಿ ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಸನಾತನ ಧರ್ಮದ ಕುರಿತು ವಿವಾದಾತ್ಮಕ ಹೇಳಿಕೆ ನೀಡಿದ ಡಿಎಂಕೆ ಹಾಗೂ I.N.D.I.A ಒಕ್ಕೂಟದ ನಾಯಕರ ವಿರುದ್ಧ ಹರಿಹಾಯ್ದಿದ್ದಾರೆ. ಇತ್ತೀಚೆಗೆ ಮುಂಬೈನಲ್ಲಿ ಘಮಂಡಿಯಾ ಮೈತ್ರಿಕೂಟವನ್ನು ಹೇಗೆ ನಡೆಸಬೇಕೆಂದು ಸಭೆ ನಡೆಸಲಾಯಿತು. ಸಭೆಯಲ್ಲಿ ಘಮಂಡಿಯಾದ ನಾಯಕರು ಸನಾತನ ಧರ್ಮ ಹಾಗೂ ದೇಶದ ಸಂಸ್ಕೃತಿ ಮೇಲೆ ಹೇಗೆ ದಾಳಿ ಮಾಡಬೇಕೆಂಬ ಗುಪ್ತ ಅಜೆಂಡಾವನ್ನು ಹಾಕಿಕೊಂಡಿದ್ದಾರೆ. ಸಾವಿರಾರು ವರ್ಷಗಳಿಂದ ದೇಶವನ್ನು ಒಗ್ಗೂಡಿಸಿರುವ ಚಿಂತನೆ, ಮೌಲ್ಯ ಹಾಗೂ ಸಂಪ್ರದಾಯವನ್ನು ಕೊನೆಗೊಳಿಸಲು ● 6ನೇ ಪುಟಕ್ಕೆ

ನಗದು ಪರಿಹಾರದ ಬದಲು ಭೂಮಾಲೀಕರಿಗೆ ಭಾರಿ ಬೆಲೆ ಬಾಳುವ ನಿವೇಶನ ಮಂಜೂರು

ವರದಿ ಸಲ್ಲಿಸುವಂತೆ ಮೈಸೂರು ಡಿಸಿಗೆ ನಗರಾಭಿವೃದ್ಧಿ ಇಲಾಖೆ ಸೂಚನೆ

● ಮುಡಾ ಮಾಜಿ ಅಧಿಕಾರಿಯಿಂದಲೇ ದೂರು ಸಲ್ಲಿಕೆ; ಸಮಗ್ರ ತನಿಖೆಗೆ ಆಗ್ರಹ: ಈ ಪ್ರಕ್ರಿಯೆಯಿಂದ ಮುಡಾ, ಸರ್ಕಾರಕ್ಕೆ 1000 ಕೋಟಿಗೂ ಅಧಿಕ ನಷ್ಟದ ಆರೋಪ ● ಮುಡಾ ಮಾಜಿ ಅಧ್ಯಕ್ಷರಾದ ಹೆಚ್.ವಿ.ರಾಜೀವ್, ಯಶಸ್ವಿ ಎಸ್.ಸೋಮಶೇಖರ್, ಹಿಂದಿನ ಆಯುಕ್ತ ನಟೇಶ್, ಹಾಲಿ ಆಯುಕ್ತ ದಿನೇಶ್‌ಕುಮಾರ್ ಇನ್ನಿತರರ ವಿರುದ್ಧ ತನಿಖೆಗೆ ದೂರುದಾರ ಆಗ್ರಹ



ಮೈಸೂರು, ಸೆ.14(ಆರ್‌ಕೆ)– ಸ್ವಾಧೀನಪಡಿಸಿಕೊಂಡ ಬಳಿಕ ಭೂಮಾಲೀಕರಿಗೆ ಪರಿಹಾರ ನೀಡದ ಪ್ರಕರಣಗಳಲ್ಲಿ ಹಣದ ಬದಲಿಗೆ ಕಾನೂನು ಬಾಹಿರವಾಗಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಿಂದ ಅಭಿವೃದ್ಧಿ ಹೊಂದಿದ ಬಡಾವಣೆಗಳಲ್ಲಿ ಬೆಲೆ ಬಾಳುವ ನಿವೇಶನಗಳನ್ನು ಹಂಚಿಕೆ ಮಾಡಿದ್ದಾರೆಂಬ ಆರೋಪದ ಹಿನ್ನೆಲೆಯಲ್ಲಿ ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿ ಸಲ್ಲಿಸುವಂತೆ ನಗರಾಭಿವೃದ್ಧಿ ಇಲಾಖೆಯು, ಮೈಸೂರು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿದೆ.

> “‘ಬಡಾವಣೆ ನಿರ್ಮಾಣಕ್ಕಾಗಿ ಭೂಸ್ವಾಧೀನಪಡಿಸಿಕೊಂಡಾಗ ನಿಯಮಾನುಸಾರ ಮಾಲೀಕರಿಗೆ ಪರಿಹಾರ ನೀಡಲಾಗಿದೆ. ಪರಿಹಾರಕ್ಕೆ ಬದಲಾಗಿ ನಿವೇಶನ ನೀಡಿ ನಷ್ಟ ಉಂಟು ಮಾಡಿದ್ದಾರೆಂಬುದು ಸತ್ಯಕ್ಕೆ ದೂರವಾದುದು. ಯಾವುದೇ ಅಭಿವೃದ್ಧಿಗೆ ಅನುದಾನ ನೀಡಿದ್ದರೂ, ಪ್ರಾಧಿಕಾರದ ಸಭೆಯಲ್ಲಿಟ್ಟು, ಅಧಿಕಾರಿಗಳಿಂದ ಮಾಹಿತಿ ಪಡೆದು ಕಾನೂನಿನ ವ್ಯಾಪ್ತಿಯೊಳಗಿದ್ದರೆ ಮಾತ್ರ ಅನುಮೋದಿಸಲಾಗಿದೆ. ಕಾನೂನಿನಲ್ಲಿ ಅವಕಾಶವಿಲ್ಲದ ಯಾವುದೇ ನಿರ್ಣಯ ಸಭೆಯಲ್ಲಿ ಕೈಗೊಂಡಿಲ್ಲ. ಮುಡಾಗೆ ನಷ್ಟ ಉಂಟು ಮಾಡುವ ಯಾವುದೇ ಕ್ರಮಕೈಗೊಂಡಿಲ್ಲ. ನಮ್ಮ ಅವಧಿಯಲ್ಲಿ ನಗರದ ಅಭಿವೃದ್ಧಿಗಷ್ಟೇ ಒತ್ತು ನೀಡಲಾಗಿದೆ.
>
> 
>
> – ಹೆಚ್.ವಿ.ರಾಜೀವ್, ಮುಡಾ ಮಾಜಿ ಅಧ್ಯಕ್ಷ.

> “‘ತುಂಡು ಭೂಮಿ ಹಂಚಿಕೆ, ಭೂ ಪರಿಹಾರವಾಗಿ ಜಾಗ ನೀಡುವ ಕುರಿತು ಮಾರ್ಗಸೂಚಿ ತಯಾರಿಸಲು ಮುಂದಾಗಿರುವುದರಿಂದ ಅಲ್ಲಿಯವರೆಗೂ ಅಂತಹ ಪ್ರಕರಣಗಳಲ್ಲಿ ಯಾವುದೇ ನಿರ್ಣಯ ಕೈಗೊಳ್ಳದಂತೆ 2023ರ ಮಾರ್ಚ್14 ರಂದು ಸರ್ಕಾರ ನಿರ್ದೇಶನ ನೀಡಿದ ಹಿನ್ನೆಲೆಯಲ್ಲಿ ನಾವು ಭೂ ಪರಿಹಾರದ ಬದಲಿಗೆ ಯಾವುದೇ ನಿವೇಶನ ನೀಡಿಲ್ಲ. ಅಲ್ಲದೇ ನನ್ನ ಅವಧಿಯಲ್ಲಿ ಅಂತಹ ಪ್ರಕರಣಗಳು ಸಭೆಗೆ ಮಂಡಿಸಲು ಇಲ್ಲವಾದ್ದರಿಂದ ನಾವು ಯಾರಿಗೂ 50:50 ಅನುಪಾತದಲ್ಲಿ ಭೂ ಮಾಲೀಕರಿಗೆ ಜಾಗ ನೀಡಿಲ್ಲ, ಕಾನೂನು ವ್ಯಾಪ್ತಿಯಲ್ಲಿ ಮಾಡಬಹುದಾದ ಕೆಲಸವನ್ನಷ್ಟೇ ಅಲ್ಪಾವಧಿಯಲ್ಲಿ ಮಾಡಿದ್ದೇನೆ.
>
> 
>
> –ಯಶಸ್ವಿ ಎಸ್.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ

ಈ ಕುರಿತು ಸೆ.5ರಂದು ಪತ್ರ ಬರೆದಿರುವ ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ಕೆ.ಲತಾ, ಆ.5 ರಂದು ಮೈಸೂರು ಬೃಂದಾವನ ಬಡಾವಣೆ ನಿವಾಸಿ ಪಿ.ಎಸ್.ನಟರಾಜ್ ಎಂಬುವರು ದೂರು ನೀಡಿದ್ದು, ಮುಡಾ ಹಲವು ಪ್ರಕರಣಗಳಲ್ಲಿ ಭೂ ಮಾಲೀಕರಿಗೆ ಪರಿಹಾರದ ಹಣದ ಬದಲು ಅಭಿವೃದ್ಧಿ ಹೊಂದಿರುವ ಜಾಗದಲ್ಲಿ ಬೆಲೆ ಬಾಳುವ ಆಸ್ತಿಗಳನ್ನು 50:50 ಅನುಪಾತದಲ್ಲಿ ಕಾನೂನುಬಾಹಿರವಾಗಿ ಹಂಚಿಕೆ ಮಾಡಿದೆ ಎಂದು ಆರೋಪಿಸಿದ್ದಾರೆಂದು ಉಲ್ಲೇಖಿಸಿದ್ದಾರೆ.

ಅದರಿಂದಾಗಿ ಪ್ರಾಧಿಕಾರ ಹಾಗೂ ಸರ್ಕಾರಕ್ಕೆ ಸುಮಾರು 1000 ಕೋಟಿ ರೂ.ಗೂ ಹೆಚ್ಚು ನಷ್ಟ ಉಂಟು ಮಾಡಿದ್ದಾರೆ. ಅಕ್ರಮ ಲಾಭ, ಬೇನಾಮಿ ಆಸ್ತಿಗಳನ್ನು ಮುಡಾ ಮಾಜಿ ಅಧ್ಯಕ್ಷರುಗಳಾದ ಹೆಚ್.ವಿ.ರಾಜೀವ್, ಯಶಸ್ವಿ ಎಸ್. ಸೋಮಶೇಖರ್, ಹಿಂದಿನ ಆಯುಕ್ತ ಡಿ.ಬಿ. ನಟೇಶ್, ಈಗಿನ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್, ವಿಶೇಷ ಭೂಸ್ವಾಧೀನಾಧಿಕಾರಿಗಳಾದ ● 6ನೇ ಪುಟಕ್ಕೆ

ಅ.1ರಿಂದ ಹಲವು ಸೇವೆಗಳಿಗೆ ಜನನ ಪ್ರಮಾಣ ಪತ್ರ ಕಡ್ಡಾಯ




ನವದೆಹಲಿ: ಹಲವು ಸೇವೆಗಳಿಗೆ ಜನನ ಪ್ರಮಾಣಪತ್ರವನ್ನು ಒಂದೇ ದಾಖಲೆಯಾಗಿ ಮಾಡುವ ತಿದ್ದುಪಡಿ ಕಾನೂನು ಅ.1ರಿಂದ ಜಾರಿಗೆ ಬರಲಿದೆ.

ಇತ್ತೀಚೆಗೆ ಸಂಸತ್‌ನಲ್ಲಿ ಅನುಮೋದನೆಗೊಂಡು, ರಾಷ್ಟ್ರಪತಿ ದ್ರೌಪದಿ ಮುರ್ಮು ಅಂಕಿತ ಹಾಕಿದ್ದ ಜನನ ಮತ್ತು ಮರಣಗಳ ನೋಂದಣಿ (ತಿದ್ದುಪಡಿ) ಕಾನೂನು ಅ.1 ರಿಂದ ಜಾರಿಗೆ ಬರಲಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಕೇಂದ್ರ ಗೃಹ ಇಲಾಖೆಯಿಂದ ಹೊರಡಿಸಿದ ಪ್ರಕಟಣೆಯಲ್ಲಿ ರಿಜಿಸ್ಟ್ರಾರ್ ಮತ್ತು ಜನಗಣತಿ ಆಯುಕ್ತ ಮೃತ್ಯುಂಜಯ್ ಕುಮಾರ್ ನಾರಾಯಣ್ ಈ ಮಾಹಿತಿ ನೀಡಿದ್ದಾರೆ.

ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ, ಚಾಲನಾ ಪರವಾನಗಿ ನೀಡಿಕೆ, ಆಧಾರ್ ಕಾರ್ಡ್ ಅಥವಾ ಪಾಸ್‌ಪೋರ್ಟ್‌ಗೆ ಅರ್ಜಿ ಸಲ್ಲಿಸುವುದು ಮತ್ತು ವಿವಾಹ ನೋಂದಣಿಯಂತಹ ಹಲವಾರು ಕೆಲಸಗಳು ಮತ್ತು ಸೇವೆಗಳಿಗೆ ಜನನ ಪ್ರಮಾಣಪತ್ರವನ್ನು ಒಂದೇ ದಾಖಲೆಯಾಗಿ ಬಳಸಲು ಹೊಸ ತಿದ್ದುಪಡಿ ಮಾಡಿದ ಕಾನೂನಿನಿಂದ ಅನುಕೂಲವಾಗಲಿದೆ. ಸಂಸತ್ತು ಕಳೆದ ಮಾನ್ಸೂನ್ ಅಧಿವೇಶನದಲ್ಲಿ ಜನನ ಮತ್ತು ಮರಣಗಳ ನೋಂದಣಿ (ತಿದ್ದುಪಡಿ) ಕಾಯಿದೆ, 2023 ಅನ್ನು ಅಂಗೀಕರಿಸಿತ್ತು. ಇದೀಗ ಇದಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಆಗಸ್ಟ್ 11 ರಂದು ಒಪ್ಪಿಗೆ ನೀಡಿದ್ದಾರೆ. "ಜನನ ಮತ್ತು ಮರಣಗಳ ನೋಂದಣಿ (ತಿದ್ದುಪಡಿ) ಕಾಯಿದೆ, 2023 (2023 ರ 20) ರ ವಿಭಾಗ 1 ರ ಉಪ–ವಿಭಾಗ (2) ರ ಮೂಲಕ ನೀಡಲಾದ ಅಧಿಕಾರಗಳ ಅನುಷ್ಠಾನದಲ್ಲಿ, ಕೇಂದ್ರ ಸರ್ಕಾರವು ಅ.1ರಿಂದ ಜಾರಿ ಮಾಡುತ್ತಿದೆ. ಜನನ ಮತ್ತು ಮರಣಗಳ ● 9ನೇ ಪುಟಕ್ಕೆ

ಮಗಳು ಪ್ರತಿಷ್ಠಿತ ಐಟಿ ಕಂಪನಿ ಉದ್ಯೋಗಿ; ಮಗ ಸರ್ಕಾರಿ ನೌಕರ; ತಂದೆಗೆ ಫುಟ್‌ಪಾತೇ ಗತಿ! ಮಕ್ಕಳಿಗೆ ಆಸ್ತಿ ಬಂದ ಕೂಡಲೇ ತಂದೆ ಬೀದಿಗೆ ಬಿದ್ದರು!! ಮನೆಯವರ ಅವಕೃಪೆಯಿಂದ ಮಗಳೊಂದಿಗೆ ಬಯಲಲ್ಲಿ ಬದುಕುತ್ತಿರುವ ಮಹಿಳೆ!!!

ಮೈಸೂರು ನಗರಪಾಲಿಕೆ ನಿರ್ಗತಿಕರಿಗೆ ನೆಲೆ ಕಲ್ಪಿಸಲು ಕೈಗೊಂಡಿರುವ ಸಮೀಕ್ಷೆ ವೇಳೆ ಬೆಳಕಿಗೆ ಬಂದ ಬದುಕಿನ ದೌರ್ಭಾಗ್ಯವಂತರು




ಮೈಸೂರು, ಸೆ.14(ಆರ್‌ಕೆ)– ಒಂಭತ್ತು ತಿಂಗಳು ಹೊತ್ತು ಹಡೆದ ಮಗುವನ್ನು ಕಂಡಾಗ ತಾಯಿಯ ಆನಂದಕ್ಕೆ ಪಾರವೇ ಇಲ್ಲ. ತಂದೆಯಂತೂ ತನ್ನ ಮಗುವಿನ ಮುಖ ನೋಡಿದ ಸಂತೋಷವನ್ನು ಸ್ನೇಹಿತರು ಹಾಗೂ ಸಂಬಂಧಿಕರೊಂದಿಗೆ ಸಂಭ್ರಮದಿಂದ ಹಂಚಿಕೊಳ್ಳುತ್ತಾನೆ. ಜೀವನದಲ್ಲಿ ತಾವು ಅನುಭವಿಸಿದ ಕಷ್ಟವನ್ನು ಮಕ್ಕಳು ಅನುಭವಿಸಬಾರದು ಎಂದು ತಂದೆ–ತಾಯಿ ಹೊಟ್ಟೆ–ಬಟ್ಟೆ ಕಟ್ಟಿ ಮಕ್ಕಳಿಗೆ ಯಾವುದೇ ರೀತಿಯ ಕಷ್ಟ ನೀಡದೆ, ಪಾಲನೆ–ಪೋಷಣೆ ಮಾಡಿ, ಶಿಕ್ಷಣವನ್ನೂ ಕೊಟ್ಟು ಅವರು ಉತ್ತಮ ಭವಿಷ್ಯ ರೂಪಿಸಿಕೊಳ್ಳುವಲ್ಲಿ ನೆರವಾಗುತ್ತಾರೆ. ಇದು ಬಹುತೇಕ ಎಲ್ಲಾ ಕುಟುಂಬಗಳಲ್ಲೂ ಸರ್ವೇಸಾಮಾನ್ಯವಾಗಿ ಕಂಡು ಬರುವಂತಹದ್ದು. ಆದರೆ ಮಕ್ಕಳು...

ಮಗಳು ಇಂಜಿನಿಯರ್ ಆಗಿ ಪ್ರತಿಷ್ಠಿತ ಐಟಿ ಕಂಪನಿಯಲ್ಲಿ ಕೆಲಸ ಗಿಟ್ಟಿಸಿಕೊಂಡಿದ್ದಾಳೆ. ಮಗ ವಿದ್ಯಾವಂತನಾಗಿ ಸರ್ಕಾರಿ ನೌಕರನಾಗಿದ್ದಾನೆ. ತನ್ನ ಈ ಇಬ್ಬರೂ ಮಕ್ಕಳು ಉತ್ತಮ ಭವಿಷ್ಯ ರೂಪಿಸಿಕೊಂಡಾಗ ತಂದೆಯ ಆನಂದಕ್ಕೆ ಪಾರವೇ ಇಲ್ಲ. ಆದರೆ ಅದೇ ಮಕ್ಕಳು ತಾವು ಸುಶಿಕ್ಷಿತರಾಗಿ ಉತ್ತಮ ಉದ್ಯೋಗ ಪಡೆದುಕೊಂಡು ಜೀವನವನ್ನು ರೂಪಿಸಿಕೊಳ್ಳಲು ಕಾರಣಕರ್ತರಾದ ತಂದೆಯನ್ನು ಇಳಿವಯಸ್ಸಿನಲ್ಲಿ ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಳ್ಳಬೇಕಾಗಿತ್ತು. ಆದರೆ ಈ ತಂದೆ ಮೈಸೂರು ನಗರದ ಫುಟ್‌ಪಾತ್‌ನಲ್ಲಿ



ರಾತ್ರಿ ವೇಳೆ ಹೊದ್ದುಕೊಳ್ಳಲು ಹೊದಿಕೆಯೂ ಇಲ್ಲದೇ ಚಳಿಯಲ್ಲಿ ನಡುಗುತ್ತಾ ಮಲಗಿದ್ದಾನೆ. ಅವರಿಗೆ ಕಾಲಿನಲ್ಲಿ ಗ್ಯಾಂಗ್ರೀನ್ ಆಗಿದ್ದು, ಚಿಕಿತ್ಸೆ ಪಡೆಯಲು ಸಾಧ್ಯವಾಗದೇ ನರಳುತ್ತಿದ್ದಾರೆ. ಅವರಿವರು ಕೊಟ್ಟ ಆಹಾರವನ್ನು ಸೇವಿಸುತ್ತಾ ಫುಟ್‌ಪಾತ್‌ನಲ್ಲಿ ತನ್ನ ಮಕ್ಕಳೇ ತನಗೆ ತೋರಿಸಿರುವ ನರಕವನ್ನು ನೆನೆದು ಕಣ್ಣೀರು ಹಾಕುತ್ತಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ಮೂರ್‍ನಾಲ್ಕು ಮಕ್ಕಳಿರುವ ಹೆತ್ತವರು, ಆಸ್ತಿಗಾಗಿ ಮಕ್ಕಳು ಹೊಡೆದಾಡಿಕೊಳ್ಳುವುದು ಬೇಡ. ತಾವಿರುವಾಗಲೇ ಯಾವ ಮಗುವಿಗೂ ಅನ್ಯಾಯವಾಗದಂತೆ ಆಸ್ತಿಯನ್ನು ಪಾಲು ಮಾಡಿ ಕೊಟ್ಟುಬಿಡೋಣ ಎಂಬ ಸದುದ್ದೇಶವನ್ನು ಹೊಂದಿರುತ್ತಾರೆ. ಅವರಿಗೆ ಇಳಿ ವಯಸ್ಸಿನಲ್ಲಿ ತಮ್ಮನ್ನು ನೋಡಿಕೊಳ್ಳಲು ಮಕ್ಕಳಿದ್ದಾರೆ ಎಂಬ ಅತೀ ವಿಶ್ವಾಸವಿರುತ್ತದೆ. 4 ಎಕರೆ ಕೃಷಿ ಭೂಮಿ, 1 ಎಕರೆ ತೆಂಗಿನ ತೋಟ ಹೊಂದಿದ್ದ ಅಮಾಯಕ ರೈತ ಅದನ್ನು ತನ್ನ ಮಕ್ಕಳಿಗೆ



ಸರಿ ಸಮನಾಗಿ ಪಾಲು ಮಾಡಿಕೊಟ್ಟಿದ್ದ. ತಂದೆಯ ಆಸ್ತಿಯನ್ನು ಪಡೆದುಕೊಂಡ ಮಕ್ಕಳು ಸ್ವಲ್ಪವೂ ಕೃತಜ್ಞತೆ ಇಲ್ಲದೆ ತಂದೆಯನ್ನು ಬೀದಿಗಟ್ಟಿ ಅಮಾನವೀಯತೆ ಪ್ರದರ್ಶಿಸಿದ್ದಾರೆ. ಈ ತಂದೆಯೂ ಅಷ್ಟೇ. ಮೈಸೂರಿನ ಫುಟ್‌ಪಾತ್‌ನಲ್ಲಿ ತನ್ನ ಇಳಿವಯಸ್ಸಿನಲ್ಲಿ ರಾತ್ರಿ ವೇಳೆ ಚಳಿಯಲ್ಲಿ ನಡುಗುತ್ತಾ ಮಲಗಿದ್ದಾನೆ. ಒಪ್ಪತ್ತಿನ ಊಟಕ್ಕೂ ಗತಿ ಇಲ್ಲದೇ ಈ ಅನ್ನದಾತ ● 9ನೇ ಪುಟಕ್ಕೆ

ಕಾಲೇಜು ವಿದ್ಯಾರ್ಥಿಗಳಿಗೆ ದಸರಾ ಕುರಿತು ರಸಪ್ರಶ್ನೆ ಕಾರ್ಯಕ್ರಮ



ಮೈಸೂರು,ಸೆ.14–ರೋಟರಿ ಮೈಸೂರು ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಯುಕ್ತ ಆಶ್ರಯದಲ್ಲಿ ಸೆ.30ರಂದು ಸಂಜೆ 5.30ಕ್ಕೆ ರೈಲ್ವೆ ನಿಲ್ದಾಣದ ಸಮೀಪದ ಫೋನಿಕ್ಸ್ ಇಂಟರ್ ನ್ಯಾಷನಲ್ ಸ್ಕೂಲ್‌ನಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ದಸರಾ ಕುರಿತು ರಸಪ್ರಶ್ನೆ ಕಾರ್ಯಕ್ರಮ ಏರ್ಪಡಿಸಲಾಗಿದೆ.

ರಸಪ್ರಶ್ನೆ ಸ್ಪರ್ಧೆಯು ಮೈಸೂರು ದಸರಾ ಮತ್ತು ನವರಾತ್ರಿ ಸಂಭ್ರಮವನ್ನು ಒಳಗೊಂಡಿರುತ್ತದೆ. ಪಿಯು ಪ್ರಥಮ, ದ್ವಿತೀಯ ಮತ್ತು ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಲು ಅರ್ಹರಾಗಿರುತ್ತಾರೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಸೆ.16 ಕೊನೆ ದಿನ (Link: http://forms.gle/LFEXCR7mnnX48Qmd6). ಬಹುಮಾನವಾಗಿ ರೂ. 30,000, ಸರ್ಟಿಫಿಕೇಟ್, ಗಿಫ್ಟ್ ಹ್ಯಾಂಪರ್ಸ್‌ಗಳನ್ನು ವಿಜೇತರಿಗೆ ನೀಡಲಾಗುವುದು. ಮಾಹಿತಿಗೆ ಸೋಮವಾರದಿಂದ ಶನಿವಾರದವರೆಗೆ ಪ್ರತಿದಿನ ಬೆಳಗ್ಗೆ 10.30ರಿಂದ ಸಂಜೆ 5.30ರವರೆಗೆ ದೂ.0821–4247823 ಅಥವಾ email: rotarymysore 1994@gmail.com ಸಂಪರ್ಕಿಸಬಹುದು.

ದಸರಾ ರಾಷ್ಟ್ರೀಯ ಮಟ್ಟದ 2ನೇ ವರ್ಷದ ಛಾಯಾಚಿತ್ರ ಸ್ಪರ್ಧೆ



ದಸರಾ ರಾಷ್ಟ್ರೀಯ ಮಟ್ಟದ ಛಾಯಾಚಿತ್ರ ಸ್ಪರ್ಧೆಯ ಪೋಸ್ಟರ್ ಮತ್ತು ವೆಬ್‌ಸೈಟ್ ಅನ್ನು ಉರಗ ತಜ್ಞ ಸ್ನೇಕ್ ಶಾಂ ಲೋಕಾರ್ಪಣೆಗೊಳಿಸಿದರು.

ಮೈಸೂರು, ಸೆ.14(ಜಿಎ)– ದಸರಾ ಮಹೋತ್ಸವದ ಅಂಗವಾಗಿ ಮೈಸೂರು ದಸರಾ ರಾಷ್ಟ್ರೀಯ ಮಟ್ಟದ ಎರಡನೇ ವರ್ಷದ ಛಾಯಾಚಿತ್ರ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ ಎಂದು ಸಂಯೋಜಕ ಬಿ.ಶಿವಕುಮಾರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೆ.14ರಿಂದ ಅ.26ರವರೆಗೂ ಓಪನ್ ಮೋನೋಕ್ರೋಮ್, ಓಪನ್ ಕಲರ್, ನೇಚರ್, ಫೋಟೋ ಟ್ರಾವೆಲ್ ಸೇರಿದಂತೆ ನಾಲ್ಕು ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ ಎಂದರು.

ಮೈಸೂರಿನ ಹಿರಿಯ ಹೆಸರಾಂತ ಛಾಯಾಗ್ರಾಹಕರಾದ ಎಸ್.ತಿಪ್ಪೇಸ್ವಾಮಿ, ಬೆಂಗಳೂರಿನ ಹಿರಿಯ ಛಾಯಾಗ್ರಾಹಕರಾದ ಟಿ.ಕೆಂಪಣ್ಣ, ಜಿಎಸ್.ಕೃಷ್ಣಮೂರ್ತಿ ಹಾಗೂ ಎಂ.ರಾಮು ಅವರು ತೀರ್ಪುಗಾರರಾಗಿ ಭಾಗವಹಿಸುತ್ತಾರೆ. ಈ ಸ್ಪರ್ಧೆಗೆ ಮೊದಲ 2 ವಿಭಾಗಗಳಿಗೆ 400 ರೂ., ನಂತರದ ಪ್ರತಿ ವಿಭಾಗಕ್ಕೆ 100 ರೂ. ನಿಗದಿಪಡಿಸಲಾಗಿದ್ದು, ಫೆಡರೇಶನ್ ಆಫ್ ಇಂಡಿಯನ್ ಫೋಟೋಗ್ರಫಿಯ ಪ್ರತಿ ವಿಭಾಗದಲ್ಲಿ 1 ಚಿನ್ನದ ಪದಕ ಹಾಗೂ ಓಪನ್ ಕಲರ್ ಮತ್ತು ನೇಚರ್ ವಿಭಾಗಕ್ಕೆ ತಲಾ 3 ಸಾವಿರ ರೂ. ನಗದು ಬಹುಮಾನಗಳು ನೀಡಲಾಗುತ್ತಿದ್ದು, ಇದರೊಟ್ಟಿಗೆ ಮೈಸೂರು ದಸರಾ 4 ಚಿನ್ನದ ಪದಕ, ಮೈಸೂರು ದಸರಾ 4 ಬೆಳ್ಳಿ ಪದಕ, ಮೈಸೂರು ದಸರಾ 4 ಕಂಚಿನ ಪದಕ, 20 ಎಫ್‌ಐಪಿ ರಿಬ್ಬನ್, 20 ಮೆರಿಟ್ ಸರ್ಟಿಫಿಕೇಟ್ (Digital certificate) ನೀಡಲಾಗುತ್ತದೆ ಎಂದರು. ಈ ಸ್ಪರ್ಧೆಯು ಆನ್‌ಲೈನ್‌ನಲ್ಲೇ ನಡೆಯಲಿದ್ದು, www.mysdas2023.inನಲ್ಲಿ ಲಾಗಿನ್ ಆಗುವ ಮೂಲಕ ವೆಬ್‌ಸೈಟ್‌ನಲ್ಲಿ ಹೆಚ್ಚಿನ ಮಾಹಿತಿ ಪಡೆಯಬಹುದು ಎಂದರು. ಈ ವೇಳೆ ಉರಗ ತಜ್ಞ ಸ್ನೇಕ್ ಶಾಂ ಅವರು ಸ್ಪರ್ಧೆಯ ಪೋಸ್ಟರ್ ಮತ್ತು ವೆಬ್‌ಸೈಟ್ ಲೋಕಾರ್ಪಣೆಗೊಳಿಸಿದರು. ಹಿರಿಯ ಛಾಯಾಗ್ರಾಹಕ ತಿಪ್ಪೇಸ್ವಾಮಿ, ಎಸ್.ಆರ್.ಮಧುಸೂಧನ್ ಉಪಸ್ಥಿತರಿದ್ದರು.



ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಬೆಂಗಳೂರು ಮತ್ತು ಬ್ಯಾಡ್ಮಿಂಟನ್ ಅಸೋಸಿಯೇಷನ್ ಆಫ್ ಇಂಡಿಯಾದ ಸಹಯೋಗದೊಂದಿಗೆ ಯೋನೆಕ್ಸ್ ಸನ್‌ರೈಸ್ 46ನೇ ಅಂತರರಾಜ್ಯ ವಲಯ ಜೂನಿಯರ್ ನ್ಯಾಷನಲ್ ಚಾಂಪಿಯನ್‌ಷಿಪ್ 2023 ಕ್ರೀಡಾಕೂಟವು ಇತ್ತೀಚೆಗೆ ಬೆಂಗಳೂರಿನ ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್‌ನಲ್ಲಿ ಆಯೋಜನೆಗೊಂಡಿದ್ದು, 19 ವರ್ಷದೊಳಗಿನ ಗರ್ಲ್ಸ್ ಡಬಲ್ಸ್‌ನಲ್ಲಿ ಮೈಸೂರು ರಾಜರಾಜೇಶ್ವರಿನಗರದ ನಿವಾಸಿ ಹಾಗೂ ಶಾರದಾ ವಿಲಾಸ ಶಾಲೆಯ ವಿದ್ಯಾರ್ಥಿ ಆರಾಧನಾ ಬಾಲಚಂದ್ರ ಮತ್ತು ಕಾರ್ಣಿಕಶ್ರೀ ತೃತೀಯ ಸ್ಥಾನದೊಂದಿಗೆ ಕಂಚಿನ ಪದಕವನ್ನು ಪಡೆದಿದ್ದಾರೆ.

ಇಂದು ವಿದುಷಿ ಮಹತಿ ರಘುರಾಂ, ವಿದುಷಿ ವಿಪಂಚಿ ರಘುರಾಂ ದ್ವಂದ್ವಗಾಯನ



ಮೈಸೂರು, ಸೆ.14–ಮೈಸೂರಿನ ಶ್ರೀ ಶಾರದಾ ಪ್ರತಿಷ್ಠಾನ ಟ್ರಸ್ಟ್ ವತಿಯಿಂದ ವಿದ್ವಾನ್ ಮೈಸೂರು ಜಿ.ಸುಬ್ರಮಣ್ಯಕುಮಾರ್ ಅವರ 48ನೇ ಹುಟ್ಟುಹಬ್ಬದ ಅಂಗವಾಗಿ ಶುಕ್ರವಾರ (ಸೆ.15) ಜಯನಗರದ 16ನೇ ಕ್ರಾಸ್‌ನಲ್ಲಿರುವ ಶ್ರೀರಾಮ ಮಂದಿರದಲ್ಲಿ ಸಂಜೆ 6.30ರಿಂದ ವಿದುಷಿ ಮಹತಿ ರಘುರಾಂ ಮತ್ತು ವಿದುಷಿ ವಿಪಂಚಿ ರಘುರಾಂ ಅವರಿಂದ ದ್ವಂದ್ವಗಾಯನ ಏರ್ಪಡಿಸಲಾಗಿದೆ. ಪಕ್ಕವಾದ್ಯದಲ್ಲಿ ಕು. ಪೃಥ್ವಿ ಭಾಸ್ಕರ್ (ವಯೋಲಿನ್), ವಿದ್ವಾನ್ ಎ.ರಾಧೇಶ್ (ಮೃದಂಗ), ವಿದ್ವಾನ್ ಮಂಜುನಾಥ್ (ಘಟಂ), ವಿದ್ವಾನ್ ರಮೇಶ್ (ಮೋರ್ಚಿಂಗ್) ಸಹಕಾರ ನೀಡಲಿದ್ದಾರೆ.

ನಾಳೆ ಮೈಸೂರಲ್ಲಿ ಶ್ರೀ ಶರಣ ನುಲಿಯ ಚಂದಯ್ಯ ಜಯಂತ್ಯುತ್ಸವ ಆಚರಣೆ



ಮೈಸೂರು,ಸೆ.14(ಜಿಎ)–ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಶ್ರೀ ಶರಣ ನುಲಿಯ ಚಂದಯ್ಯ ಜಯಂತಿ ಆಚರಣಾ ಸಮಿತಿ ವತಿಯಿಂದ ಶ್ರೀ ಶರಣ ನುಲಿಯ ಚಂದಯ್ಯ ಅವರ ಜಯಂತ್ಯುತ್ಸವನ್ನು ಸೆ.16ರಂದು ಮೈಸೂರಿನ ಕಲಾಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ಜಯಂತ್ಯುತ್ಸವ ಆಚರಣಾ ಸಮಿತಿ ಕಾರ್ಯದರ್ಶಿ ಮೋಹನರಾಜ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮಧ್ಯಾಹ್ನ 12ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಜಯಂತ್ಯುತ್ಸವನ್ನು ಉದ್ಘಾಟಿಸಲಿದ್ದಾರೆ. ಸಚಿವ ಕೆ.ವೆಂಕಟೇಶ್ ಸೇರಿದಂತೆ ಜಿಲ್ಲೆಯ ಎಲ್ಲಾ ಶಾಸಕರು ಭಾಗವಹಿಸಲಿದ್ದಾರೆ ಎಂದರು.

ಸಭಾ ಕಾರ್ಯಕ್ರಮಕ್ಕೂ ಮುನ್ನ ಬೆಳಗ್ಗೆ 10.30ಕ್ಕೆ ಕೋಟೆ ಆಂಜನೇಯ ದೇವಸ್ಥಾನದಿಂದ ವಿವಿಧ ಕಲಾ ತಂಡಗಳಿಂದ ನುಲಿಯ ಚಂದಯ್ಯ ಅವರ ಭಾವಚಿತ್ರವನ್ನು ಬೆಳ್ಳಿ ರಥದಲ್ಲಿ ಮೆರವಣಿಗೆ ಮಾಡಲಾಗುತ್ತದೆ ಎಂದರು. ಚಂದಯ್ಯ ಅವರು ಕೊರಮ, ಕೊರಚ ಸಮುದಾಯಗಳ ಆರಾಧ್ಯ ದೈವವಾಗಿದ್ದು, 12ನೇ ಶತಮಾನದಲ್ಲಿ ಬಸವಣ್ಣ ಅವರ ಜೊತೆ ದಾಸೋಹದಲ್ಲಿ ಜೊತೆಯಾಗಿದ್ದವರು. ಬಸವಣ್ಣ ವಿಚಾರಗಳಿಗೆ ಒಪ್ಪಿ ಬಸವಣ್ಣ ಅವರ ಅನುಭವ ಮಂಟಪದಲ್ಲಿ ಪಾಲ್ಗೊಂಡಿದ್ದರು ಎಂದರು.

ಸುದ್ದಿಗೋಷ್ಠಿಯಲ್ಲಿ ಕೊರಮ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷ ಕೃಷ್ಣಶೆಟ್ಟಿ, ಶಂಕರ್, ರವಿಕುಮಾರ್, ಬಾಲರಾಜ್, ಮಹದೇವ ಉಪಸ್ಥಿತರಿದ್ದರು.

ಕೇರಳದಲ್ಲಿ ನಿಫಾ ಹಾವಳಿ: ಗಡಿಯಲ್ಲಿ ಕಟ್ಟೆಚ್ಚರ

● ರಾಜ್ಯ ಪ್ರವೇಶಿಸುವವರಿಗೆ ಥರ್ಮಲ್ ಸ್ಕ್ರೀನಿಂಗ್ ● ಹೆಚ್.ಡಿ.ಕೋಟೆಯ ಬಾವಲಿ ಚೆಕ್‌ಪೋಸ್ಟ್‌ನಲ್ಲಿ ಹೈ ಅಲರ್ಟ್ ● ಗಡಿ ಭಾಗದ ಹಾಡಿ, ಗ್ರಾಮಗಳಲ್ಲಿ ಆರೋಗ್ಯ ಕಾರ್ಯಕರ್ತರಿಂದ ಜಾಗೃತಿ





ಹೆಚ್.ಡಿ.ಕೋಟೆಯ ಗಡಿಭಾಗದ ಬಾವಲಿ ಚೆಕ್‌ಪೋಸ್ಟ್‌ಗೆ ಅಧಿಕಾರಿ ತಂಡ ಭೇಟಿ ನೀಡಿ, ಪರಿಶೀಲಿಸುತ್ತಿರುವುದು.

ಮೈಸೂರು,ಸೆ.14(ಎಂಟಿವೈ)–ಕೇರಳದ ವೈಯ್ನಾಡು ಹಾಗೂ ಕೋಝಿಕೋಡ್ ಭಾಗದಲ್ಲಿ ನಿಫಾ ವೈರಸ್ ಹಾವಳಿ ಹೆಚ್ಚಾಗಿ ಆತಂಕ ಸೃಷ್ಟಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ–ಕೇರಳ ಗಡಿಯಲ್ಲಿ ತೀವ್ರ ಕಟ್ಟೆಚ್ಚರ ವಹಿಸಲಾಗಿದ್ದು, ಕೇರಳದಿಂದ ಕರ್ನಾಟಕ ಪ್ರವೇಶಿಸುವವರನ್ನು ಥರ್ಮಲ್ ಸ್ಕ್ರೀನಿಂಗ್‌ಗೆ ಒಳಪಡಿಸಲು ಕ್ರಮ ಕೈಗೊಳ್ಳಲಾಗಿದೆ.

ಕೇರಳದಲ್ಲಿ ಈಗಾಗಲೇ ನಿಫಾ ವೈರಸ್‌ನಿಂದಾಗಿ ಇಬ್ಬರು ಮೃತಪಟ್ಟಿದ್ದು, ಆರೋಗ್ಯ ಕಾರ್ಯಕರ್ತರೊಬ್ಬರು ಸೇರಿದಂತೆ ಐವರಲ್ಲಿ ಸೋಂಕು ದೃಢಪಟ್ಟಿರುವ ಹಿನ್ನೆಲೆಯಲ್ಲಿ ಹೆಚ್.ಡಿ.ಕೋಟೆ ತಾಲೂಕಿನ ಗಡಿಭಾಗದಲ್ಲಿರುವ ಹಾಡಿ ಹಾಗೂ ಗ್ರಾಮ ಸೇರಿದಂತೆ 13 ಗ್ರಾಮಗಳಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.

ವಾಹನ ಸವಾರರ ಮೇಲೆ ಕಣ್ಣು: ಕೇರಳದಿಂದ ಕರ್ನಾಟಕಕ್ಕೆ ಬರುವ ವಾಹನ ಸವಾರರು, ಪ್ರಯಾಣಿಕರು, ಪ್ರವಾಸಿಗರನ್ನು ಥರ್ಮಲ್ ಸ್ಕ್ರೀನಿಂಗ್‌ಗೆ ಒಳಪಡಿಸಲಾಗುತ್ತಿದೆ. ಹೆಚ್.ಡಿ.ಕೋಟೆ ತಾಲೂಕು ಆರೋಗ್ಯ ಸಿಬ್ಬಂದಿ, ಅರಣ್ಯ ಇಲಾಖೆ ಸಿಬ್ಬಂದಿ, ಪೊಲೀಸ್, ಆಶಾ ಕಾರ್ಯಕರ್ತೆಯರನ್ನೊಳಗೊಂಡ ತಂಡವನ್ನು ಚೆಕ್‌ಪೋಸ್ಟ್‌ನಲ್ಲಿ ನಿಯೋಜಿಸಿದ್ದು, ಮೈಸೂರು ಕಡೆ ಬರುವ ಎಲ್ಲಾ ವಾಹನವನ್ನು ತಡೆದು ಪ್ರಯಾಣಿಕರನ್ನು ತಪಾಸಣೆ ಮಾಡಲಾಗುತ್ತಿದೆ. ಯಾರಿಗಾದರು ಜ್ವರದ ಲಕ್ಷಣ ಕಂಡು ಬಂದರೆ ವಾಪಸ್ಸು ಕಳುಹಿಸುವುದರೊಂದಿಗೆ ಅವರ ಟ್ರಾವೆಲ್ ಹಿಸ್ಟರಿ ಹಾಗೂ ವಿಳಾಸ ದಾಖಲಿಸಲಾಗುತ್ತಿದೆ.

ಹರಡುವ ವಿಧಾನ: ಸೋಂಕಿತ ಬಾವಲಿಗಳ ನೇರ ಸಂಪರ್ಕದಿಂದ ಹಾಗೂ ಬಾವಲಿಗಳು ತಿಂದು ಬಿಸಾಡಿದ ಹಣ್ಣನ್ನು ಸೇವಿಸುವುದರ ಮೂಲಕ ಇತರ ಪ್ರಾಣಿಗಳಿಗೆ ಹರಡುತ್ತದೆ. ಸೋಂಕಿತ ಪ್ರಾಣಿಗಳಿಂದ ಇತರ ಪ್ರಾಣಿಗಳಿಗೆ ಮಲ, ಮೂತ್ರ, ಜೊಲ್ಲು ಮತ್ತು ರಕ್ತ ಇವುಗಳ ನೇರ ಸಂಪರ್ಕದಿಂದ ಹರಡುತ್ತದೆ. ಸೋಂಕಿತ ಬಾವಲಿಗಳು ಕಚ್ಚಿದ ಹಣ್ಣುಗಳನ್ನು ಸೇವಿಸುವುದರಿಂದ ಮನುಷ್ಯರಿಗೂ ಹರಡುತ್ತದೆ. ಸೋಂಕಿತ ಪ್ರಾಣಿಯ ಮಲ, ಮೂತ್ರ, ಜೊಲ್ಲು ಮತ್ತು ರಕ್ತ ಇವುಗಳ ನೇರ ಸಂಪರ್ಕದಿಂದಲೂ ಸಹ ಮನುಷ್ಯರಿಗೆ ಹರಡುತ್ತದೆ. ಸೋಂಕಿತ ಮನುಷ್ಯನ ಮಲ, ಮೂತ್ರ, ಜೊಲ್ಲು ಮತ್ತು ರಕ್ತ ಇವುಗಳ ನೇರ ಸಂಪರ್ಕದಿಂದ ಆರೋಗ್ಯವಂತ ಮನುಷ್ಯರಿಗೆ ಹರಡುತ್ತದೆ.

ಬಾವಲಿ ಚೆಕ್‌ಪೋಸ್ಟ್‌ಗೆ ಅಧಿಕಾರಿಗಳ ತಂಡ ಭೇಟಿ: ಹೆಚ್.ಡಿ.ಕೋಟೆ ತಾಲೂಕಿನ ಗಡಿ ಭಾಗವಾದ ಬಾವಲಿ ಚೆಕ್‌ಪೋಸ್ಟ್‌ಗೆ ಹೆಚ್.ಡಿ.ಕೋಟೆ ತಹಶೀಲ್ದಾರ್ ಸಣ್ಣ ರಾಮಪ್ಪ, ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್ ಇನ್ನಿತರರು ಇದ್ದ ತಂಡ ಭೇಟಿ ನೀಡಿ, ಪರಿಶೀಲಿಸಿತು.

ಇದೇ ವೇಳೆ ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್ ಮಾತನಾಡಿ, ಜನರು ಪಕ್ಷಿಗಳು ಮತ್ತು ಪ್ರಾಣಿಗಳು ಕಚ್ಚಿದ ಹಣ್ಣುಗಳನ್ನು ಸೇವಿಸಬಾರದು. ಬಾವಲಿಗಳು ಹೆಚ್ಚಾಗಿರುವ ಪ್ರದೇಶಗಳಿಂದ ಸಂಗ್ರಹಿಸಿದ ಸೇಂದಿ, ನೀರಾ ಕುಡಿಯಬಾರದು. ತಾಜಾ ತಾಳೆ ಹಣ್ಣಿನ ರಸವನ್ನು ಸೇವಿಸಬಾರದು. ಹಣ್ಣು ಮತ್ತು ಒಣ ಖರ್ಜೂರ ಇವುಗಳನ್ನು ಸೇವಿಸುವ ಮೊದಲು ಸಂಪೂರ್ಣವಾಗಿ ಶುದ್ಧೀಕರಿಸಬೇಕು. ಅನಾರೋಗ್ಯದ ಹಂದಿಗಳನ್ನು ಮತ್ತು ಪ್ರಾಣಿಗಳೊಂದಿಗೆ ನೇರ ಸಂಪರ್ಕವನ್ನು ತಪ್ಪಿಸುವುದು. ಬಾವಲಿಗಳ ಪ್ರದೇಶವನ್ನು ತಪ್ಪಿಸಲು ತೆರೆದ ಬಾವಿಗಳಿಗೆ ಜಾಲರಿಯನ್ನು ಅಳವಡಿಸುವುದು. ಕೈಗಳನ್ನು ಸಂಪೂರ್ಣವಾಗಿ ಶುದ್ಧೀಕರಿಸುವುದು ತಡೆಗಟ್ಟುವಿಕೆಯ ಬಹುಮುಖ್ಯ ಕ್ರಮವಾಗಿರುತ್ತದೆ ಎಂದು ಹೇಳಿದರು.

ಇದೇ ವೇಳೆ ತಹಶೀಲ್ದಾರ್ ಸಣ್ಣ ರಾಮಪ್ಪ ಮಾತನಾಡಿ, ನಮ್ಮಲ್ಲಿ ಇದುವರೆಗೂ ನಿಫಾ ವೈರಾಣುವಿನ ಪ್ರಕರಣಗಳು ವರದಿ ಆಗಿಲ್ಲ. ಜನ ಆತಂಕ ಪಡುವುದಕ್ಕಿಂತ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು. ಆರೋಗ್ಯ ಇಲಾಖೆಯ ಮಾರ್ಗಸೂಚಿ ಅನುಸರಿಸಬೇಕು. ಅನಾರೋಗ್ಯದ ಲಕ್ಷಣ ಕಂಡು ಬಂದರೆ ತಪಾಸಣೆ ಮಾಡಿಸಿಕೊಳ್ಳಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಡಿಬಿ ಕುಪ್ಪೆ ಆರ್‌ಎಫ್‌ಓ ಮಧು, ಉಪತಹಶೀಲ್ದಾರ್ ತನುರಾಜ್, ವೈದ್ಯಾಧಿಕಾರಿ ಡಾ.ವರ್ಷ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಚಂದ್ರು, ರವಿರಾಜ್, ಅಶೋಕ್, ಕೃಷ್ಣ, ಆರ್‌ಐ ಗೋವಿಂದರಾಜು, ವಿಎ ಗೌಸ್ ಮೋದಿನ್, ನಾಗರಾಜು, ಪೊಲೀಸ್ ಇಲಾಖೆ ಸೋಮೇಶ್, ಅರಣ್ಯ ಇಲಾಖೆ ಸಿಬ್ಬಂದಿ ಪ್ರಕಾಶ್ ಜಾಧವ್, ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

ಏನದು ನಿಫಾ

ನಿಫಾ ಎನ್ಸಫೈಲೆಟೀಸ್ ಎಂದು ಕರೆಯಲ್ಪಡುವ ಈ ವೈರಸ್ 1998ರಲ್ಲಿ ಮಲೇಶಿಯದ ನಿಫಾ ಎಂಬಲ್ಲಿ ಮೊದಲ ಬಾರಿಗೆ ಕಂಡು ಬಂದಿದೆ. ಮೆದುಳು ಮತ್ತು ಹೃದಯವನ್ನು ಘಾಸಿಗೊಳಿಸಿ ಜೀವಕ್ಕೆ ಅಪಾಯವನ್ನುಂಟು ಮಾಡುವ ವೈರಸ್ ಇದಾಗಿದೆ. ಇದು 2011ರಲ್ಲಿ ಬಾಂಗ್ಲಾದೇಶದಲ್ಲಿ ಹರಡಿತ್ತು. ಈಗ ಮಲೇಶಿಯಾ, ಸಿಂಗಾಪುರ, ಬಾಂಗ್ಲಾದೇಶ, ನೆರೆಯ ರಾಜ್ಯ ಕೇರಳದಲ್ಲಿ ಈ ಸೋಂಕು ಪತ್ತೆಯಾಗಿದೆ. ಈ ವೈರಸ್ ಬಾವಲಿ, ಹಂದಿ, ನಾಯಿ, ಕುರಿ, ಬೆಕ್ಕು ಹಾಗೂ ಮನುಷ್ಯರಿಗೆ ಬಾಧಿಸುತ್ತದೆ.

ವೈರಾಣುವಿನ ಲಕ್ಷಣ

ಮನುಷ್ಯರಲ್ಲಿ ಜ್ವರ, ತಲೆನೋವು, ಮೈ–ಕೈ ನೋವು, ವಾಂತಿ, ನಡುಕ, ನಿದ್ರಾಲಸ್ಯ, ತೊದಲುವಿಕೆ, ತಲೆ ಸುತ್ತುವಿಕೆ, ದಿಗ್ಭ್ರಮೆ, ಮಾನಸಿಕ ಗೊಂದಲ, ಜ್ಞಾನ ತಪ್ಪುವುದು. ನಂತರ ಸಾವು ಸಂಭವಿಸಬಹುದು. ಪ್ರಾಣಿಗಳಲ್ಲಿ, ಹಂದಿಗಳಲ್ಲಿ ಉಸಿರಾಟದ ತೊಂದರೆ ನರದೌರ್ಬಲ್ಯ ಉಂಟಾಗುತ್ತದೆ.

ಮೈಸೂರಿನ ಟೌನ್‌ಹಾಲ್ ಕಾರ್ ಪಾರ್ಕಿಂಗ್ 10 ದಿನದಲ್ಲಿ ಸೇವೆಗೆ ಮುಕ್ತ



ಮೈಸೂರು, ಸೆ.14(ಬಿಎಲ್‌ಯು)– ಮೈಸೂರಿನ ಟೌನ್‌ಹಾಲ್ ಆವರಣದಲ್ಲಿ ನಗರಪಾಲಿಕೆ ವತಿಯಿಂದ ನಿರ್ಮಾಣ ಮಾಡಿರುವ ಕಾರ್ ಪಾರ್ಕಿಂಗ್ ಅನ್ನು ಇನ್ನು ಹತ್ತು ದಿನದಲ್ಲಿ ಸಾರ್ವಜನಿಕರ ಸೌಕರ್ಯಕ್ಕೆ ಮುಕ್ತಗೊಳಿಸಲು ತೀರ್ಮಾನ ಮಾಡಲಾಗಿದೆ.

ಮೇಯರ್ ಶಿವಕುಮಾರ್ ನೇತೃತ್ವದಲ್ಲಿ ಗುರುವಾರ ನಗರಪಾಲಿಕೆಯ ಅಧಿಕಾರಿಗಳು ಕಾರ್ ಪಾರ್ಕಿಂಗ್ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಕಾರ್ ಪಾರ್ಕಿಂಗ್ ಪಕ್ಕದಲ್ಲಿ ಹಾದು ಹೋಗಿರುವ ವಿದ್ಯುತ್ ಮಾರ್ಗ ಹಾಗೂ ಟ್ರಾನ್ಸ್‌ಫಾರ್ಮರ್ ಅನ್ನು ಮೂರ್ನಾಲ್ಕು ದಿನದಲ್ಲಿ ತೆರವುಗೊಳಿಸಲು ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರ ಜೊತೆ ಶಿವಕುಮಾರ್ ಮಾತುಕತೆ ನಡೆಸಿದರು. ಈ ಕಾರ್ಯವನ್ನು ನಾಡಿದ್ದಿನಿಂದ ಆರಂಭಿಸುವುದಾಗಿ ಚೆಸ್ಕಾಂ ಅಧಿಕಾರಿಗಳು ಭರವಸೆ ನೀಡಿದರು.

ಕಾರ್ ಪಾರ್ಕಿಂಗ್ ಬಳಿ ನೀರಿನ ವಸ್ತಿ ಇರುವ ಹಿನ್ನೆಲೆಯಲ್ಲಿ ಪ್ರತ್ಯೇಕ ಮೋರಿ ನಿರ್ಮಾಣ ಮಾಡುವಂತೆಯೂ ಶಿವಕುಮಾರ್ ಅಧಿಕಾರಿಗಳಿಗೆ ಸೂಚಿಸಿದರು. ಟೌನ್‌ಹಾಲ್ ಆವರಣದಲ್ಲಿರುವ ತೆರೆದ ರಂಗಮಂದಿರ ಹಾಗೂ ಉದ್ಯಾನವನವನ್ನು ವಾರದೊಳಗೆ ಸ್ವಚ್ಛಗೊಳಿಸಿ ಸಾರ್ವಜನಿಕರ ಪ್ರವೇಶಕ್ಕೆ ಮುಕ್ತಗೊಳಿಸುವಂತೆಯೂ ಈ ವೇಳೆ ಶಿವಕುಮಾರ್ ಅಧಿಕಾರಿಗಳಿಗೆ ತಾಕೀತು ಮಾಡಿದರು. 'ಪಾಲಿಕೆ ಎಕ್ಸಿಕ್ಯೂಟಿವ್ ಇಂಜಿನಿಯರ್ ನಾಗರಾಜು, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಮೋಹನ್ ಇನ್ನಿತರರು ಹಾಜರಿದ್ದರು.

ಸಿಎಂ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣರಿಗೆ ನಾಳೆ ಅಭಿನಂದನೆ





ಎ.ಎಸ್.ಪೊನ್ನಣ್ಣ

ಮೈಸೂರು,ಸೆ.14(ಜಿಎ)–ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಕಾನೂನು ಘಟಕದ ವತಿಯಿಂದ ಶಾಸಕ ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ಎ.ಎಸ್ ಪೊನ್ನಣ್ಣ ಅವರಿಗೆ ಅಭಿನಂದನೆ ಹಾಗೂ ಕಾನೂನು ಘಟಕದ ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ಸೆ.16ರಂದು ನಗರದ ಇಂದಿರಾಗಾಂಧಿ ಕಾಂಗ್ರೆಸ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಘಟಕದ ಅಧ್ಯಕ್ಷ ತಿಮ್ಮಯ್ಯ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮಧ್ಯಾಹ್ನ 3 ಗಂಟೆಗೆ ಸಮಾರಂಭವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಉದ್ಘಾಟಿಸುವರು. ಮುಖ್ಯ ಅತಿಥಿಯಾಗಿ ಪಶುಸಂಗೋಪನ ಸಚಿವ ಕೆ.ವೆಂಕಟೇಶ್ ಆಗಮಿಸಲಿದ್ದು, ಡಾ.ಬಿ.ಜೆ.ವಿಜಯಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಸಮಾರಂಭದ ವಿಶೇಷ ಆಹ್ವಾನಿತರಾಗಿ ಜಿಲ್ಲೆಯ ಕಾಂಗ್ರೆಸ್ ಶಾಸಕರಾದ ಅನಿಲ್ ಚಿಕ್ಕಮಾದು, ಡಿ.ರವಿಶಂಕರ್, ಡಾ.ಮಂಥರ್ ಗೌಡ, ದರ್ಶನ್ ಧ್ರುವನಾರಾಯಣ್ ಹಾಗೂ ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ ಸೇರಿದಂತೆ ಇತರರು ಆಗಮಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಘಟಕದ ರಾಜ್ಯ ಕಾರ್ಯದರ್ಶಿ ಕೆ.ಗಂಗಾಧರ್, ಉಪಾಧ್ಯಕ್ಷ ಸುರೇಶ್ ಪಾಳ್ಯ, ಪ್ರಧಾನ ಕಾರ್ಯದರ್ಶಿ ಕಾಂತರಾಜ್, ಮಂಜುನಾಥ್, ಪುಟ್ಟರಸ ಉಪಸ್ಥಿತರಿದ್ದರು.

ನೀರಿನ ಮಟ್ಟ

ಕೆಆರ್‌ಎಸ್ ಅಣೆಕಟ್ಟು	ಕಬಿನಿ ಅಣೆಕಟ್ಟು	ಹಾರಂಗಿ ಅಣೆಕಟ್ಟು
ಗರಿಷ್ಠ ಮಟ್ಟ 124.80 ಅಡಿ	ಗರಿಷ್ಠ ಮಟ್ಟ 2284.00 ಅಡಿ	ಗರಿಷ್ಠ ಮಟ್ಟ 2859.00 ಅಡಿ
ಇಂದಿನ ಮಟ್ಟ 97.52 ಅಡಿ	ಇಂದಿನ ಮಟ್ಟ 2776.08 ಅಡಿ	ಇಂದಿನ ಮಟ್ಟ 2858.38 ಅಡಿ
ಹಿಂದಿನ ವರ್ಷದ ಮಟ್ಟ 124.62 ಅಡಿ	ಹಿಂದಿನ ವರ್ಷದ ಮಟ್ಟ 2283.40 ಅಡಿ	ಹಿಂದಿನ ವರ್ಷದ ಮಟ್ಟ 2858.02 ಅಡಿ
ನಿನ್ನೆಯ ಮಟ್ಟ 97.74 ಅಡಿ	ನಿನ್ನೆಯ ಮಟ್ಟ 2776.08 ಅಡಿ	ನಿನ್ನೆಯ ಮಟ್ಟ 2858.52 ಅಡಿ

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.9.2023 ಶುಕ್ರವಾರ, ಮಳೆ ನಕ್ಷತ್ರ: ಉತ್ತರಾ 14.09.2023ರಿಂದ 27.09.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಭಾದ್ರಪದ ಮಾಸ,
ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಉತ್ತರಾ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಶ್ರೀ ಕಲಾನಿಕೇತನ ಕಾಲೇಜ್ ಆಫ್ ವಿಷುಯಲ್ ಆರ್ಟ್:** ಎಂ.ಎಲ್.ಪವನ್‌ಕುಮಾರ್ ಅವರಿಂದ ಸ್ಥಿರ ಚಿತ್ರಣ ಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ಬೆಳಗ್ಗೆ 10ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ ಮತ್ತು ಮಹಿಳೆಯರಲ್ಲಿ ಋತುಬಂಧ ಸಮಸ್ಯೆಗಳು ಕುರಿತು ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆಯಿಂದ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು, ರಾಜ್ಯಶಾಸ್ತ್ರ ವಿಭಾಗ ಮತ್ತು ರಾಷ್ಟ್ರೀಯ ಸೇವಾ ಯೋಜನೆ:** ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನ, ಸಂವಿಧಾನ ಓದು ಕಾರ್ಯಕ್ರಮ, ದಿವ್ಯ ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮಿಗಳು, ಉದ್ಘಾಟನೆ ಮತ್ತು ಸಂವಿಧಾನ ಪೀಠಿಕೆ ಬೋಧನೆ: ಮೈಸೂರು ಹಿರಿಯ ವಿಶ್ರಾಂತ ರಾಜ್ಯಶಾಸ್ತ್ರ ಪ್ರಾಧ್ಯಾಪಕ ಪ್ರೊ.ಎಂ.ಉಮಾಪತಿ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 10.45ಕ್ಕೆ

■ **ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್:** ಸಾಧನಾ ಸಮಾವೇಶ ಹಾಗೂ ವರಮಹಾಲಕ್ಷ್ಮಿ ಪೂಜಾ ಕಾರ್ಯಕ್ರಮ, ಸಾನ್ನಿಧ್ಯ: ಶ್ರೀ ಕುಂದೂರು ಮಠದ ಶ್ರೀ ಶರತ್‌ಚಂದ್ರ ಸ್ವಾಮೀಜಿ, ಉದ್ಘಾಟನೆ: ಶಾಸಕ ಟಿ.ಎಸ್.ಶ್ರೀವತ್ಸ, ಅಧ್ಯಕ್ಷತೆ: ಆರ್.ಮೋಹನ್, ಮುಖ್ಯ ಅತಿಥಿಗಳು: ಮೇಯರ್ ಶಿವಕುಮಾರ್, ಟ್ರಸ್ಟ್ ಪ್ರಾದೇಶಿಕ ನಿರ್ದೇಶಕ ಬಿ. ಜಯರಾಮ ನೆಲ್ಲಿತ್ತಾಯ, ಪಾಲಿಕೆ ಸದಸ್ಯರಾದ ಮಾ.ವಿ.ರಾಮಪ್ರಸಾದ್, ಬಿ.ವಿ.ಮಂಜುನಾಥ್, ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಜಿ. ಹಂದಹಳ್ಳಿ ಸೋಮಶೇಖರ್, ಸ್ಥಳ: ರಾಜಗೋಪಾಲ್‌ರಾವ್ ರಾಶಿಂಕರ್ ಕಲ್ಯಾಣ ಮಂಟಪ, ಬೆಳಗ್ಗೆ 11ಕ್ಕೆ.

■ **ಜೀವಧಾರ ರಕ್ತನಿಧಿ ಕೇಂದ್ರ:** ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯ ಜನ್ಮ ದಿನಾಚರಣೆ, ಮುಖ್ಯ ಅತಿಥಿಗಳು: ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಎಲ್.ನಾಗೇಂದ್ರ, ಪಾಲಿಕೆ ಸದಸ್ಯ ರಮಣಿ, ಎಂ.ಡಿ.ನಾಗರಾಜ್, ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಆರ್.ರಘು ಕೌಟಿಲ್ಯ, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷ ಹೇಮಾನಂದೀಶ್, ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಸ್ಥಳ: ಸರ್ ಎಂ. ವಿಶ್ವೇಶ್ವರಯ್ಯ ವೃತ್ತ, ಕೆ.ಆರ್.ವೃತ್ತ, ನ್ಯೂ ಸಯ್ಯಾಜಿರಾವ್ ರಸ್ತೆ, ಬೆಳಗ್ಗೆ 11ಕ್ಕೆ.

■ **ಬಾಸುದೇವ ಸೋಮಾನಿ ಕಾಲೇಜು:** ಮಾದಕ ವ್ಯಸನ ದುಷ್ಪರಿಣಾಮಗಳ ಕುರಿತು ಕಾನೂನು ಅರಿವು–ನೆರವು ಕಾರ್ಯಕ್ರಮ, ಉದ್ಘಾಟನೆ: ಹಿರಿಯ ಸಿವಿಲ್ ನ್ಯಾಯಾಧೀಶ ಬಿ.ಜಿ.ದಿನೇಶ್, ಸಂಪನ್ಮೂಲ ವ್ಯಕ್ತಿ: ವಕೀಲ ಸುಂದರ್‌ರಾಜ್, ಮುಖ್ಯ ಅತಿಥಿಗಳು: ಡಾ.ಎಂ.ಪುಟ್ಟಸ್ವಾಮಿ, ಕುಬೇರ್ ಪಿ.ಗೌಡ, ಪ್ರಭಾ, ಅಧ್ಯಕ್ಷತೆ : ಕಾಲೇಜು ಪ್ರಾಂಶುಪಾಲ ಡಾ.ಎಂ.ಮಹದೇವಸ್ವಾಮಿ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 11ಕ್ಕೆ.

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು:** ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ, ಮುಖ್ಯ ಅತಿಥಿಗಳು: ಸಹಾಯಕ ಪ್ರಾಧ್ಯಾಪಕ ಪ್ರೊ.ಹೆಚ್.ಎಸ್.ಶಿವಕುಮಾರ್, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಡಾ.ಮರಿಗೌಡ, ಉಪಸ್ಥಿತರು: ಡಾ.ಬಿ.ಟಿ.ರಘು, ಸ್ಥಳ: ಪಿ.ಎಂ.ಚಿಕ್ಕಬೋರಯ್ಯ ಹಾಲ್, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ಸೇನಾಪಡೆ:** ಭಾರತದ ಭಾಗ್ಯ ವಿಧಾತ ಸರ್ ಮೋಕ್ಷ ಗುಂಡಂ ವಿಶ್ವೇಶ್ವರಯ್ಯನವರ 163ನೇ ಜಯಂತಿ ಕಾರ್ಯಕ್ರಮ, ದಿವ್ಯ ಸಾನ್ನಿಧ್ಯ: ಯೋಗ ನರಸಿಂಹಸ್ವಾಮಿ ದೇವಸ್ಥಾನ ಸಂಸ್ಥಾಪಕರಾದ ಭಾಷ್ಯಂ ಸ್ವಾಮೀಜಿ, ಪುಷ್ಪಾರ್ಚನೆ: ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಸ್ಥಳ: ಅಗ್ರಹಾರ ಸರ್ಕಲ್, ಬೆಳಗ್ಗೆ 11.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು, ರಚನೆ–ಡಾ.ಎಸ್.ವಿ. ನರಸಿಂಹನ್, ಪ್ರಸ್ತುತಿ– ಜಿ.ಶಾಂತಕುಮಾರ್, 6.40 ಪದಸಂಸ್ಕೃತಿ– ಪ್ರೊ.ವಸಂತ ಕುಷ್ಟಗಿ, 7.15 ಭಾವಗೀತೆಗಳು–ಲಕ್ಷ್ಮಿ ಮನಮೋಹನ್, 9.05 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00ಎಸ್.ಪಿ.ರಾವ್– ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್ ಎಸ್.ಎಸ್., 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.35ರಿಂದ ರಾತ್ರಿ 11 ರವರೆಗೆ–ಏಷಿಯಾ ಕಪ್ ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ

■ **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ, ಮೈಸೂರು :** ಕಿತ್ತೂರು ರಾಣಿ ಚೆನ್ನಮ್ಮ, ಬೆಳವಡಿ ಮಲ್ಲಮ್ಮ, ಕೆಳದಿ ಚನ್ನಮ್ಮ, ಅಕ್ಕ ಮಹಾದೇವಿಯವರ ವಿಚಾರಗೋಷ್ಠಿ ಹಾಗೂ ಸ್ತ್ರೀ ಶಕ್ತಿ ಪ್ರಶಸ್ತಿ ಪ್ರದಾನ ಸಮಾರಂಭ, ಸ್ಥಳ: ನಮನ ಕಲಾಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11 ಗಂಟೆಗೆ.

■ **ಟಿ.ಎಸ್.ಸುಬ್ಬಣ್ಣ ಸಾರ್ವಜನಿಕ ಪ್ರೌಢಶಾಲೆ, ವಿದ್ಯಾರಣ್ಯಪುರಂ, ಹಿರಣ್ಮಯಿ ಪ್ರತಿಷ್ಠಾನ, ಕಾವೇರಿ ಬಳಗ :** ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯನವರ ಜನುಮ ದಿನಾಚರಣೆ, ಅಧ್ಯಕ್ಷತೆ : ಮುಖ್ಯ ಶಿಕ್ಷಕ ನಟರಾಜು, ಉದ್ಘಾಟನೆ : ವಿಶ್ರಾಂತ ಇಂಜಿನಿಯರ್ ಎಸ್.ಗೋವಿಂದೇಗೌಡ, ಪ್ರಧಾನ ಭಾಷಣ: ಸಾಹಿತಿ ಬನ್ನೂರು ಕೆ. ರಾಜು, ಮುಖ್ಯ ಅತಿಥಿಗಳು : ಸಂಖ್ಯಾಶಾಸ್ತ್ರಜ್ಞ ಎಸ್.ಜಿ. ಸೀತಾರಾಂ, ಬಹುಮಾನ ವಿತರಣೆ : ಕಾವೇರಿ ಬಳಗದ ಅಧ್ಯಕ್ಷೆ ಶ್ರೀಮತಿ ಎನ್.ಕೆ. ಕಾವೇರಿಯಮ್ಮ, ಆಶಯ ನುಡಿ : ಹಿರಣ್ಮಯಿ ಪ್ರತಿಷ್ಠಾನ ಅಧ್ಯಕ್ಷ ಎ.ಸಂಗಪ್ಪ, ಸ್ಥಳ: ಟಿ.ಎಸ್. ಸುಬ್ಬಣ್ಣ ಸಾರ್ವಜನಿಕ ಪ್ರೌಢಶಾಲೆ, ವಿದ್ಯಾರಣ್ಯಪುರಂ, ಸಂಜೆ 4ಕ್ಕೆ

■ **ಸೇವಾ ಚಿಲುಮೆ ಚಾರಿಟಬಲ್ ಟ್ರಸ್ಟ್:** ಅತ್ಯುತ್ತಮ ಶಿಕ್ಷಕರ ಪ್ರಶಸ್ತಿ ಪ್ರದಾನ ಸಮಾರಂಭ, ಸ್ಥಳ: ಉತ್ತಮ್ ಹಾಲ್, ಎನ್.ಆರ್.ಮೊಹಲ್ಲಾ, ಸಂಜೆ 5 ಗಂಟೆಗೆ.

■ **ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಇಂಜಿನಿಯರ್ಸ್ ಡೇ, ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯ ಜನುಮ ದಿನಾಚರಣೆ, ಮುಖ್ಯ ಅತಿಥಿಗಳು : ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಗೌರವ ಅತಿಥಿಗಳು : ಲೇಖಕ ಹೆಚ್.ಎಸ್. ಶ್ರೀನಾಥ್, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಸ್ಥಳ: ಎಸ್.ಪಿ. ಭಟ್ ಹಾಲ್, ಸಂಜೆ 5.30ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ:** 19ನೇ ವರ್ಷದ ದಸರೆಯ ಬೊಂಬೆ ಪ್ರದರ್ಶನ, ಉದ್ಘಾಟನೆ: ಹಿರಿಯ ಕಲಾವಿದರಾದ ಪ್ರೊ.ಎಂ.ಜೆ.ಕಮಲಾಕ್ಷಿ, ವಿಶೇಷ ಅಂಕಣದ ಉದ್ಘಾಟನೆ: ಕ್ರಾಫ್ಟ್ ಕೌನ್ಸಿಲ್ ಆಫ್ ಕರ್ನಾಟಕದ ಅಧ್ಯಕ್ಷೆ ಶ್ರೀಮತಿ ಮಂಗಳಾ ನರಸಿಂಹನ್, ಸ್ಥಳ: ರಾಮ್ ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಸಂಜೆ 5.30ರವರೆಗೆ

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ):** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ ಸಮಾರೋಪ ಸಮಾರಂಭ, ಸಮ್ಮುಖ : ಗವಿಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ಅಧ್ಯಕ್ಷತೆ : ನಗರ ಉಪ ಪೊಲೀಸ್ ಆಯುಕ್ತ ಎಂ. ಮುತ್ತುರಾಜ್, ಸಮಾರೋಪ ಭಾಷಣ : ಮೈಸೂರು ಜಿಲ್ಲಾ ಅಪರ ಜಿಲ್ಲಾಧಿಕಾರಿ ಪಿ. ಶಿವರಾಜು, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30ಕ್ಕೆ.

■ **ಶ್ರೀ ಶಾರದಾ ಪ್ರತಿಷ್ಠಾನ ಟ್ರಸ್ಟ್ :** ವಿದ್ವಾನ್ ಮೈಸೂರು ಜಿ. ಸುಬ್ರಮಣ್ಯಕುಮಾರ್ ಅವರ 48ನೇ ಹುಟ್ಟುಹಬ್ಬದ ಅಂಗವಾಗಿ ವಿದುಷಿ ಮಹತಿ ರಘುರಾಂ ಮತ್ತು ವಿದುಷಿ ವಿಪಂಚಿ ರಘುರಾಮ್ ಅವರಿಂದ ದ್ವಂದ್ವಗಾಯನ, ಕು. ಪೃಥ್ವಿ ಭಾಸ್ಕರ್ (ವಯೋಲಿನ್), ವಿದ್ವಾನ್ ಎ. ರಾಧೇಶ್ (ಮೃದಂಗ), ವಿದ್ವಾನ್ ಎಸ್. ಮಂಜುನಾಥ್ (ಘಟಂ) ಮತ್ತು ವಿದ್ವಾನ್ ವಿ.ಎಸ್. ರಮೇಶ್ (ಮೋರ್ಚಿಂಗ್), ಸ್ಥಳ: ಜಯನಗರದ 16ನೇ ಕ್ರಾಸ್‌ನಲ್ಲಿರುವ ಶ್ರೀರಾಮ ಮಂದಿರ, ಸಂಜೆ 6.30 ರಿಂದ.

■ **ಶ್ರೀ ಉತ್ತರಾದಿ ಮಠ, ರೋಗ ಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀ ಪಾದಂಗಳವರ ಆಜ್ಞೆ ಹಾಗೂ ಅನುಗ್ರಹದಿಂದ ಶ್ರೀ ಧನ್ವಂತರಿ ಜಯಂತಿ ಪ್ರಯುಕ್ತ ಸಪ್ತ ರಾತ್ರೋತ್ಸವ, ಬೆಳಗ್ಗೆ ಶ್ರೀ ಧನ್ವಂತರಿ ದೇವರಿಗೆ ಮೋಹಿನಿ ಅಲಂಕಾರ, ಸಂಜೆ ಚಂದ್ರ ವಾಹನೋತ್ಸವ, ಶ್ರೀಮದ್ಭಾಗವತ ಸಪ್ತಾಹ ಪ್ರವಚನ, ಪಂಡಿತ್ ವ್ಯಾಸನಕೆರೆ ಪ್ರಭಂಜನಾಚಾರ್ಯ ಅವರಿಂದ ಪ್ರವಚನ, ಸ್ಥಳ: ರೋಗ ಮೋಚನ ಶ್ರೀ ಧನ್ವಂತರಿ ಸನ್ನಿದನ, ಉತ್ತರಾದಿ ಮಠ, ಸಂಜೆ 7 ರಿಂದ.

ಭಾರತದಲ್ಲಿ ಪ್ರತಿ 40 ಸೆಕೆಂಡ್‌ಗೆ ಒಬ್ಬರು ಆತ್ಮಹತ್ಯೆಗೆ ಶರಣು!

■ ಬಾಪುಲಿಂಗರಾಜ್ ಅರಸ್

- ಆತ್ಮಹತ್ಯೆ ಮಾಡಿಕೊಳ್ಳುವವರಲ್ಲಿ ಕರ್ನಾಟಕಕ್ಕೆ 5ನೇ ಸ್ಥಾನ
- ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ಅಂಕಿ-ಅಂಶ ಬಿಡುಗಡೆ
- ಸೋಷಿಯಲ್ ಮೀಡಿಯಾದಿಂದ ಅಧಿಕ ಖಿನ್ನತೆ
- ಪ್ರೀತಿ ವಿಚಾರದಲ್ಲಿ ಶೇಕಡ 3.3ರಷ್ಟು ಜನರು ಆತ್ಮಹತ್ಯೆ
- 15ರಿಂದ 24 ವಯೋಮಾನದವರೇ ಹೆಚ್ಚು ಮಂದಿ
- ಮಹಿಳೆಯರಿಗಿಂತ ಅಧಿಕ ಪ್ರಮಾಣದಲ್ಲಿ ಪುರುಷರು ಸ್ವಹತ್ಯೆ

ಮೈಸೂರು,ಸೆ.14–ಪ್ರೇಮ ವೈಫಲ್ಯ, ಮಾದಕ ವಸ್ತುಗಳ ಚಟ, ಕೌಟುಂಬಿಕ ಕಲಹ ಸೇರಿದಂತೆ ಹಲವು ಕಾರಣಗಳಿಗಾಗಿ ಭಾರತದಲ್ಲಿ ಪ್ರತಿ 40 ಸೆಕೆಂಡ್‌ಗೆ ಒಬ್ಬರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆಯಲ್ಲಿ ಕರ್ನಾಟಕ ದೇಶದಲ್ಲೇ 5ನೇ ಸ್ಥಾನದಲ್ಲಿದೆ.


ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ ಹಿನ್ನೆಲೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವವರ ಬಗ್ಗೆ ಭಾರತದ ರಾಷ್ಟ್ರೀಯ ದಾಖಲೆಗಳ ಬ್ಯೂರೋ ನೀಡಿರುವ ಅಂಕಿ-ಅಂಶಗಳ ವಿವರಣೆ ಮಹತ್ವ ಪಡೆದಿದೆ.

ಈಗಿನ ಪೀಳಿಗೆಯ ಜನರು ಸೂಕ್ಷ್ಮ ಮನಸ್ಥಿತಿಯವರಾಗಿದ್ದು, ಜೀವನದ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಚೈತನ್ಯ ಹೊಂದಿರುವುದಿಲ್ಲ. ಇದರಿಂದ ಸಣ್ಣ ಸಮಸ್ಯೆಗಳು ಹಾಗೂ ಕ್ಷುಲ್ಲಕ ಕಾರಣಕ್ಕೆ ಆತ್ಮಹತ್ಯೆಗೆ ಶರಣಾಗುತ್ತಾರೆ. ಇದರಿಂದ ಇತ್ತೀಚೆಗಂತೂ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆ ಹೆಚ್ಚಾಗುತ್ತಿದೆ.

ಹದಿಹರೆಯದವರು ಟಿಕ್ ಟಾಕ್, ಫೇಸ್ ಬುಕ್, ವಾಟ್ಸ್ ಆ್ಯಪ್, ಪಬ್ ಜಿ ಗೇಮ್ ಸೇರಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಮೈಮರೆತು ಖಿನ್ನತೆಯಿಂದ ಬಳಲುತ್ತಿರುತ್ತಾರೆ. ಇವರಲ್ಲಿ ಕೆಲವರು ಅದರಿಂದ ಹೊರಬರಲಾಗದೆ ಆತ್ಮಹತ್ಯೆ ಹಾದಿ ಹಿಡಿದಿರುವ ಎಷ್ಟೋ ನಿದರ್ಶನಗಳಿವೆ.

ಉದ್ದೇಶಪೂರ್ವಕವಾಗಿ ತಮ್ಮ ಜೀವನವನ್ನು ಅಂತ್ಯಗೊಳಿಸುವುದನ್ನು ಆತ್ಮಹತ್ಯೆ ಎಂದು ವ್ಯಾಖ್ಯಾನಿಸಲಾಗಿದೆ. ಆತ್ಮಹತ್ಯೆ ಎನ್ನುವ ಪದ ಖಿನ್ನತೆ ಖಾಯಿಲೆಯ ಲಕ್ಷಣವಾಗಿದೆ. ಸ್ವಹತ್ಯೆಗೆ ಯೋಚನೆ ಮಾಡುವ ವ್ಯಕ್ತಿ 25 ಬಾರಿ ಆ ನಿಟ್ಟಿನಲ್ಲಿ ಆಲೋಚನೆ ಮಾಡುತ್ತಾನೆ. ಖಿನ್ನತೆಯಿಂದ ಬಳಲುವವರಲ್ಲಿ ಆತ್ಮಹತ್ಯೆ ಆಲೋಚನೆಯು ಸಾಮಾನ್ಯರಿಗಿಂತ 20 ಪಟ್ಟು ಹೆಚ್ಚಿರುತ್ತದೆ ಎಂದು ಮನೋತಜ್ಞರು ಹೇಳುತ್ತಾರೆ.

ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ ದಿನವಾದ ಇಂದು ವಿಶ್ವದಲ್ಲಿ ಅದರಲ್ಲೂ ಭಾರತ ಹಾಗೂ ಕರ್ನಾಟಕದಲ್ಲಿ ಎಷ್ಟು ಮಂದಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಹಾಗೂ







ಯಾವ ಯಾವ ಕಾರಣಗಳಿಗೆ ಮಾಡಿಕೊಳ್ಳುತ್ತಾರೆ ಎಂಬ ಖಚಿತ ಅಂಕಿ ಅಂಶಗಳನ್ನು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ಬಿಡುಗಡೆ ಮಾಡಿದೆ.

ಇಡೀ ವಿಶ್ವದಲ್ಲಿ ಪ್ರತಿ ವರ್ಷ 8 ಲಕ್ಷಕ್ಕೂ ಹೆಚ್ಚು ಜನರು ಆತ್ಮಹತ್ಯೆ ಮೂಲಕ ತಮ್ಮ ಅಮೂಲ್ಯ ಜೀವನವನ್ನು ಅಂತ್ಯಗೊಳಿಸುತ್ತಿದ್ದಾರೆ. ಇನ್ನು ಭಾರತದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವ ವಿಚಾರಕ್ಕೆ ಬಂದರೆ ಪ್ರತಿ 40 ಸೆಕೆಂಡ್‌ಗೆ ಒಬ್ಬ ವ್ಯಕ್ತಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ವಿಶ್ವಾದ್ಯಂತ ವರದಿಯಾಗುವ ಆತ್ಮಹತ್ಯೆಗಳಲ್ಲಿ ಶೇಕಡ 15ರಷ್ಟು ಭಾರತದಲ್ಲೇ ಸಂಭವಿಸುತ್ತಿವೆ.

ಭಾರತದಲ್ಲಿ 2019ರಲ್ಲಿ 1.39 ಲಕ್ಷ, 2020ರಲ್ಲಿ 1.53 ಲಕ್ಷ ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಳೆದ ವರ್ಷ, 2022ರಲ್ಲಿ 1.64 ಲಕ್ಷ ಮಂದಿ ಸ್ವಹತ್ಯೆ ಮಾಡಿಕೊಂಡಿದ್ದಾರೆ. ಹಿಂದಿನ ಎರಡು ವರ್ಷಕ್ಕೆ ಹೋಲಿಸಿದರೆ, ಭಾರತದಲ್ಲಿ ಕಳೆದ ವರ್ಷ ಆತ್ಮಹತ್ಯೆ ಪ್ರಮಾಣ 7.2ರಷ್ಟು ಹೆಚ್ಚಾಗಿದೆ.

ಇನ್ನು ಕಳೆದ ವರ್ಷದ ಅಂಕಿ-ಅಂಶಗಳನ್ನು ಅವಲೋಕಿಸುವುದಾದರೆ ಭಾರತದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆಯಲ್ಲಿ ಕರ್ನಾಟಕ 5 ನೇ ಸ್ಥಾನದಲ್ಲಿದೆ. ಮಹಾರಾಷ್ಟ್ರ 22,207 ಜನರು ಆತ್ಮಹತ್ಯೆ ಮಾಡಿಕೊಂಡು ಮೊದಲ ಸ್ಥಾನದಲ್ಲಿದ್ದರೆ, ತಮಿಳುನಾಡು 18,925 ಜನರು ಆತ್ಮಹತ್ಯೆ ಮಾಡಿಕೊಂಡು, ಅದು 2ನೇ ಸ್ಥಾನದಲ್ಲಿದೆ. ಮಧ್ಯ ಪ್ರದೇಶ 14,965 ಜನರು ಆತ್ಮಹತ್ಯೆ ಮಾಡಿಕೊಂಡು, 3ನೇ ಸ್ಥಾನದಲ್ಲಿದ್ದರೆ, ಪಶ್ಚಿಮ ಬಂಗಾಳದಲ್ಲಿ 13,500 ಜನ ಆತ್ಮಹತ್ಯೆ ಮಾಡಿಕೊಂಡಿದ್ದು, ಅದು 4ನೇ ಸ್ಥಾನದಲ್ಲಿದೆ. ಕರ್ನಾಟಕದಲ್ಲಿ 13,056 ಜನರು ಆತ್ಮಹತ್ಯೆ ಮಾಡಿಕೊಂಡಿದ್ದು, ಇದು 5ನೇ ಸ್ಥಾನದಲ್ಲಿದೆ. ಆದರೆ, ರಾಜ್ಯದ ಜಿಲ್ಲಾವಾರು ಅಂಕಿ-ಅಂಶಗಳ ಪರಿಗಣಿಸುವುದಾದರೆ ಮೈಸೂರಿನ ಅಂಕಿ-ಅಂಶವನ್ನು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ನೀಡಿಲ್ಲ.

ಜೀವನ ಆರಂಭದಲ್ಲೇ ಅಂತ್ಯ: ಆತ್ಮಹತ್ಯೆ ಮಾಡಿಕೊಳ್ಳುವವರಲ್ಲಿ 15ರಿಂದ 24 ವಯೋಮಾನದವರೇ ಹೆಚ್ಚಾಗಿರುವುದು ಆತಂಕಕಾರಿ ವಿಷಯವಾಗಿದೆ. ಬಾಲ್ಯಾವಸ್ಥೆಯಿಂದ ಯೌವನಾವಸ್ಥೆಗೆ ಕಾಲಿಡುವ ಸಂದರ್ಭದಲ್ಲೇ ಹೆಚ್ಚಿನ ಜನರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ದುರ್ದೈವದ ಸಂಗತಿ. ಅಂದರೆ ಬದುಕಿನ ಆರಂಭದ ಸವಾಲುಗಳನ್ನು ಎದುರಿಸಲು ಈಗಿನ ಪೀಳಿಗೆಗೆ ಸಾಧ್ಯವಾಗುತ್ತಿಲ್ಲ ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ. 2021ನೇ ಸಾಲಿನಲ್ಲಿ ವರದಿಯಾದ ಒಟ್ಟು ಆತ್ಮಹತ್ಯೆಯಲ್ಲಿ ಜೀವನ ಕಳೆದುಕೊಂಡ 1,12,090 ಜನರಲ್ಲಿ 18 ರಿಂದ 45 ವಯೋಮಾನದವರು.

ಮನಸ್ಸಿನ ಗಟ್ಟಿತನ, ದೈಹಿಕ ಹಾಗೂ ಮಾನಸಿಕ ದೃಢತೆಯಲ್ಲೂ ಪುರುಷರು ಹೆಚ್ಚು ಸಶಕ್ತರಾಗಿರುತ್ತಾರೆ. ಆಶ್ಚರ್ಯಕರ ಸಂಗತಿ ಎಂದರೆ ಆತ್ಮಹತ್ಯೆ ಮಾಡಿಕೊಂಡಿರುವವರ ಸಂಖ್ಯೆಯಲ್ಲಿ ಸ್ತ್ರೀಯರಿಗಿಂತ ಪುರುಷರ ಸಂಖ್ಯೆಯೇ ಹೆಚ್ಚಾಗಿದೆ. 2015ರಲ್ಲಿ ವರದಿಯಾದ ಅಂಕಿ-ಅಂಶಗಳನ್ನು ಅವಲೋಕಿಸುವುದಾದರೆ ಪುರುಷ ಪ್ರಮಾಣ ಶೇ.68.5ರಷ್ಟಿದ್ದರೆ, ಮಹಿಳೆಯರದ್ದು 31.5ರಷ್ಟಿದೆ.

ನೇಣು ಬಿಗಿದುಕೊಂಡವರೇ ಹೆಚ್ಚು: ಆತ್ಮಹತ್ಯೆ ಮಾಡಿಕೊಳ್ಳುವವರು ವಿಷ ಸೇವನೆ, ನೀರಿಗೆ ಹಾರುವುದು ಸೇರಿದಂತೆ ಹಲವು ಆಯ್ಕೆ ಮಾಡಿಕೊಳ್ಳುತ್ತಾರೆ. ಆದರೆ ಆತ್ಮಹತ್ಯೆ ಮಾಡಿಕೊಳ್ಳುವ ವಿಧಾನದಲ್ಲಿ ಶೇ.50ರಷ್ಟು ಮಂದಿ ನೇಣು ಬಿಗಿದುಕೊಂಡಿದ್ದಾರೆ. ಕೌಟುಂಬಿಕ ಸಮಸ್ಯೆಗಳಿಂದ ಶೇಕಡ 32.4ರಷ್ಟು ಜನರು ಆತ್ಮಹತ್ಯೆ ಮಾಡಿಕೊಂಡರೆ, ಪ್ರೀತಿ ಪ್ರೇಮದ ವಿಚಾರವಾಗಿ ಶೇಕಡ 3.3ರಷ್ಟು ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕುಡಿತದ ಚಟಕ್ಕೆ ಒಳಗಾಗಿ ಶೇಕಡ 2.7ರಷ್ಟು ಜನರು ಆತ್ಮಹತ್ಯೆ ಮಾಡಿಕೊಂಡರೆ, ಶೇ.2ರಷ್ಟು ಜನರು ಪರೀಕ್ಷೆಯಲ್ಲಿ ಅನುತ್ತೀರ್ಣ ಹಾಗೂ ನಿರುದ್ಯೋಗ ಸಮಸ್ಯೆ ಎದುರಿಸಲಾಗದೆ ಸ್ವಹತ್ಯೆಗೊಳಗಿದ್ದಾರೆ.

ಸಹಾಯವಾಣಿಯಲ್ಲಿ ಸಹಾಯವೇ ಸಿಗುತ್ತಿಲ್ಲ

ವಿಶ್ವ ಆರೋಗ್ಯ ಸಂಸ್ಥೆ ಸೂಚನೆಯಂತೆ ಇಡೀ ವಿಶ್ವವೇ ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ ಆಚರಿಸುತ್ತಿದೆ. ಸರ್ಕಾರದ ಸೂಚನೆಯಂತೆ ಮೈಸೂರಿನಲ್ಲಿ ಕೂಡ ಇಂದು ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ ಕಾರ್ಯಕ್ರಮ ನಡೆಯಿತು. ಆತ್ಮಹತ್ಯೆ ಮಾಡಿಕೊಳ್ಳುವ ಮನಸ್ಥಿತಿಯುಳ್ಳವರಿಗೆ ಕೌನ್ಸಿಲಿಂಗ್‌ಗಾಗಿ ಆರೋಗ್ಯ ವಾಣಿ 104 ಅಥವಾ ಆರೋಗ್ಯ ಸಹಾಯವಾಣಿ ಟೆಲಿಮನಸ್ 14416 ಸಂಪರ್ಕಿಸಿದರೆ ಅವರು ಮನೋಸ್ಥೈರ್ಯ ತುಂಬುತ್ತಾರೆ ಎಂದು ಕಾರ್ಯಕ್ರಮದಲ್ಲಿ ಸಲಹೆ ನೀಡಲಾಯಿತು.

ಆದರೆ, ಎರಡು ಸಹಾಯವಾಣಿಗೆ ಕರೆ ಮಾಡಿದರೆ ಸಂಪರ್ಕವೇ ಸಿಗುತ್ತಿಲ್ಲ. ಸರ್ಕಾರದ ಸೂಚನೆಯಂತೆ ಅಧಿಕಾರಿಗಳು ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ ಕಾರ್ಯಕ್ರಮವನ್ನೇನೋ ಕಾಟಾಚಾರಕ್ಕೆ ನಡೆಸುತ್ತಿರುವಂತಿದೆ. ಆದರೆ, ಆತ್ಮಹತ್ಯೆ ಮಾಡಿಕೊಳ್ಳುವವರಿಗಾಗಿ ತಕ್ಷಣವೇ ಕೌನ್ಸಿಲಿಂಗ್ ನೀಡುವ ಯಾವುದೇ ವ್ಯವಸ್ಥೆ ಇಲ್ಲ ಎಂಬುದು ಸ್ಪಷ್ಟ.

ಆತ್ಮಹತ್ಯೆ ತಡೆಯುವ ವಿಧಾನ

ಆತ್ಮಹತ್ಯೆ ತಡೆಗಟ್ಟುವ ವಿಧಾನಗಳನ್ನು ಮನೋತಜ್ಞರು ಪಟ್ಟಿ ಮಾಡಿದ್ದಾರೆ. ಮಾದಕ ಹಾಗೂ ಮದ್ಯ ವ್ಯಸನದಿಂದ ದೂರಾಗುವಂತೆ ತಿಳಿ ಹೇಳುವುದು, ಖಿನ್ನತೆಯಿಂದ ಬಳಲುವ ವ್ಯಕ್ತಿ ಜೊತೆ ಹೆಚ್ಚು ಹೆಚ್ಚಾಗಿ ಬೆರೆಯುವುದು, ಸಾಮಾಜಿಕ ಬೆಂಬಲ ಸಿಗುವಂತೆ ಮಾಡುವುದು, ಉತ್ತಮ ಸಂವಹನ ಹೊಂದುವುದು, ತುರ್ತು ಚಿಕಿತ್ಸೆ ನೀಡುವುದು, ಆತ್ಮಹತ್ಯೆ ತಪ್ಪು ಎಂದು ಮನವರಿಕೆ ಮಾಡುವುದು ಸೇರಿದಂತೆ ಹಲವು ವಿಧಾನಗಳಿಂದ ಆತ್ಮಹತ್ಯೆ ಭಾವನೆ ಇರುವ ವ್ಯಕ್ತಿಯನ್ನು ಮನಃಪರಿವರ್ತನೆ ಮಾಡಬಹುದು. ದೈನಂದಿನ ಧ್ಯಾನ, ವ್ಯಾಯಾಮ, ಮನೋರಂಜನಾತ್ಮಕ ಚಟುವಟಿಕೆಯಲ್ಲಿ ಭಾಗವಹಿಸುವಂತೆ ನೋಡಿಕೊಂಡು, ಪ್ರೇಕ್ಷಣೀಯ ಸ್ಥಳಗಳಿಗೆ ಕರೆದುಕೊಂಡು ಹೋದರೆ ಆತ್ಮಹತ್ಯೆ ಆಲೋಚಿಸುವ ವ್ಯಕ್ತಿಯನ್ನು ಸರಿದಾರಿಗೆ ತರಬಹುದು ಎಂದು ತಜ್ಞರು ಸಲಹೆ ನೀಡಿದ್ದಾರೆ.

ತೆರಿಗೆ ವಂಚನೆ, ಸೋರಿಕೆ ಬಗ್ಗೆ ನಿಗಾ ವಹಿಸಿ ಶಿಸ್ತು ಕ್ರಮ ಕೈಗೊಳ್ಳಿ

ವಾಣಿಜ್ಯ ತೆರಿಗೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ



ಬೆಂಗಳೂರು, ಸೆ.14(ಕೆಎಂಶಿ)–ರಾಜ್ಯದಲ್ಲಿ ತೆರಿಗೆ ವಂಚನೆ, ಸೋರಿಕೆ ಪ್ರಕರಣಗಳ ಬಗ್ಗೆ ತೀವ್ರ ನಿಗಾ ವಹಿಸಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ವಾಣಿಜ್ಯ ತೆರಿಗೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗುರುವಾರ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ವಾಣಿಜ್ಯ ತೆರಿಗೆ ಇಲಾಖೆ ಪ್ರಗತಿ ಪರಿಶೀಲನೆ ನಡೆಸಿದ ಬಳಿಕ ಅಧಿಕಾರಿಗಳಿಗೆ ಈ ಸೂಚನೆ ನೀಡಿದರು.

ವಾಣಿಜ್ಯ ತೆರಿಗೆ ಇಲಾಖೆಯ ತೆರಿಗೆ ಸಂಗ್ರಹ ಬೆಳವಣಿಗೆ ದರ ಶೇ.19.2ರಷ್ಟಿದ್ದು, ದೇಶದಲ್ಲಿಯೇ ಅತಿ ಹೆಚ್ಚಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಇಷ್ಟಕ್ಕೆ ಸಮಾಧಾನಪಟ್ಟುಕೊಳ್ಳದೆ ತೆರಿಗೆ ವಂಚಿತ ಪ್ರಕರಣಗಳನ್ನು ಹೆಚ್ಚೆಚ್ಚು ಪತ್ತೆ ಹಚ್ಚಿ ತೆರಿಗೆ ಸಂಗ್ರಹ ಗುರಿಯನ್ನು ದಾಟಿ ಸಾಧನೆ ಮಾಡುವ ಅವಕಾಶಗಳಿವೆ. ಇದನ್ನು ಸಾಧಿಸಿ ತೋರಿಸಿ ಎಂದರು.

ಇಲಾಖೆಯು ಇನ್ನಷ್ಟು ತೀವ್ರವಾಗಿ ಅಗತ್ಯಕ್ರಮಗಳನ್ನು ಕೈಗೊಳ್ಳುವ ಮೂಲಕ ತೆರಿಗೆ ವಂಚನೆ ತಡೆಗಟ್ಟುವ ಕಡೆಗೆ ಹೆಚ್ಚು ಆಸಕ್ತಿ ವಹಿಸಬೇಕು. ಬೆಳವಣಿಗೆ ದರವು ಶೇ.19.2ರಷ್ಟಿದ್ದು, ದೇಶದಲ್ಲಿಯೇ ಅತೀ ಹೆಚ್ಚು. ದೇಶದ ಸರಾಸರಿ ತೆರಿಗೆ ಸಂಗ್ರಹ ಬೆಳವಣಿಗೆ ದರ ಶೇ.15ರಷ್ಟು ಮಾತ್ರ ಇದೆ. ದೇಶದ ಒಟ್ಟಾರೆ ತೆರಿಗೆ ಸಂಗ್ರಹದಲ್ಲಿ ರಾಜ್ಯದ ಪಾಲು ಶೇ.9.4ರಷ್ಟಿದೆ. ಕಳೆದ ಬಾರಿಗಿಂತ ಈ ಬಾರಿ ರಾಜ್ಯದ ಪಾಲು ಹೆಚ್ಚಾಗಿದೆ ಎಂದು ಅಧಿಕಾರಿಗಳು ಮುಖ್ಯಮಂತ್ರಿಗಳಿಗೆ ವಿವರಿಸಿದರು.

ಶೇ.24ರ ಬೆಳವಣಿಗೆ ಗುರಿಯನ್ನು ನೀಡಲಾಗಿರುವುದನ್ನು ಪ್ರಸ್ತಾಪಿಸಿದ ಮುಖ್ಯಮಂತ್ರಿಗಳು ಈ ಗುರಿ ದಾಟಿ ಸಾಧಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದ್ದಲ್ಲದೆ, ತೆರಿಗೆ ವಂಚನೆ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುವ ಮೂಲಕ ತೆರಿಗೆ ಸೋರಿಕೆ ತಡೆಗಟ್ಟಲು ನಿರ್ದೇಶನ ನೀಡಿದರು.

ಗುರಿಗಿಂತ ಹೆಚ್ಚಿನ ಸಾಧನೆಯಾಗಬೇಕು. ಹಿಂದೆ ಉಳಿದವರು ಎಲ್ಲ ಪ್ರಯತ್ನ ಮಾಡಬೇಕು. ಜಾಗೃತದಳದವರು ಸಹಕರಿಸಬೇಕು. ಎರಡು ತಿಂಗಳ ನಂತರ ಮತ್ತೆ ಪ್ರಗತಿ ಪರಿಶೀಲಿಸಲಾಗುವುದು. ಆ ವೇಳೆಗೆ ಇನ್ನಷ್ಟು ಪ್ರಗತಿಯ ವರದಿ ನೀಡಿ. ಮುಂದಿನ ಸಭೆ ವೇಳೆಗೆ ಒಟ್ಟಾರೆ ಪರಿಸ್ಥಿತಿ ಈಗಿರುವುದಕ್ಕಿಂತ ಹೆಚ್ಚು ಆಶಾದಾಯಕವಾಗಿರುವಂತೆ ಕ್ರಮ ವಹಿಸಿ ಎಂದರು.

ತೆರಿಗೆ ಕಳ್ಳತನ ತಡೆಯುವುದಕ್ಕಾಗಿ ಅಗತ್ಯ ಸೌಲಭ್ಯ ಒದಗಿಸಲಾಗಿದೆ. ನಿಮ್ಮ ಪ್ರಯತ್ನದಿಂದ ರಾಜ್ಯಕ್ಕೆ ಹೆಚ್ಚು ತೆರಿಗೆ ಬರಲು ಸಾಧ್ಯ. ಅನೇಕ ಭಾಗಗಳಲ್ಲಿ ಅನೇಕ ಉತ್ಪನ್ನಗಳಲ್ಲಿ ತೆರಿಗೆ ವಂಚನೆ ನಡೆಯುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಈ ಬಗ್ಗೆ ಹೆಚ್ಚಿನ ಗಮನಹರಿಸಿ ತೆರಿಗೆ ಸಂಗ್ರಹಿಸಬೇಕು. ಹೆಚ್ಚು ತೆರಿಗೆ ಸಂಗ್ರಹ ಮಾಡಿದರೆ ಅಭಿವೃದ್ಧಿ ಕೆಲಸ ಮಾಡಲು ಹೆಚ್ಚು ಅನುಕೂಲವಾಗುತ್ತದೆ. ಸಾಮೂಹಿಕ ಜವಾಬ್ದಾರಿ ಹೊತ್ತು ಕೆಲಸ ಮಾಡಬೇಕು ಎಂದು ಸೂಚಿಸಿದರು.

ಈ ಬಾರಿ ದಸರಾದಲ್ಲಿ ಪುಸ್ತಕ ಮೇಳಕ್ಕೆ ವಿಶೇಷ ಒತ್ತು



ಮೈಸೂರು,ಸೆ.14(ಪಿಎಂ)–ಈ ಬಾರಿಯ ದಸರಾ ಮಹೋತ್ಸವದಲ್ಲಿ ವಿಶೇಷ ರೀತಿಯಲ್ಲಿ ಪುಸ್ತಕ ಮೇಳ ಆಯೋಜಿಸಲು ಉದ್ದೇಶಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದರು.

ಮೈಸೂರು ಅರಮನೆ ಮಂಡಳಿಯ ಕಚೇರಿ ಸಭಾಂಗಣದಲ್ಲಿ ದಸರಾ ಸಂಬಂಧ ಗುರುವಾರ ವಿವಿಧ ಇಲಾಖಾಧಿಕಾರಿಗಳ ಜೊತೆ ಸಭೆ ನಡೆಸಿದ ಅವರು, ಬಳಿಕ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದರು. ಓದುಗರಿಗೆ ಹೊಸ ಹೊಸ ಪ್ರಕಾಶನದ ಪುಸ್ತಕಗಳು ದೊರೆಯುವಂತೆ ವಿಶಿಷ್ಟ ರೀತಿಯಲ್ಲಿ ಪುಸ್ತಕ ಮೇಳ ಆಯೋಜನೆ ಸಂಬಂಧ ಇಂದಿನ ಸಭೆಯಲ್ಲಿ ಚರ್ಚಿಸಲಾಯಿತು. ಆಸಕ್ತಿದಾಯಕ ಪುಸ್ತಕಗಳು ಈ ಬಾರಿಯ ಮೇಳದಲ್ಲಿ ಓದುಗರಿಗೆ ಸಿಗುವಂತಾಗಬೇಕು. ಆ ನಿಟ್ಟಿನಲ್ಲಿ ವಿಶೇಷ ಒತ್ತುಕೊಟ್ಟು ಆಯೋಜಿಸಲು ರೂಪುರೇಷೆ ಸಿದ್ಧಪಡಿಸುವ ಸಂಬಂಧ ಚರ್ಚಿಸಲಾಗಿದೆ ಎಂದು ಹೇಳಿದರು.

ದಸರಾ ಮಹೋತ್ಸವಕ್ಕಾಗಿ ರಾಜ್ಯದ ವಿವಿಧ ಭಾಗಗಳು, ದೇಶ-ವಿದೇಶದಿಂದ ಮೈಸೂರಿಗೆ ಆಗಮಿಸುವ ಪ್ರವಾಸಿಗರು ಸ್ಥಳೀಯ ಪ್ರವಾಸಿ ತಾಣಗಳತ್ತ ಪ್ರಯಾಣ ಬೆಳೆಸಲು ಯಾವುದೇ ಅನಾನುಕೂಲ ಉಂಟಾಗಬಾರದು. ಅದಕ್ಕಾಗಿ ದಸರಾ ಒಳಗಾಗಿ 200ಕ್ಕೂ ಹೆಚ್ಚು ಕಡೆಗಳಲ್ಲಿ ಏಕರೂಪದ ಮಾರ್ಗಸೂಚಕ ಫಲಕಗಳನ್ನು ಅಳವಡಿಸಲು ಕ್ರಮ ವಹಿಸಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದು, ಮುಖ್ಯವಾಗಿ ಮೈಸೂರು ಪರಂಪರೆಗೆ ಪೂರಕವಾಗಿ ನಾಮಫಲಕಗಳು ಸಿದ್ಧಗೊಳ್ಳಬೇಕೆಂದು ಸೂಚಿಸಲಾಗಿದೆ ಎಂದರು.

ಇಂದಿಗೆ ಸರಿಯಾಗಿ 31 ದಿನಗಳು ಬಾಕಿ ಉಳಿದಿವೆ. ಹಾಗಾಗಿ ಉದ್ಘಾಟನಾ ಸಮಾರಂಭ ಸೇರಿದಂತೆ ಯಾವುದೇ ಕಾರ್ಯಕ್ರಮಗಳಲ್ಲಿ ಅನಾನುಕೂಲ ಉಂಟಾಗದಂತೆ ಅಗತ್ಯ ಪೂರ್ವ ಸಿದ್ಧತೆ ಮಾಡಿಕೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಲಾಗಿದೆ. ವೇದಿಕೆ, ತಾಂತ್ರಿಕ ವ್ಯವಸ್ಥೆ ಸೇರಿದಂತೆ ಎಲ್ಲಾ ವ್ಯವಸ್ಥೆಗಳ ಸಂಬಂಧ ರೂಪುರೇಷೆ ಸಿದ್ಧಪಡಿಸಿಕೊಳ್ಳಲು ಸೂಚನೆ ನೀಡಲಾಗಿದೆ ಎಂದು ಮಾಹಿತಿ ನೀಡಿದರು. ಜಿಪಂ ಸಿಇಓ ಕೆ.ಎಂ.ಗಾಯಿತ್ರಿ, ಎಡಿಸಿ ಪಿ.ಶಿವರಾಜ್, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿ ಮುತ್ತುರಾಜ್, ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ ಸೇರಿದಂತೆ ಮತ್ತಿತರ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಸ್ವಚ್ಛತೆಯೇ ಸೇವೆ: ವಿಶೇಷ ಜನಾಂದೋಲನ



ಮೈಸೂರು, ಸೆ.14– ಜಿಲ್ಲೆಯ ಎಲ್ಲಾ ಗ್ರಾಮೀಣ ಪ್ರದೇಶಗಳಲ್ಲಿ 'ಸ್ವಚ್ಛತಾ ಹಿ ಸೇವಾ' ಎಂಬ ವಿಶೇಷ ಜನಾಂದೋಲನವನ್ನು ಸೆ.15ರಿಂದ ಅ.2ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಕೆ.ಎಂ.ಗಾಯಿತ್ರಿ ತಿಳಿಸಿದ್ದಾರೆ.

ಅ.2ರಂದು ಮಹಾತ್ಮ ಗಾಂಧೀಜಿ ಅವರ ಜನ್ಮದಿನದ ಸ್ಮರಣಾರ್ಥ ಸ್ವಚ್ಛ ಭಾರತ ದಿನವನ್ನಾಗಿ ಆಚರಿಸಲಾಗುತ್ತಿದೆ. ಮಹಾತ್ಮರ ಧ್ಯೇಯವಾಕ್ಯ 'ಸ್ವಚ್ಛತೆಯೇ ದೈವತ್ವ' ಎಂಬ ಕನಸನ್ನು ನನಸಾಗಿಸಲು ಸೆ.15ರಿಂದ ಅ.2ರವರೆಗೆ 15 ದಿನಗಳ ಕಾಲ ಜಿಲ್ಲೆಯ ಎಲ್ಲಾ ಗ್ರಾಮೀಣ ಪ್ರದೇಶಗಳಲ್ಲಿ ಸ್ವಚ್ಛತಾ ಹಿ ಸೇವಾ-ಸ್ವಚ್ಛತೆಯೇ ಸೇವೆ ಎಂಬ ವಿಶೇಷ ಆಂದೋಲನವನ್ನು ಹಮ್ಮಿಕೊಳ್ಳಲು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ವತಿಯಿಂದ ತೀರ್ಮಾನಿಸಲಾಗಿದೆ.

ಈ ವರ್ಷದ ಸ್ವಚ್ಛತಾ ಹಿ ಸೇವಾ-ಸ್ವಚ್ಛತೆಯೇ ಸೇವೆ ಎಂಬ ವಿಶೇಷ ಆಂದೋಲನದ ಘೋಷವಾಕ್ಯವಾಗಿ 'ಕಸಮುಕ್ತ, ತ್ಯಾಜ್ಯಮುಕ್ತ ಭಾರತ' ಎಂದು ಘೋಷಿಸಲಾಗಿದ್ದು, ಎಲ್ಲೆಡೆ ಸದೃಶ್ಯ ಸ್ವಚ್ಛತೆ ಸಾಧಿಸಿ, ಸ್ವಚ್ಛ ಸುಂದರ, ಸದೃಢ ಗ್ರಾಮಗಳನ್ನು ರೂಪಿಸುವ ಮಹತ್ವಾಕಾಂಕ್ಷಿ ಗುರಿ ಹೊಂದಲಾಗಿದೆ.

ಗ್ರಾಮಗಳ ಸ್ವಚ್ಛತೆಗೆ ಸ್ವಯಂಪ್ರೇರಿತರಾಗಿ ಶ್ರಮದಾನ ಚಟುವಟಿಕೆಗಳಲ್ಲಿ ಭಾಗವಹಿಸುವುದು. ಜಿಲ್ಲೆಯ ತಾಲೂಕು, ಗ್ರಾಪಂ ವ್ಯಾಪ್ತಿಗಳಲ್ಲಿ ಸಾರ್ವಜನಿಕ ಸ್ಥಳಗಳಾದ ಬಸ್ ನಿಲ್ದಾಣ, ರೈಲು ನಿಲ್ದಾಣ, ನದಿ ತೀರ, ಸಾಂಸ್ಕೃತಿಕ, ಸಮುದಾಯ ಭವನ, ಪ್ರವಾಸಿ ತಾಣಗಳು, ಐತಿಹಾಸಿಕ ಸ್ಮಾರಕಗಳು, ಚರಂಡಿಗಳು, ಸರ್ಕಾರಿ ಶಾಲೆ, ಅಂಗನವಾಡಿ, ನಾಲಾಗಳು ಮುಂತಾದ ಸ್ಥಳಗಳಲ್ಲಿ ಸ್ವಚ್ಛತೆಯ ಕುರಿತು ಜಾಗೃತಿ ಮತ್ತು ಸದೃಶ್ಯ ಸ್ವಚ್ಛತೆ ಕಾಯ್ದುಕೊಳ್ಳಲು ಶ್ರಮದಾನ ಮತ್ತು ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸುವುದು. ಜಿಲ್ಲೆಯ ತಾಲೂಕು, ಗ್ರಾ.ಪಂ ವ್ಯಾಪ್ತಿಗಳಲ್ಲಿ ನದಿ ತೀರ ಪ್ರದೇಶ, ಪ್ರವಾಸಿ ತಾಣಗಳು, ಐತಿಹಾಸಿಕ ಸ್ಮಾರಕಗಳು, ಚರಂಡಿಗಳು ಮುಂತಾದ ಸ್ಥಳಗಳಲ್ಲಿ ಸ್ವಚ್ಛತೆಯನ್ನು ಕೈಗೊಂಡು ಜನರಲ್ಲಿ ಸ್ವಚ್ಛತೆಯ ಕುರಿತು ಜಾಗೃತಿಯನ್ನು ಮೂಡಿಸಲು ಚಟುವಟಿಕೆಗಳನ್ನು ಆಯೋಜಿಸಬೇಕು. ಸ್ವಚ್ಛತಾ ಇ ಸೇವಾ-ಸ್ವಚ್ಛತೆಯೇ ಸೇವೆಯನ್ನು ಉತ್ತಮವಾಗಿ ಯಶಸ್ವಿಗೊಳಿಸಲು ಹಾಗೂ ಸದೃಢ ಭಾರತ ನಿರ್ಮಾಣಕ್ಕೆ ಜಿಲ್ಲೆಯ ಚುನಾಯಿತ ಪ್ರತಿನಿಧಿಗಳು, ಅಧಿಕಾರಿಗಳು, ಸಾರ್ವಜನಿಕರ ಶ್ರಮ ಅಗತ್ಯವಿದ್ದು, ಸಹಕರಿಸುವಂತೆ ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ತಿಳಿಸಿದ್ದಾರೆ.

ಹಾಪ್‌ಕಾಮ್ಸ್ ಸರ್ವ ಸದಸ್ಯರ ಸಭೆ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ನಡೆಸಲು ಮನವಿ



ಮೈಸೂರು, ಸೆ.14–ಮೈಸೂರಿನ ಜೆ.ಕೆ. ಮೈದಾನದಲ್ಲಿರುವ ವೈದ್ಯಕೀಯ ಕಾಲೇಜಿನ ಸಭಾಂಗಣದಲ್ಲಿ ಸೆ.21ರಂದು ಬೆಳಗ್ಗೆ 11 ಗಂಟೆಗೆ ನಡೆಯಲಿರುವ ಜಿಲ್ಲಾ ಹಾಪ್‌ಕಾಮ್ಸ್ ಸರ್ವ ಸದಸ್ಯರ ಸಭೆಯನ್ನು ಅಂದು ಬೆಳಗ್ಗೆ 10ರಿಂದ ಸಂಜೆ 5 ಗಂಟೆವರೆಗೆ ನಡೆಸಬೇಕೆಂದು ಹುಯಿಲಾಳು ಗ್ರಾಪಂ ಮಾಜಿ ಸದಸ್ಯ ಹುಯಿಲಾಳು ರಾಮಸ್ವಾಮಿ ಮನವಿ ಮಾಡಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಸಭೆ ಬೆಳಗ್ಗೆ 11ಕ್ಕೆ ಆರಂಭವಾಗಿ ಮಧ್ಯಾಹ್ನದ ವೇಳೆಗೆ ಮುಕ್ತಾಯವಾಗುವುದರಿಂದ ಸದಸ್ಯರಿಗೆ ಸಂಘದ ಲೋಪ-ದೋಷಗಳ ಬಗ್ಗೆ ಚರ್ಚಿಸಲು ಅವಕಾಶ ದೊರೆಯದೇ ಸಭೆ ಕೇವಲ ಪ್ರಾರ್ಥನೆ ಹಾಗೂ ಭಾಷಣಗಳಿಗಷ್ಟೇ ಸೀಮಿತವಾಗುತ್ತದೆ. ಹೀಗಾಗಿ ಸಭೆಯನ್ನು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ನಡೆಸಬೇಕೆಂದು ಅವರು ಮನವಿ ಮಾಡಿದ್ದಾರೆ.

ಜಿಲ್ಲಾ ಪೆಂಡಾಲ್ ಮಾಲೀಕರ ಸಂಘದಿಂದ ಗಣ್ಯರಿಗೆ ಸನ್ಮಾನ



ಮೈಸೂರು, ಸೆ. 14–ಕರ್ನಾಟಕ ರಾಜ್ಯ ಶಾಮಿಯಾನ ಡೆಕೋರೇಷನ್, ಸೌಂಡ್ & ಲೈಟ್ ವೆಲ್‌ಫೇರ್ ಅಸೋಸಿಯೇಷನ್, ಗಂಗಾವತಿ ಆಶ್ರಯದಲ್ಲಿ, ಮೈಸೂರು ಜಿಲ್ಲಾ ಪೆಂಡಾಲ್ ಮಾಲೀಕರ ಸಂಘದ ವತಿಯಿಂದ ದಸರಾ ವಸ್ತುಪ್ರದರ್ಶನ ಮೈದಾನದಲ್ಲಿ ರಾಜ್ಯ ಮಟ್ಟದ ಮೂರನೇ ಮಹಾ ಅಧಿವೇಶನವನ್ನು ಹಮ್ಮಿಕೊಳ್ಳಲಾಗಿತ್ತು.

ಈ ವೇಳೆ ಹುಡ್ಕೋ ಬನ್ನಿಮಂಟಪ ರವಿ ಫರ್ನಿಚರ್ಸ್ & ಡೆಕೋರೇಟರ್ಸ್ ಮಾಲೀಕ ರವಿ, ಅಲೈಡ್ ಟೆಂಟ್ ಹೌಸ್ ಮ್ಯಾನೇಜರ್ ಮಿರ್ಜಾ ಜಂಷೀದ್ ಬೇಗ್ ಅಶ್ರಫಿ ಅವರನ್ನು ಸನ್ಮಾನಿಸಲಾಯಿತು. ಮೈಸೂರು ಜಿಲ್ಲಾ ಪೆಂಡಾಲ್ ಮಾಲೀಕರ ಸಂಘದ ಅಧ್ಯಕ್ಷ ಶಿವಕುಮಾರ್, ಕರ್ನಾಟಕ ರಾಜ್ಯ ಶಾಮಿಯಾನ ಡೆಕೋರೇಷನ್, ಸೌಂಡ್ & ಲೈಟ್ ವೆಲ್‌ಫೇರ್ ಅಸೋಸಿಯೇಷನ್ ಉಪಾಧ್ಯಕ್ಷ ಅಬ್ದುಲ್ ರೆಹಮಾನ್, ಕಾರ್ಯದರ್ಶಿ ಶಂಶುರ್ ರೆಹಮಾನ್ ವಸೀಂ, ಮೆ॥ ಪೂಜಾ ಫರ್ನಿಚರ್ಸ್‌ನ ಲಿಂಗಪ್ಪ, ಸಿರಾಜ್ ಫರ್ನಿಚರ್ಸ್‌ನ ಸಿರಾಜ್, ಮೆ॥ ಎ.ಆರ್.ಎಂ. ಫರ್ನಿಚರ್ಸ್ & ಡೆಕೋರೇಟರ್ಸ್‌ನ ಅಮ್ಜದ್ ಪಾಷ ಮತ್ತು ಇತರರು ಉಪಸ್ಥಿತರಿದ್ದರು.

ಸುನಿಲ್‌ಕುಮಾರ್‌ಗೆ ಪಿಎಚ್.ಡಿ ಪದವಿ



ಮೈಸೂರು: ಡಾ.ಹೆಚ್.ಪಿ.ಮಂಜುನಾಥ್ ಮಾರ್ಗದರ್ಶನದಲ್ಲಿ ಶಂಕರಗೌಡ ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ.ಎಂ.ಎಲ್. ಸುನಿಲ್‌ಕುಮಾರ್ ಶಿಕ್ಷಣ ವಿಷಯದಲ್ಲಿ ಸಂಶೋಧಿಸಿ ಮಂಡಿಸಿದ ಮಹಾಪ್ರಬಂಧವನ್ನು ಶಂಕರಗೌಡ ಶಿಕ್ಷಣ ವಿದ್ಯಾಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ನಾಳೆ ವಿದ್ಯುತ್ ವ್ಯತ್ಯಯ

ಮೈಸೂರು,ಸೆ.14–ನಿರ್ವಹಣಾ ಕಾಮಗಾರಿ ನಿಮಿತ್ತ ಸೆ.16ರಂದು ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ಜಲಪುರಿ, ಗಾಯತ್ರಿಪುರಂ, ಜ್ಯೋತಿನಗರ, ಉದಯಗಿರಿ, ಕ್ಯಾತಮಾರನಹಳ್ಳಿ, ಶಾಂತಿನಗರ 1, 2ನೇ ಹಂತ, ಗಣೇಶ್‌ನಗರ, ಸತ್ಯನಗರ, ಮಹದೇವಪುರ ರಸ್ತೆ, ಉಸ್ಮಾನಿಯಾ ಬ್ಲಾಕ್, ಗೌಸಿಯಾನಗರ, ರಾಘವೇಂದ್ರನಗರ, ಗಿರಿಯಾಬೋವಿಪಾಳ್ಯ, ಯರಗನಹಳ್ಳಿ, ಬನ್ನೂರು ರಸ್ತೆ, ವಿದ್ಯಾರಣ್ಯಪುರಂ 25, 26, 27, 28, 29 ಮತ್ತು 30ನೇ ಕ್ರಾಸ್, ಕನಕಗಿರಿ, ಬೆಸ್ತರ ಬ್ಲಾಕ್, ಇಂಡಸ್ಟ್ರಿಯಲ್ ಸಬರ್ಬ್ 1, 2, 3ನೇ ಹಂತ ಸ್ಟರ್ಲಿಂಗ್ ಸುತ್ತಮುತ್ತ, ವೀವರ್ಸ್ ಕಾಲೋನಿ, ಸುಬ್ರಮಣ್ಯಸ್ವಾಮಿ ದೇವಸ್ಥಾನದ ಸುತ್ತಮುತ್ತ, ಚಾಮುಂಡಿಪುರಂ ವೃತ್ತ, ಪೋಸ್ಟಲ್ ಕಾಲೋನಿ, ಚಾಮುಂಡಿವನ, ವಾಣಿ ವಿದ್ಯಾಮಂದಿರ ಸುತ್ತಮುತ್ತ, ಸಿಲ್ಕ್ ಫ್ಯಾಕ್ಟರಿ ಸುತ್ತಮುತ್ತ, ಅಶೋಕಪುರಂ, ನಾರಾಯಣ ಶಾಸ್ತ್ರಿ ರಸ್ತೆ, ಆಜಾಮ್ ಮಸೀದಿ ರಸ್ತೆ, ದಿವಾನ್ಸ್ ರಸ್ತೆ, ಬಲ್ಲಾಳ್ ರಸ್ತೆ ಕೃಷ್ಣಮೂರ್ತಿಪುರಂ, ಆರ್.ಟಿ.ಓ ರಸ್ತೆ ಚಾಮರಾಜಪುರಂ, ನಂಜುಮಳಿಗೆ, ಬಂಡಿಪಾಳ್ಯ, ಹೊಸಹುಂಡಿ, ಗುಡುಮಾದನಹಳ್ಳಿ, ಉತ್ತನಹಳ್ಳಿ, ಏಳಿಗೆಹುಂಡಿ, ಹಾಲನಹಳ್ಳಿ ರಿಂಗ್ ರಸ್ತೆ, ನಾಚನಹಳ್ಳಿ ಪಾಳ್ಯ, ಜೆ.ಪಿ.ನಗರ A.B.C.D ಬ್ಲಾಕ್, ಕವಿತಾ ಬೇಕರಿ ವೃತ್ತ, ಪೊಲೀಸ್ ಬೂತ್ ವೃತ್ತ, ಗೊಬ್ಬಳಿಮರ ವೃತ್ತ, ಸಿದ್ದಲಿಂಗೇಶ್ವರ ಬಡಾವಣೆ, ಓಂಕಾರ್ ಬಡಾವಣೆ, ಅಮೋಘ ಪ್ಯಾಲೇಸ್ ಹೋಟೆಲ್ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ.

ತಮಿಳುನಾಡಿಗೆ ಕಾವೇರಿ ನೀರು; ಕಾವೇರಿ ನದಿ ನೀರು ನಿರ್ವಹಣಾ ಮಂಡಳಿ ನಿಲುವು ಖಂಡಿಸಿ ಪ್ರತಿಭಟನೆ



ಮೈಸೂರು,ಸೆ.14(ಪಿಎಂ)– ತಮಿಳುನಾಡಿಗೆ ಇನ್ನೂ 15 ದಿನಗಳು ನಿತ್ಯ 5 ಸಾವಿರ ಕ್ಯೂಸೆಕ್ ನೀರು ಹರಿಸಬೇಕೆಂಬ ಕಾವೇರಿ ನದಿ ನೀರು ನಿರ್ವಹಣಾ ಮಂಡಳಿ ಸೂಚನೆ ಖಂಡಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಗುರುವಾರ ಮೇಣದ ಬತ್ತಿ ಹಿಡಿದು ಕರಾಳ ದಿನಾಚರಣೆ ನಡೆಸಿ, ಪ್ರತಿಭಟಿಸಲಾಯಿತು.

ಮೈಸೂರಿನ ಚಾಮರಾಜ ಜೋಡಿ ರಸ್ತೆಯ ಬಸವೇಶ್ವರ ಪ್ರತಿಮೆ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಕಾವೇರಿ ನೀರಿನ ನಿರ್ವಹಣಾ ಮಂಡಳಿ ತೀರ್ಪು ಕಾವೇರಿ ಕೊಳ್ಳದ ಜನತೆಯ ಮರಣಶಾಸನವಾಗಿದೆ. ಕಾವೇರಿ ಜಲಾನಯನ ಪ್ರದೇಶದ ಜಲಾಶಯಗಳು ಬರಿದಾಗುತ್ತಿದ್ದು, ಕುಡಿಯುವ ನೀರಿಗೂ ತೊಂದರೆ ಉಂಟಾಗುವ ಮುನ್ಸೂಚನೆ ಇದ್ದರೂ ತಮಿಳುನಾಡಿಗೆ ನೀರು ಹರಿಸಬೇಕೆಂದು ಆದೇಶ ನೀಡಿರುವುದು ಎಷ್ಟರ ಮಟ್ಟಿಗೆ ಸಮಂಜಸ ಎಂದು ಖಂಡಿಸಿದರು.

ಕುಡಿಯುವ ನೀರಿಗೆ ಮೊದಲ ಆದ್ಯತೆ ನೀಡಿ, ತದನಂತರ ಕೃಷಿ ಹಾಗೂ ಕೈಗಾರಿಕೆಗೆ ಬಿಡಬೇಕೆಂಬ ಅರಿವಿದ್ದರೂ ದುರುದ್ದೇಶಪೂರ್ವಕವಾಗಿ ತೀರ್ಪು ನೀಡಲಾಗಿದೆ. ಹೀಗೆ ಕನ್ನಡಿಗರಿಗೆ ಶೋಷಣೆ, ಅನ್ಯಾಯ ಮಾಡುತ್ತಿರುವುದನ್ನು ಖಂಡಿಸಿ ಕಾನೂನಾತ್ಮಕವಾಗಿ ಹೋರಾಟ ಮಾಡುವುದು ನಮ್ಮ ಜನಪ್ರತಿನಿಧಿಗಳ ಜವಾಬ್ದಾರಿ. ಇಲ್ಲಿ ಭಾವನಾತ್ಮಕ ಹೋರಾಟಕ್ಕಿಂತ ಕಾನೂನಾತ್ಮಕ ಹೋರಾಟ ಮುಖ್ಯ. ಹಾಗಾಗಿ ಸರ್ಕಾರ ಕಾನೂನಾತ್ಮಕ ಹೋರಾಟ ನಡೆಸಬೇಕು ಎಂದು ಒತ್ತಾಯಿಸಿದರು.

ಕಾವೇರಿ ಹೋರಾಟದಲ್ಲಿ ನಾಡಿನ ರೈತರು, ಸಂಘ-ಸಂಸ್ಥೆಗಳು, ಕನ್ನಡಪರ ಹೋರಾಟಗಾರರ ವಿರುದ್ಧ ಪ್ರಕರಣ ದಾಖಲಾಗಿದೆಯೇ ಹೊರತು ನಾಡಿಗೆ ನ್ಯಾಯ ಸಿಕ್ಕಿಲ್ಲ. ಇದಕ್ಕೆ ನೇರ ಹೊಣೆ ನಮ್ಮ ರಾಜ್ಯದ ರಾಜಕೀಯ ವ್ಯವಸ್ಥೆ. ಈವರೆವಿಗೆ ರಾಜ್ಯದ ಆಡಳಿತದ ಚುಕ್ಕಾಣಿ ಹಿಡಿದ ಎಲ್ಲಾ ಪಕ್ಷಗಳು ಕಾವೇರಿ ನೀರನ್ನು ಸಂಕಷ್ಟ ಕಾಲದಲ್ಲೂ ತಮಿಳುನಾಡಿಗೆ ಹರಿಸಿದೆಯೇ ಹೊರತು ಇದರ ಬಗ್ಗೆ ಕಠಿಣ ನಿಲುವು ತೆಗೆದುಕೊಂಡಿಲ್ಲ. ಇನ್ನಾದರೂ ಎಚ್ಚೆತ್ತು ರಾಜ್ಯ ಸರ್ಕಾರ ಪೊಳ್ಳು ಭರವಸೆ, ಆಶ್ವಾಸನೆಗೆ ಸೀಮಿತವಾಗದೇ ಕಾವೇರಿ ನೀರಿನ ವಿಚಾರದಲ್ಲಿ ರಾಜ್ಯದ ಪರವಾಗಿ ಸಮರ್ಥವಾದ ಮಂಡಿಸುವ ವಕೀಲರನ್ನು ನೇಮಿಸಬೇಕೆಂದು ಆಗ್ರಹಿಸಿದರು. ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಮುಖಂಡರಾದ ನಾಲಾಬೀದಿ ರವಿ, ಬೋಗಾದಿ ಸಿದ್ದೇಗೌಡ, ಗುರುಬಸಪ್ಪ, ಮಹದೇವಸ್ವಾಮಿ, ಎಲ್‌ಐಸಿ ಸಿದ್ದಪ್ಪ, ಗೋವಿಂದರಾಜು, ಸ್ವಾಮಿಗೈಡ್, ಮಾದಪ್ಪ, ಹರೀಶ್, ಕಿಶೋರ್, ಶ್ರೀನಿವಾಸ್, ಮದನ್, ಸ್ವಾಮಿ, ಬಸವರಾಜು ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು..

ನಕ್ಕರೆ ಅದೇ ಸ್ವರ್ಗ

ಆತ : ಈ ವಾಚುಗಳನ್ನು ಇಷ್ಟು ಕಡಿಮೆ ದರದಲ್ಲಿ ಮಾರಿದರೆ ನಿಮಗೆ ಏನು ಲಾಭ ಸಿಗುತ್ತೆ?

ಈತ : ರಿಪೇರಿಯ ಸಂದರ್ಭದಲ್ಲಿ ಮತ್ತೆ ಹಣ ವಾಪಸ್ ಬರುತ್ತಲ್ಲ ಸಾರ್!

ಮೈಸೂರು ಮಿತ್ರ

ಶುಕ್ರವಾರ, 15 ಸೆಪ್ಟೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ರತ್ನವನ್ನು ಇತರರು ಹುಡುಕಿಕೊಂಡು ಬರುವವರೇ ಹೊರತು ರತ್ನವೇ ಇತರರನ್ನು ಹುಡುಕಿಕೊಂಡು ಹೋಗುವುದಿಲ್ಲ. –ಕಾಳಿದಾಸ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಬ್ಬಿನ ಮೇಲೆ ಜೇನು ಇಟ್ಟಂತಾಯ್ತು

ನಿಮ್ಮ ಪತ್ರಗಳು

ಮಹಿಷ ದಸರೆಯ ಆರಾಧಕರಲ್ಲಿ ಮನವಿ

ಮಾನ್ಯರೆ,

ಇತ್ತೀಚೆಗೆ ಮೈಸೂರು ದಸರೆಯ ವೇಳೆ ಚಾಮುಂಡಿ ತಾಯಿಯನ್ನು ಪಕ್ಕಕ್ಕೆ ಸರಿಸಿ, ಮಹಿಷ ದಸರೆಯ ವೈಭವೀಕರಣಕ್ಕಾಗಿ ಮತ್ತು ಇದರ ಆಚರಣೆಗೆ ಕೆಲ ಸಮಾನ ಮನಸ್ಕರ ವೇದಿಕೆ ಸಜ್ಜಾಗಿ ಸದ್ದು ಮಾಡುತ್ತಿದೆ. ಇವರ ಪ್ರಕಾರ ಮಹಿಷಾಸುರ ಒಬ್ಬ ಬೌದ್ಧ ಮತಾವಲಂಬಿ ರಾಜ. ಆತ ಅತ್ಯುತ್ತಮ ಆಡಳಿತ ನೀಡಿದ್ದ ಹಾಗೂ ಇಂದು ಮೇಲ್ಜಾತಿಯವರು ಇತಿಹಾಸ ತಿರುಚಿ ಆತ ಪ್ರತಿನಿಧಿಸಿದ್ದ ಜಾತಿಯ ಕಾರಣ, ಆ ರಾಜನನ್ನು ರಾಕ್ಷಸ ಎಂದು ಬಿಂಬಿಸಿದ್ದಾರೆ ಎನ್ನುವುದು ಇವರ ಆರೋಪ.

ಆಯ್ತು ಮೇಲ್ಜಾತಿಯವರು ಒಮ್ಮೆ ಇಂಥಹ ಸತ್ಯ ತಿರುಚುವ ಕೆಲಸ ಮಾಡಿದ್ದರೆ ರಾವಣಾಸುರನನ್ನು ರಾಕ್ಷಸನೆಂದು ಖುದ್ದು ಬ್ರಾಹ್ಮಣರು ಇಂದು ಕರೆಯುತ್ತಿರಲಿಲ್ಲ. ಇಲ್ಲಿ ರಾವಣನು ಜನ್ಮತಃ ಬ್ರಾಹ್ಮಣ. ಆದರೆ ಅವನು ಪರಸ್ತ್ರೀ ಸೀತೆಯನ್ನು ಅಪಹರಿಸಿದ ಕಾರಣ, ಸಮಾಜದಲ್ಲಿ ಆತನಿಗೆ ರಾಕ್ಷಸ ಪಟ್ಟ ದೊರಕಿದೆ. ಇದನ್ನು ಹೊರತು ಪಡಿಸಿದರೆ, ಆತನನ್ನು ಮಹಾ ಬ್ರಾಹ್ಮಣ ಎಂದೇ ಪುರಾಣದಲ್ಲಿ ಉಲ್ಲೇಖಿಸಲಾಗಿದೆ.

ಆಯಿತು..ಒಂದೊಮ್ಮೆ ಈ ವಿಚಾರವಾದಿಗಳ ವಾದ ಸರಿಯಿದ್ದರೆ, ಅವರ ಪ್ರಕಾರ ಈ ಚರ್ಚಿತ ಮಹಿಷಾಸುರನ ಸ್ವರೂಪ, ಸಂಪೂರ್ಣವಾಗಿ ಭಿನ್ನವಾಗಿರಬೇಕು. ಇವರು ಅಸಲಿಗೆ ಈ ಫೋಟೋದಲ್ಲಿರುವ ಮೂರ್ತಿಯನ್ನು ಸಂಪೂರ್ಣವಾಗಿ ತಿರಸ್ಕರಿಸಬೇಕು ಇವರು ಮೇಲ್ಜಾತಿಯವರ ತಪ್ಪು ಕಲ್ಪನೆಯ ಮೂರ್ತಿ ಬಳಿಯೂ ಸುಳಿಯಬಾರದು. ಇಲ್ಲಿ ಮಹಿಷಾಸುರ ವಿಭೂತಿ ಬಳಿದು, ಕುಂಕುಮ ಹಣೆಗೆ ಧರಿಸಿರುವುದು, ಬೌದ್ಧರ ವೇಷ ಭೂಷಣಕ್ಕೆ ತಾಳೆಯಾಗುವುದಿಲ್ಲ. ಹಾಗೊಂದು ವೇಳೆ ನಿಮಗೆ ಒಗ್ಗದ, ಮೈಸೂರಿನ ಚಾಮುಂಡಿ ಬೆಟ್ಟದ ಮೇಲಿರುವ, ಈ ಅಸಂಬದ್ಧ ಪ್ರತಿಮೆ ಪೂಜಿಸಿ ಇದರ ಮುಂದೆ ಸಮಾವೇಶ ನಡೆಸಿದರೆ, ನಿಮ್ಮ ತತ್ತ್ವ ಸಿದ್ಧಾಂತಕ್ಕೆ ತಿಲಾಂಜಲಿ ನೀಡಿ ಅಪಚಾರವೆಸಗಿದಂತೆಯೆ ಸರಿ. ಯಾವುದಕ್ಕೂ ಒಮ್ಮೆ ಯೋಚಿಸಿ ನೋಡಿರಿ.

–ನಾಗಮಂಗಲ ನರಸಿಂಹ ಮೂರ್ತಿ, ಮೈಸೂರು

ದಲಿತ ವಿರೋಧಿ ಸಚಿವ ಸುಧಾಕರ್ ರಾಜೀನಾಮೆ ಕೊಡಲಿ

ಮಾನ್ಯರೆ,

ಕಾಂಗ್ರೆಸ್ ಸರ್ಕಾರದ ಸಚಿವ ಸಂಪುಟದಲ್ಲಿರುವ ಸಚಿವ ಡಿ.ಸುಧಾಕರ್ ಅವರಿಂದ ದಲಿತ ಕುಟುಂಬವೊಂದು ಪ್ರಾಣಭಯದಿಂದ ಬದುಕುತ್ತಿದೆ. ಇದು ಇಡೀ ರಾಜ್ಯದಲ್ಲಿ ಇಂದಿನ ದಲಿತರ ಸ್ಥಿತಿಯ ಚಿತ್ರಣವಾಗಿದೆ. ಡಿ. ಸುಧಾಕರ್ ಅವರ ವಿರುದ್ಧ ದಲಿತರ ಮೇಲೆ ದೌರ್ಜನ್ಯ ಮತ್ತು ಜಾತಿ ನಿಂದನೆ ಪ್ರಕರಣದಡಿ ಎಫ್‌ಐಆರ್ ದಾಖಲಾಗಿದ್ದರೂ ಇದುವರೆಗೂ ಅವರ ರಾಜೀನಾಮೆ ಪಡೆಯದೆ ಇರುವುದು ಸರ್ಕಾರದ ಇಬ್ಬಂದಿ ನೀತಿಯನ್ನು ತೋರುತ್ತದೆ ಮತ್ತು ಈ ಸರ್ಕಾರದಲ್ಲಿ ದಲಿತರ ಪ್ರಾಣಗಳಿಗೆ, ಮಾನಗಳಿಗೆ ಬೆಲೆ ಇಲ್ಲವೆಂಬುದು ಖಚಿತವಾಗಿದೆ.

ಸೆವೆನ್ ಹಿಲ್ಸ್ ಕಂಪನಿಯ ಪಾಲುದಾರರಾದ ಡಿ.ಸುಧಾಕರ್ ಅವರು ಮೋಸದಿಂದ ಯಲಹಂಕ ಗ್ರಾಮದ ಸುಬ್ಬಮ್ಮ ಅವರಿಗೆ ಸೇರಿದ 108/1 ಸರ್ವೆ ನಂಬರ್ ಜಮೀನನ್ನು ಕಬಳಿಕೆ ಮಾಡಿರುವುದು ಸ್ಪಷ್ಟವಾಗಿ ದಾಖಲೆ ಸಮೇತ ತಿಳಿಯುತ್ತಿದೆ. ಈ ಜಮೀನಿನ ವಿವಾದವು ನ್ಯಾಯಾಲಯದಲ್ಲಿ ಇರುವಾಗಲೇ ಡಿ. ಸುಧಾಕರ್ ಅವರು ತಮ್ಮ 40 ಜನ ಪುಡಿ ರೌಡಿಗಳನ್ನು ಕಳಿಸಿ ಆ ದಲಿತ ಕುಟುಂಬದ ಹೆಣ್ಣು ಮಕ್ಕಳ ಮೇಲೆ ಹಲ್ಲೆ ಮಾಡಿದ್ದಲ್ಲದೆ ಜೆಸಿಬಿಯಿಂದ ಅವರ ಮನೆಯನ್ನು ನೆಲಸಮ ಮಾಡಿದ್ದಾರೆ. ಈ ವಿಚಾರವಾಗಿ ವೈರಲ್ ಆದ ವಿಡಿಯೋ ಒಂದರಲ್ಲಿ ನಾನು ಮಚ್ಚುಗಳನ್ನು ಹಿಡಿದು ಆಂಧ್ರಪ್ರದೇಶದಲ್ಲಿ ಓಡಾಡಿರುವ ರೌಡಿ ಎಂದು ಅವರೇ ಹೇಳಿಕೊಂಡಿದ್ದಾರೆ. ಇಂತಹ ರೌಡಿಗಳಿಗೆ ಸಚಿವ ಸ್ಥಾನ ನೀಡಿದ ಕಾಂಗ್ರೆಸ್ ಸರ್ಕಾರದಿಂದ ನಾವು ಉತ್ತಮ ಆಡಳಿತವನ್ನು ನಿರೀಕ್ಷಿಸಲು ಸಾಧ್ಯವೇ?

ಈ ಪ್ರಕರಣದಲ್ಲಿ ಡಿ. ಸುಧಾಕರ್ ಅವರ ರಾಜೀನಾಮೆಯನ್ನು ಶೀಘ್ರವೇ ಪಡೆದು ಅವರನ್ನು ಕಾನೂನಾತ್ಮಕವಾಗಿ ಬಂಧಿಸಬೇಕೆಂಬುದು ನನ್ನ ಆಗ್ರಹವಾಗಿದೆ. ಕಾಂಗ್ರೆಸ್ ಸರ್ಕಾರದ ಮತ್ತೊಬ್ಬ ಸಚಿವರಾದ ಎಸ್.ಎಸ್.ಮಲ್ಲಿಕಾರ್ಜುನ್ ಸಾರ್ವಜನಿಕ ವಾಗಿ ಜಾತಿ ನಿಂದಕ ಪದವನ್ನು ಬಳಸಿ ಸಚಿವ ಸಂಪುಟದಲ್ಲಿ ಉಳಿಯುತ್ತಾರೆ. ಈಗ ಸಚಿವ ಸಂಪುಟದ ಮತ್ತೊಬ್ಬ ಸಚಿವ ಡಿ.ಸುಧಾಕರ್ ದಲಿತರ ಮೇಲೆ ದೌರ್ಜನ್ಯ ಎಸಗಿ ಪ್ರಾಣಬೆದರಿಕೆ ಒಡ್ಡಿ ಸಚಿವ ಸಂಪುಟದಲ್ಲಿ ಉಳಿಯಬಹುದಾದರೆ ಇಂಥ ಸರ್ಕಾರದಿಂದ ದಲಿತರ ರಕ್ಷಣೆ ಸಾಧ್ಯವೇ? ಎಸ್‌ಸಿ, ಎಸ್‌ಪಿ, ಟಿಎಸ್‌ಪಿ ಹಣವನ್ನು ತನ್ನ ಇಚ್ಛೆ ಬಂದಂತೆ ಬಳಸಿಕೊಳ್ಳುತ್ತಿರುವ ಈ ಸರ್ಕಾರದಿಂದ ಪರಿಶಿಷ್ಟ ಜಾತಿಯವರ ಅಭಿವೃದ್ಧಿ ಸಾಧ್ಯವೇ? ಇಂತಹ ಆ ದಲಿತ ವಿರೋಧಿ ಕಾಂಗ್ರೆಸ್ ಸರ್ಕಾರವು ಈ ರಾಜ್ಯಕ್ಕೆ ಬೇಕಾಗಿದೆಯೇ?

– ಎಂ.ಎಸ್.ಪರಮಾನಂದ, ರಾಜ್ಯ ಕಾರ್ಯದರ್ಶಿ, ಎಸ್.ಸಿ.ಮೋರ್ಚಾ, ಬಿಜೆಪಿ

ಪರಿಸರಸ್ನೇಹಿ ಗಣಪನ ಪೂಜಿಸೋಣ!

ಮಾನ್ಯರೆ,

ಭಾರತದಲ್ಲಿ ವೈಭವದಿಂದ ಆಚರಿಸುವ ಹಬ್ಬಗಳಲ್ಲಿ ಗೌರಿ–ಗಣೇಶ ಹಬ್ಬ ಕೂಡ ಒಂದು. ವಿಘ್ನವಿನಾಶಕ, ಮೋದಕ ಪ್ರಿಯ ಗಣೇಶನ ಹಬ್ಬಕ್ಕೆ ಇದೀಗ ದಿನಗಣನೆ ಆರಂಭವಾಗಿದೆ.

ರಾಜ್ಯದ ಯಾವುದೇ ರಸ್ತೆಗಳಲ್ಲಿ ತಿರುಗಾಡಿದರೂ ಮಾರಾಟಕ್ಕಿಟ್ಟ ಬಣ್ಣ ಬಣ್ಣದ ಗಣಪನ ವಿಗ್ರಹಗಳೇ ಕಣ್ಣಿಗೆ ಬೀಳುತ್ತಿವೆ. ಗಣೇಶ ಚತುರ್ಥಿ ದಿನ ಪ್ರತಿಷ್ಠಾಪನೆಯಾಗುವ ಗಣಪ ಆಯಾ ಮನೆಯವರ ಪದ್ಧತಿಯಂತೆ ಪೂಜಿಸಿಕೊಂಡು, ಕೊನೆಗೆ ನೀರಿನಲ್ಲಿ ವಿಸರ್ಜನೆಗೊಳ್ಳುತ್ತಾನೆ. ಆದರೆ ಮಾರುಕಟ್ಟೆಯಲ್ಲಿ ಇತ್ತೀಚಿನ ದಿನಗಳಲ್ಲಿ ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿಒಪಿ) ಗಣಪತಿ ಮೂರ್ತಿಗಳು ಹೆಚ್ಚು ಸಿಗುತ್ತಿದ್ದು, ಇದರಲ್ಲಿ ವಿಷಕಾರಿ ರಾಸಾಯನಿಕ ಮತ್ತು ಲೋಹ ಲೇಪಿತ ಬಣ್ಣಗಳನ್ನು ಬಳಸಲಾಗುತ್ತದೆ. ಇವುಗಳನ್ನು ನೀರಿನಲ್ಲಿ ವಿಸರ್ಜನೆ ಮಾಡುವುದರಿಂದ ಜಲಚರಗಳಿಗಲ್ಲದೆ, ಪರಿಸರಕ್ಕೂ ಹಾನಿಯುಂಟಾಗುತ್ತದೆ. ಇದನ್ನು ತಡೆಯುವ ಸಲುವಾಗಿ ಪರಿಸರ ಸ್ನೇಹಿ ಗಣಪನನ್ನು ಪ್ರತಿಷ್ಠಾಪಿಸಿಕೊಳ್ಳುವುದು ಉತ್ತಮ.

ಇದಲ್ಲದೇ ಪಕ್ಕದ ಮನೆಯವರಿಗಿಂತ ನಮ್ಮ ಮನೆಯಲ್ಲಿ ಹೆಚ್ಚು ಶ್ರೀಮಂತಿಕೆ ತೋರಿಸಿ ಕೊಳ್ಳುವ ಆಸೆ ಕೆಲವರಲ್ಲಿ ಇರುತ್ತದೆ! ಈ ನಿಟ್ಟಿನಲ್ಲಿ ದೊಡ್ಡ ದೊಡ್ಡ ಧ್ವನಿವರ್ಧಕಗಳನ್ನು ಅಳವಡಿಸಿ ಬೆಳಿಗ್ಗೆಯಿಂದ ಸಂಜೆ ತನಕ ಹಾಡನ್ನು ಹಚ್ಚಿಯೇ ಇಡುವುದು, ವಾಯು ಮಾಲಿನ್ಯ ಉಂಟಾಗುವಷ್ಟು ಪಟಾಕಿ ಸಿಡಿಸುವುದು, ವಿಸರ್ಜನೆಯ ಸಂದರ್ಭದಲ್ಲೂ ಗಣೇಶನನ್ನು ಎಲ್ಲೆಂದರಲ್ಲಿ ನೀರಲ್ಲಿ ಬಿಟ್ಟು ಬರುವ ಕೆಲಸ ಮಾಡುತ್ತಾರೆ. ಈ ಎಲ್ಲಾ ತಪ್ಪುಗಳಿಂದ ಪರಿಸರ ಮಾಲಿನ್ಯ ಉಂಟಾಗುವುದೆಂಬ ಅರಿವು ನಮಗಿರಬೇಕು. ನಮ್ಮ ಪರಿಸರದಲ್ಲಿ ನಾವೇ ಉಂಟುಮಾಡಿದ ಮಾಲಿನ್ಯಗಳು ಸಾಕಷ್ಟು ಆರೋಗ್ಯ ಸಮಸ್ಯೆಯನ್ನು ತಂದೊಡ್ಡುತ್ತವೆ. ಅದಕ್ಕಾಗಿಯಾದರೂ ನಾವು ಎಚ್ಚೆತ್ತುಕೊಳ್ಳಬೇಕು. ನಮ್ಮ ಸಂತೋಷದ ಹಬ್ಬದ ಆಚರಣೆ ನಮಗೆ ನೋವನ್ನು ತರಬಾರದು. ಹಾಗಾಗಿ ನಾವು ಒಂದಿಷ್ಟು ಒಳ್ಳೆಯ ಕೆಲಸ ಹಾಗೂ ಪ್ರತಿಜ್ಞೆಯ ಮೂಲಕ ಹಬ್ಬದ ಆಚರಣೆ ಮಾಡುವುದು ಸೂಕ್ತ. ಇದರಿಂದ ಆರೋಗ್ಯಕರ ಹಬ್ಬದ ಆಚರಣೆ ನಮ್ಮದಾಗುವುದು.

ಪರಿಸರವನ್ನು ಈಗಾಗಲೇ ಸಾಕಷ್ಟು ಹದಗೆಡಿಸಿದ್ದೇವೆ. ನಾವು ಪರಿಸರ ಕಾಪಾಡಿದರೆ, ಪರಿಸರ ನಮ್ಮನ್ನು ಅಷ್ಟೇ ಚೆನ್ನಾಗಿ ನೋಡಿಕೊಳ್ಳುತ್ತದೆ. ಪ್ರಕೃತಿ ವಿಕೋಪದಿಂದ ನಾವುಗಳು ಈಗಾಗಲೇ ಸಾಕಷ್ಟು ಸಮಸ್ಯೆ ಎದುರಿಸಿದ್ದೇವೆ. ಹೀಗಾಗಿ ಈ ಬಾರಿಯ ಗಣೇಶನ ಹಬ್ಬದಲ್ಲಿ ಎಲ್ಲರೂ ಪರಿಸರ ಸ್ನೇಹಿ ಗಣಪನ ಮೊರೆ ಹೋಗೋಣ. ಪರಿಸರ ಸ್ನೇಹಿಯಾಗಿ ಹಬ್ಬವನ್ನು ಆಚರಿಸಿ ಸಂಭ್ರಮಿಸೋಣ. ಇದರ ಜೊತೆಗೆ ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ಜವಾಬ್ದಾರಿಯೊಂದಿಗೆ ಸರಳತೆಯ ಜೊತೆಗೆ ಅರ್ಥಪೂರ್ಣ ಗಣೇಶ ಉತ್ಸವ ಆಚರಿಸೋಣ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಉದ್ದೇಶಿತ ಕ್ಷೇತ್ರ ಪುನರ್ವಿಂಗಡಣೆ: ವ್ಯಾಪಕ ಚರ್ಚೆ ಅನಿವಾರ್ಯತೆ

ಆಗಸ್ಟ್ ತಿಂಗಳ 25 ಮತ್ತು 26ರಂದು ಮೈಸೂರು ವಿಶ್ವವಿದ್ಯಾನಿಲಯದ ಡಾ. ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ, ಡಾ.ಬಿ.ಆರ್.ಅಂಬೇಡ್ಕರ್ ಪೀಠ ಮತ್ತು ಇಂಡಿಯನ್ ಪಾಲಿಟಿ ಫೋರಮ್ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿದ್ದ 'ಕ್ಷೇತ್ರ ಪುನರ್ವಿಂಗಡಣೆ: ಅಂತರ ರಾಜ್ಯ ಅಸಮತೆ ಮತ್ತು ಅದರ ಪರಿಣಾಮಗಳು' ರಾಷ್ಟ್ರ ಮಟ್ಟದ ಸಮ್ಮೇಳನ, ಭವಿಷ್ಯದ ಭಾರತದಲ್ಲಿ ರಾಜ್ಯ–ರಾಜ್ಯಗಳ ನಡುವೆ ಸಂಭವಿಸಬಹುದಾದ ಸಾಮಾಜಿಕ–ಆರ್ಥಿಕ ದೂರವನ್ನು ಕುರಿತಂತೆ ಇದುವರೆಗೂ ಹೆಚ್ಚಿನ ಚರ್ಚೆಗೆ ಒಳಪಡದ ಬಹು ಮುಖ್ಯವಾದ ವಿಚಾರವೊಂದನ್ನು ನಮ್ಮ ಮುಂದೆ ತೆರೆದಿಟ್ಟಿತು. ಇಂಗ್ಲಿಷ್‌ನಲ್ಲಿ 'ಡಿಲಿಮಿಟೇಷನ್' ಎಂದು ಗುರುತಿಸಲಾಗುವ ಪರಿಕಲ್ಪನೆಯ ಕನ್ನಡ ರೂಪವೇ 'ಕ್ಷೇತ್ರ ಪುನರ್ವಿಂಗಡಣೆ'. ಇಲ್ಲಿ ಕ್ಷೇತ್ರ ಎನ್ನುವ ಪದ ಸಂಸತ್ ಚುನಾವಣಾ ಕ್ಷೇತ್ರಗಳಿಗೆ ಸಂಬಂಧಿಸಿದ ಹಾಗೆ ಬಳಸಲ್ಪಡುತ್ತದೆ. ಕ್ಷೇತ್ರ ಪುನರ್ವಿಂಗಡಣೆ ನಡೆದಾಗ ಪ್ರತಿ ರಾಜ್ಯಕ್ಕೂ ಈಗ ನಿಗದಿತವಾಗಿರುವ ಚುನಾವಣಾ ಕ್ಷೇತ್ರಗಳ ಸಂಖ್ಯೆಯಲ್ಲಿ ವ್ಯತ್ಯಾಸಗಳು ಉಂಟಾಗಬಹುದು. ಈ ಪ್ರಕ್ರಿಯೆ ಏತಕ್ಕೆ ಮತ್ತು ಹೇಗೆ ನಡೆಯುತ್ತದೆ; ಅದಕ್ಕೆ ಬಳಸುವ ಮಾನದಂಡ ಯಾವುದು ಮತ್ತು ಸಂಸತ್ತಿನಲ್ಲಿ ವಿವಿಧ ರಾಜ್ಯಗಳ ಪ್ರಾತಿನಿಧ್ಯದ ಸಂಖ್ಯೆ ಮತ್ತು ಸ್ವರೂಪಗಳಲ್ಲಿ ಉಂಟಾಗುವ ಬದಲಾವಣೆಗಳೇನು ಮತ್ತು ರಾಜ್ಯದ ಸಮಗ್ರ ಅಭಿವೃದ್ಧಿಯ ಮೇಲೆ ಈ ಬದಲಾವಣೆ ತರಬಲ್ಲ ಪರಿಣಾಮಗಳೇನು–ಈ ಮುಖ್ಯ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕಲು ಪ್ರಾಯಶಃ ಪ್ರಥಮ ಬಾರಿಗೆ ಸಾರ್ವಜನಿಕ ವಲಯದಲ್ಲಿ ಈ ರಾಷ್ಟ್ರೀಯ ಸಮ್ಮೇಳನ ಪ್ರಯತ್ನ ನಡೆಸಿದ್ದು ಅದರ ವೈಶಿಷ್ಟ್ಯವಾಗಿತ್ತು.

ಲೋಕಸಭೆಯ ಚುನಾವಣಾ ಕ್ಷೇತ್ರಗಳ ಪುನರ್ವಿಂಗಡಣೆಯಿಂದ ಆಗಬಹುದಾದ ಪರಿಣಾಮಗಳ ಬಗ್ಗೆ ಚರ್ಚೆಯಲ್ಲಿ ತೊಡಗುವ ಮುನ್ನ ಈ ಪದದ ಅರ್ಥವನ್ನು ಸರಿಯಾಗಿ ಗ್ರಹಿಸುವ ಅಗತ್ಯವಿದೆ. ಕ್ಷೇತ್ರ ಪುನರ್ವಿಂಗಡಣೆಯ ಪ್ರಕ್ರಿಯೆ ನಡೆಯುವುದು 2026–27ರ ಜನಗಣತಿಯ ನಂತರ. ಭಾರತೀಯ ಸಂವಿಧಾನದ 81ನೇ ವಿಧಿಯ ಅನ್ವಯ ಸಂಸತ್ತಿನಲ್ಲಿ ಯಾವ–ಯಾವ ರಾಜ್ಯಕ್ಕೆ ಎಷ್ಟೆಷ್ಟು ಚುನಾವಣಾ ಕ್ಷೇತ್ರಗಳು ನಿಗದಿಯಾಗುತ್ತವೆ ಎಂಬುದು ಆ ರಾಜ್ಯದ ಜನಸಂಖ್ಯೆಯ ಆಧಾರದ ಮೇಲೆ. ಚುನಾವಣಾ ಕ್ಷೇತ್ರಗಳ ಹಂಚಿಕೆ ಕಳೆದ ಬಾರಿ ನಡೆದದ್ದು 1971ರ ಜನಗಣತಿಯ ಆಧಾರದ ಮೇಲೆ. ಅಂದಿನಿಂದ ಇಂದಿನವರೆಗೆ ಕ್ಷೇತ್ರಗಳ ಮರು ಹಂಚಿಕೆ ಕಾರ್ಯ ನಡೆದಿಲ್ಲ. ಆಗ ನಿಗದಿಯಾದ 543 ಕ್ಷೇತ್ರಗಳೇ ಇಂದಿಗೂ ಉಳಿದುಕೊಂಡು ಬಂದಿವೆ ಈಗೇನಾದರೂ ಈ ಪ್ರಕ್ರಿಯೆ ನಡೆದರೆ ರಾಜ್ಯಗಳ ನಡುವಣ ಕ್ಷೇತ್ರ ಹಂಚಿಕೆಯಲ್ಲಿ ಗಮನಾರ್ಹವಾದ ಬದಲಾವಣೆಗಳಾಗಲಿವೆ. ಕ್ಷೇತ್ರಗಳ ಪುನರ್ವಿಂಗಡಣೆ 2026ರ ನಂತರವೇ ನಡೆಯಬೇಕಾಗಿದೆ. ಕೋವಿಡ್ ಕಾರಣದಿಂದಾಗಿ 2021ರ ಜನಗಣತಿಯನ್ನು ಕೈಗೊಳ್ಳಲು ಆಗದಿದ್ದುದರಿಂದ ಪುನರ್ವಿಂಗಡಣೆಯ ಪ್ರಕ್ರಿಯೆ ನಡೆಯುವುದು 2026–27ರ ಜನಗಣತಿಯ ಜನಸಂಖ್ಯಾ ಮಾಹಿತಿ ಆಧಾರದ ಮೇಲೆ. ಕ್ಷೇತ್ರಗಳ ಮರುಹಂಚಿಕೆ ರಾಜ್ಯಗಳ ಜನಸಂಖ್ಯೆಯ ಆಧಾರದ ಮೇಲೆ ನಡೆದಾಗ ಸಹಜವಾಗಿಯೇ ಕೆಲ ರಾಜ್ಯಗಳ ಪ್ರಾತಿನಿಧ್ಯ ಕಡಿಮೆಯಾಗುತ್ತದೆ, ಏಕೆಂದರೆ ದೇಶದ ಜನಸಂಖ್ಯಾ ಬೆಳವಣಿಗೆಯ ಪ್ರಮಾಣ ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿರುತ್ತದೆ. 1971ರಲ್ಲಿ 55 ಕೋಟಿಯಷ್ಟಿದ್ದ ದೇಶದ ಜನಸಂಖ್ಯೆ ಈಗ 139 ಕೋಟಿಯಷ್ಟಾಗಿದೆ. 2036ರ ವೇಳೆಗೆ ಇದು 152 ಕೋಟಿಯಾಗಲಿದೆ ಎಂದು ಅಂದಾಜು ಮಾಡಲಾಗಿದೆ. ಆದರೆ ಈ ಹೆಚ್ಚಳ ಎಲ್ಲ ರಾಜ್ಯಗಳಲ್ಲೂ ಸಮ ಪ್ರಮಾಣದಲ್ಲಿ ಆಗಿಲ್ಲ ಅಥವಾ ಆಗುವುದಿಲ್ಲ ಎನ್ನುವ ಅಂಶವೇ ಇಂದು ಕ್ಷೇತ್ರಗಳ ಮರುಹಂಚಿಕೆ ತರಬಲ್ಲ ಪರಿಣಾಮಗಳ ಬಗ್ಗೆ ಗಂಭೀರ ಚಿಂತನೆ ಮತ್ತು ಚರ್ಚೆಗಳಿಗೆ ಎಡೆ ಮಾಡಿಕೊಟ್ಟಿರುವುದು.

ದೇಶದ ಜನಸಂಖ್ಯೆಯ ಬೆಳವಣಿಗೆ ಎಲ್ಲ ರಾಜ್ಯಗಳಲ್ಲೂ ಏಕಪ್ರಕಾರವಾಗಿಲ್ಲ ಎನ್ನುವುದು ನಮಗೆ ತಿಳಿದಿರುವ ವಿಷಯವೇ. 2011ರ ಜನಗಣತಿ (2021ರಲ್ಲಿ ಜನಗಣತಿ ನಡೆಯದಿದ್ದುದರಿಂದ ನಮಗೆ ಲಭ್ಯವಿರುವ ಇತ್ತೀಚಿನ ಜನಗಣತಿಯ ಮಾಹಿತಿ ಎಂದರೆ 2011ರ ಮಾಹಿತಿಯೇ ಎನ್ನುವುದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕಾಗಿದೆ)ಯ ವರದಿಯ ಪ್ರಕಾರ ಮೂರು, ಎಂದರೆ ಉತ್ತರ ಪ್ರದೇಶ, ಮಹಾರಾಷ್ಟ್ರ ಮತ್ತು ಬಿಹಾರ ರಾಜ್ಯಗಳಲ್ಲಿ ದೇಶದ ಶೇ.35ರಷ್ಟು ಜನಸಂಖ್ಯೆ ಕೇಂದ್ರೀಕೃತವಾಗಿದ್ದು, ತಮಿಳುನಾಡು, ಕರ್ನಾಟಕ, ಕೇರಳ, ತೆಲಂಗಾಣ ಮತ್ತು ಆಂಧ್ರ ಪ್ರದೇಶ–ಈ ಐದು ರಾಜ್ಯಗಳ ಒಟ್ಟು ಜನಸಂಖ್ಯೆ ರಾಷ್ಟ್ರೀಯ ಜನಸಂಖ್ಯೆಯ ಶೇ.23ರಷ್ಟಿದೆ. ಈ ಪರಿಸ್ಥಿತಿ ಇಂದಿಗೂ ಮುಂದುವರೆದಿದ್ದು, ಲಭ್ಯ ಮಾಹಿತಿ ಪ್ರಕಾರ ಉತ್ತರಪ್ರದೇಶ, ಮಹಾರಾಷ್ಟ್ರ, ಬಿಹಾರ, ಪಶ್ಚಿಮ ಬಂಗಾಳ ಮತ್ತು ಮಧ್ಯಪ್ರದೇಶ–ಈ ಐದು ರಾಜ್ಯಗಳಲ್ಲಿ ಹೆಚ್ಚು–ಕಡಿಮೆ ದೇಶದ ಅರ್ಧದಷ್ಟು ಜನಸಂಖ್ಯೆಯನ್ನು ಕಾಣಬಹುದು. ಆದರೆ ದಕ್ಷಿಣ ರಾಜ್ಯಗಳಲ್ಲಿ ಜನಸಂಖ್ಯಾ ಬೆಳವಣಿಗೆ ಗಮನಾರ್ಹ ಪ್ರಮಾಣದಲ್ಲಿ ಕಡಿಮೆಯಾಗಿದ್ದು ಜನಸಂಖ್ಯೆಯ ಆಧಾರದ ಮೇಲೆ ರಾಜ್ಯಗಳಿಗೆ ಸಂಸತ್ತು ಸೀಟುಗಳನ್ನು ಮರು ಹಂಚಿಕೆ ಮಾಡಿದಾಗ ದಕ್ಷಿಣ ರಾಜ್ಯಗಳ ಪ್ರಾತಿನಿಧ್ಯಕ್ಕೆ ಧಕ್ಕೆಯುಂಟಾಗುತ್ತದೆ ಎಂಬ ಧ್ವನಿ ಇಂದು ಹೆಚ್ಚು–ಹೆಚ್ಚು ಗಟ್ಟಿಯಾಗುತ್ತಿದೆ. ಜನಸಂಖ್ಯಾ ಪ್ರಮಾಣದ ಹೆಚ್ಚಳ ಅಥವಾ ಇಳಿಕೆ ಚುನಾವಣಾ ಕ್ಷೇತ್ರ ಗಡಿಗಳ ಮರು ನಿಗದಿಪಡಿಸುವ ಪ್ರಕ್ರಿಯೆಯನ್ನೂ ಒಳಗೊಳ್ಳುವುದರಿಂದ ಪ್ರಾತಿನಿಧ್ಯ ಆಧಾರಿತ ರಾಜಕಾರಣದ ಸ್ವರೂಪವೇ ಬದಲಾಗುವ ಸಾಧ್ಯತೆಯೂ ಇದೆ.



ರಾಜ್ಯಗಳಿಗೆ ಸಂಸತ್ತು ಸೀಟುಗಳನ್ನು ಮರು ಹಂಚಿಕೆ ಮಾಡಿದಾಗ ದಕ್ಷಿಣ ರಾಜ್ಯಗಳ ಪ್ರಾತಿನಿಧ್ಯಕ್ಕೆ ಧಕ್ಕೆಯುಂಟಾಗುತ್ತದೆ ಎಂಬ ಧ್ವನಿ ಇಂದು ಹೆಚ್ಚು-ಹೆಚ್ಚು ಗಟ್ಟಿಯಾಗುತ್ತಿದೆ. ಜನಸಂಖ್ಯಾ ಪ್ರಮಾಣದ ಹೆಚ್ಚಳ ಅಥವಾ ಇಳಿಕೆ ಚುನಾವಣಾ ಕ್ಷೇತ್ರ ಗಡಿಗಳ ಮರು ನಿಗದಿಪಡಿಸುವ ಪ್ರಕ್ರಿಯೆಯನ್ನು ಒಳಗೊಳ್ಳುವುದರಿಂದ ಪ್ರಾತಿನಿಧ್ಯ ಆಧಾರಿತ ರಾಜಕಾರಣದ ಸ್ವರೂಪವೇ ಬದಲಾಗುವ ಸಾಧ್ಯತೆಯೂ ಇದೆ.

2026ರ ನಂತರ ಕ್ಷೇತ್ರ ಪುನರ್ವಿಂಗಡಣೆಯಾದರೆ ಲೋಕಸಭೆಯ ಒಟ್ಟು ಸದಸ್ಯ ಸಂಖ್ಯೆ 846/8ಕ್ಕೆ ಏರುವ ನಿರೀಕ್ಷೆ ಇದೆ. ಇತ್ತೀಚೆಗಷ್ಟೇ ದೆಹಲಿಯಲ್ಲಿ ಉದ್ಘಾಟನೆಯಾದ ಹೊಸ ಸಂಸತ್ ಭವನದಲ್ಲಿ ಈ ಸದಸ್ಯರಿಗೆ ಆಸನ ವ್ಯವಸ್ಥೆ ಕಲ್ಪಿಸಲಾಗಿದೆ ಎಂಬ ಸುದ್ದಿ ಹೊರಬೀಳುತ್ತಿದ್ದಂತೆ ಅನುಮಾನ–ಅಸಮಾಧಾನಗಳು ಹೊರಬಿದ್ದವು. ಜನಸಂಖ್ಯಾ ನಿಯಂತ್ರಣ ತತ್ವವನ್ನು ಆಚರಣೆಯಾಗಿಸಿದ ದಕ್ಷಿಣ ರಾಜ್ಯಗಳು, ಮಾನವಾಭಿವೃದ್ಧಿಯ ಸೂಚ್ಯಂಕಗಳಾದ ಹೆಚ್ಚಿದ ಸಾಕ್ಷರತಾ ಪ್ರಮಾಣ, ಇಳಿಮುಖವಾದ ಶಿಶು ಮರಣ ದರ, ಏರಿದ ಲಿಂಗಾನುಪಾತ, ಕಡಿಮೆಯಾದ ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳ ವಿವಾಹಗಳು ಹಾಗೂ ಇದರಿಂದ ಏರಿಕೆಯಾದ ಶಾಲಾ ಹಾಜರಾತಿ, ಹೆಚ್ಚಿದ ಆಸ್ಪತ್ರೆ ಜನನಗಳ ಸಂಖ್ಯೆ–ಇವೇ ಮುಂತಾದ ವಿಚಾರಗಳಲ್ಲೂ ಅಭಿವೃದ್ಧಿಯ ಪಥದಲ್ಲಿ ಮುಂದೆ ಸಾಗಿದ್ದೇ ಅಲ್ಲದೆ ಭಾರತದ ಸಾಮಾಜಿಕ–ಆರ್ಥಿಕ ಮುನ್ನಡೆಗೂ ಪ್ರಮುಖ ಕೊಡುಗೆಯನ್ನು ನೀಡಿವೆ. ಸಮಗ್ರ ದೇಶೀಯ ಉತ್ಪನ್ನದಲ್ಲಿ ದೇಶದ ಜನಸಂಖ್ಯೆಯಲ್ಲಿ ಕೇವಲ 18ರಷ್ಟಿರುವ ದಕ್ಷಿಣ ಭಾರತ ರಾಜ್ಯಗಳ ಪಾಲು ಶೇ.35ರಷ್ಟು, ಅಷ್ಟೇ ಅಲ್ಲ, ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯಗಳ ಒಟ್ಟು ಸಮಗ್ರ ದೇಶೀಯ ಉತ್ಪನ್ನ ಭಾರತದ 13 ಪೂರ್ವ ರಾಜ್ಯಗಳ ಜಿಡಿಪಿಗಿಂತ ಹೆಚ್ಚಿದೆ. ದಕ್ಷಿಣ ರಾಜ್ಯಗಳಲ್ಲಿ ತಲಾ ಆದಾಯವೂ ಹೆಚ್ಚು.ಆದರೆ ನಮ್ಮ ಜನಸಂಖ್ಯೆ ಕಡಿಮೆಯಾಯಿತು ಎಂಬ ಕಾರಣಕ್ಕಾಗಿಯೇ ಸಂಸತ್ತಿನಲ್ಲಿ ನಮ್ಮ ಪ್ರಾತಿನಿಧ್ಯವನ್ನೇ ಇಳಿಸುವುದು ಯಾವ ನ್ಯಾಯ ಎಂಬ ಭಾವನೆ ನಿಧಾನವಾಗಿ ದಕ್ಷಿಣ ರಾಜ್ಯಗಳ ರಾಜಕೀಯ – ಸಾರ್ವಜನಿಕ ವಲಯಗಳಲ್ಲಿ ಏಳುತ್ತಿದೆ.

ಕೇವಲ ಜನಸಂಖ್ಯೆಯನ್ನು ಆಧಾರವನ್ನಾಗಿಟ್ಟುಕೊಂಡು ರಾಜ್ಯಗಳಿಗೆ ಸಂಸತ್ತಿನ ಸ್ಥಾನಗಳನ್ನು ನಿಗದಿಪಡಿಸಿದರೆ ಅಂದಾಜುಗಳ ಪ್ರಕಾರ ಸ್ಥಾನಗಳ ಏರಿಕೆ ಉತ್ತರ ಪ್ರದೇಶದಲ್ಲಿ 80ರಿಂದ 146, ಬಿಹಾರದಲ್ಲಿ 40ರಿಂದ 79, ರಾಜಸ್ಥಾನದಲ್ಲಿ 25ರಿಂದ 50 ಮತ್ತು ಮಧ್ಯ ಪ್ರದೇಶದಲ್ಲಿ 29ರಿಂದ 50 ಆಗಲಿದೆ. ದಕ್ಷಿಣ ರಾಜ್ಯಗಳಾದ ತಮಿಳುನಾಡಿನಲ್ಲಿ 29ರಿಂದ 49, ಆಂಧ್ರ ಮತ್ತು ತೆಲಂಗಾಣ ಸೇರಿ 42ರಿಂದ 54, ಕರ್ನಾಟಕದಲ್ಲಿ 28ರಿಂದ 41 ಮತ್ತು ಕೇರಳದಲ್ಲಿ 20 ಇದ್ದು, 20ತ್ತೇ ಮುಂದುವರೆಯಲಿದೆ. ಈ ಲೆಕ್ಕಾಚಾರಗಳಲ್ಲಿ ಉತ್ತರದ 4 ರಾಜ್ಯಗಳ ಒಟ್ಟು ಹೆಚ್ಚಳ 325 ಆದರೆ. ದಕ್ಷಿಣದ ಐದು ರಾಜ್ಯಗಳೂ ಸೇರಿ 164 ಸೀಟುಗಳು ಹೆಚ್ಚಾಗುತ್ತವೆ.

ದಕ್ಷಿಣ ಭಾರತದ ಪ್ರಾತಿನಿಧ್ಯ ಹೊಸ ಸಂಸತ್ತಿನಲ್ಲಿ ಕಡಿಮೆಯಾಗಲಿದೆ ಎಂಬುದು ಸರಿಯೇ. ಆದರೆ ಕ್ಷೇತ್ರ ವಿಂಗಡಣೆಯ ವಿಚಾರವನ್ನು ಕೇವಲ ಉತ್ತರ–ದಕ್ಷಿಣ ಭಾರತದ ರಾಜ್ಯಗಳ ನಡುವಣ ಸಂಘರ್ಷವೆಂದು ಬಿಂಬಿಸದೆ ಕೆಲ ಮೂಲಭೂತ ಪ್ರಶ್ನೆಗಳನ್ನೆತ್ತಿ ವಿಶ್ಲೇಷಣೆಗೆ ಒಳಪಡಿಸಬೇಕು. ಲೋಕಸಭಾ ಸ್ಥಾನಗಳು ಹೆಚ್ಚಾಗಲಿ–ಕಡಿಮೆಯಾಗಲಿ ಅದರ ಪರಿಣಾಮ ಬೀಳುವುದು ಸಮಾಜದ ಯಾವ ವರ್ಗಗಳ ಮೇಲೆ? ಅಧಿಕಾರದ ಮರುಹಂಚಿಕೆಯಾದಾಗ ನಿಜವಾಗಿಯೂ ಪ್ರಜಾಸತ್ತಾತ್ಮಕ ಮೌಲ್ಯಾಚರಣೆಗಳಿಗೆ ಸ್ಥಾನ ಸಿಗುವುದೇ? ದಕ್ಷಿಣ ಭಾರತದ ರಾಜ್ಯಗಳ ಪ್ರಾತಿನಿಧ್ಯ ಕಡಿಮೆಯಾಗಬಹುದು, ಆದರೆ ದಕ್ಷಿಣ ಭಾರತ ಒಂದು ಸಮರೂಪ ಜನ ಸಮುದಾಯವಲ್ಲ, ಹಾಗೆಯೇ ಉತ್ತರ ಭಾರತದ ಕೆಲ ರಾಜ್ಯಗಳಲ್ಲಿ ಹೆಚ್ಚುವ ಸ್ಥಾನಗಳು ಹೋಗುವುದು ಯಾರ ಪಾಲಿಗೆ? ದಲಿತರು, ಬುಡಕಟ್ಟು ಸಮುದಾಯಗಳು, ಮಹಿಳೆಯರು, ಅಲ್ಪಸಂಖ್ಯಾತರು ಮತ್ತು ಅಧಿಕಾರ ವಂಚಿತ ಗುಂಪುಗಳಿಗೆ ಈ ಹೆಚ್ಚಳದಿಂದ ಪ್ರಯೋಜನವಾಗುವುದೇ? ಇಂಥ ಇನ್ನು ಅನೇಕ ವೈಚಾರಿಕ ಪ್ರಶ್ನೆಗಳನ್ನು ಎತ್ತಿ ಅವುಗಳ ಚೌಕಟ್ಟಿನಲ್ಲಿ ಕ್ಷೇತ್ರಗಳ ಪುನರ್ವಿಂಗಡಣೆಯ ವಿಚಾರವನ್ನು ಸಂವಾದಗಳಿಗೆ ಒಳಪಡಿಸುವ ಅಗತ್ಯ ವನ್ನು ಉಲ್ಲೇಖಿತ ಸಮ್ಮೇಳನ ತೆರೆದಿಟ್ಟಿದ್ದು ಇನ್ನು ಮುಂದೆ ವಿಷಯವನ್ನು ಬೇರೆ–ಬೇರೆ ಆಯಾಮಗಳಿಂದಲೂ ಸಾರ್ವಜನಿಕ ವಲಯದಲ್ಲಿ ಚರ್ಚೆಯಾಗಬೇಕಿದೆ.

ಕನ್ನಡ ನಾಡು ಬೆಳಗಿದ ವಿಶ್ವೇಶ್ವರಯ್ಯ

ಅಭಿವೃದ್ಧಿಯ ಹರಿಕಾರ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಸದಾಶಯದ ಹಂಬಲದಂತೆ ಕನ್ನಡ ನಾಡಿನ ಜೀವನದಿ ಕಾವೇರಿಯನ್ನು ಹಿಡಿದಿಟ್ಟು ಕನ್ನಂಬಾಡಿ ಕಟ್ಟೆ ಕಟ್ಟಿ ಬೆಂಗಾಡನ್ನೆಲ್ಲಾ ಬಂಗಾರದ ಬೆಳೆಯಾಗಿಸಿದ ಭಾರತರತ್ನ ಸರ್.ಎಂ. ವಿಶ್ವೇಶ್ವರಯ್ಯನವರ ಮೆದುಳಿಗೆ ಇಂದಿನ ಯಾವ ಅತ್ಯಾಧುನಿಕ ಕಂಪ್ಯೂಟರ್‌ಗಳೂ ಸಮವಲ್ಲ. ಅಭಿವೃದ್ಧಿಯ ಪಥದಲ್ಲಿ ಆಧುನಿಕ ಭಾರತವನ್ನು ಕರೆದೊಯ್ದವರ ಪೈಕಿ ಮೊದಲ ಸಾಲಿನಲ್ಲೇ ಮಿನುಗುವ ಹೆಸರು ಇವರದು. ಅಷ್ಟೇ ಅಲ್ಲ ಜಗತ್ಪ್ರಸಿದ್ಧ ವಾಸ್ತು ಶಿಲ್ಪವರೇಣ್ಯರಾಗಿ, ಅದ್ಭುತ ಅಭಿಯಂತರರಾಗಿ ವಿಶ್ವೇಶ್ವರಯ್ಯನವರ ಹೆಸರು ಜಗತ್ತಿನಲ್ಲಿ ಅಜರಾಮರ.


ಹಿಂದೂಸ್ಥಾನ್ ಏರ್‌ಕ್ರಾಫ್ಟ್ ಫ್ಯಾಕ್ಟರಿ (ಈಗಿನ ಹೆಚ್‌ಎಎಲ್), ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಚೇಂಬರ್ ಆಫ್ ಕಾಮರ್ಸ್, ಮೈಸೂರು ಪೇಪರ್ ಮಿಲ್ಸ್, ಮೈಸೂರು ವಿಶ್ವವಿದ್ಯಾನಿಲಯ, ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಬೆಂಗಳೂರು ಮುದ್ರಣಾಲಯ, ಬೆಂಗಳೂರು ಮೆಕ್ಯಾನಿಕಲ್ ಇಂಜಿನಿಯರಿಂಗ್ ಶಾಲೆ (ಈಗ ಇದು ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ ಕಾಲೇಜ್ ಆಗಿದೆ), ಮೈಸೂರು ಗಂಧದೆಣ್ಣೆ ಕಾರ್ಖಾನೆ, ಮೈಸೂರು ಸ್ಯಾಂಡಲ್ ಸೋಪ್ ಕಾರ್ಖಾನೆ, ಕೆ.ಆರ್. ಮಿಲ್, ಸಾರ್ವಜನಿಕ ಗ್ರಂಥಾಲಯಗಳು, ಕನ್ನಡ ಸಾಹಿತ್ಯ ಪರಿಷತ್, ಚನ್ನಪಟ್ಟಣದ ರೇಷ್ಮೆ ಕೈಗಾರಿಕೆ, ಜೋಗದ ಜಲ ವಿದ್ಯುತ್ ಯೋಜನೆ, ಶಿವನಸಮುದ್ರ ಜಲ ವಿದ್ಯುತ್ ಯೋಜನೆ, ನಂದಿ ಬೆಟ್ಟದ ರೋಪ್‌ವೇ, ಮಿಥಿಕ್ ಸೊಸೈಟಿ, ಕಬ್ಬನ್ ಪಾರ್ಕ್, ಸೆಂಚುರಿ ಕ್ಲಬ್, ಮಲೆನಾಡು ಅಭಿವೃದ್ಧಿ ಮಂಡಳಿ, ಕೃಷಿ ಶಾಲೆ, ವಾಣಿಜ್ಯ ಶಾಲೆ, ಮೈಸೂರಿನಲ್ಲಿ ಪ್ರತ್ಯೇಕವಾದ ರೈಲ್ವೆ ವಿಭಾಗ ಸ್ಥಾಪನೆ, ಮಂಗಳೂರಿನ ಹೆಂಚು ಮತ್ತು ಇಟ್ಟಿಗೆಯ ಕಾರ್ಖಾನೆ, ಬೆಂಕಿ ಕಡ್ಡಿ ಕಾರ್ಖಾನೆ, ತುಂಗಭದ್ರಾ ಜಲಾಶಯ, ಪ್ಯಾರಾಸಿಟಾಯ್ಡ್ ಲ್ಯಾಬೊರೇಟರಿ, ಭಟ್ಕಳ ಬಂದರು, ಹಿಂದೂ ಮಾಡರ್ನ್ ಹೋಟೆಲ್, ಹೆಬ್ಬಾಳದ ಕೃಷಿ ಸಂಶೋಧನಾ ಕೇಂದ್ರ, ದೇಶದಲ್ಲಿಯೇ ಮೊಟ್ಟ ಮೊದಲಿಗೆ ಕಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿ, ಕನ್ನಂಬಾಡಿಗೆ ವಿಶ್ವದಲ್ಲಿಯೇ ಮೊದಲ ಸ್ವಯಂ ಚಾಲಿತ ಗೇಟ್‌ಗಳ ಅಳವಡಿಕೆ... ಹೀಗೆ ಹೇಳುತ್ತಾ ಹೋದರೆ ವಿಶ್ವೇಶ್ವರಯ್ಯನವರ ಮೆದುಳಿನ ಮಹದದ್ಭುತ ಶಕ್ತಿಯಿಂದ ಯೋಜನೆಗಳಾಗಿ ರೂಪುಗೊಂಡು ನಾಡಿಗೆ ಸಮರ್ಪಣೆಗೊಂಡ ಸಾಧನೆಯ ಶಿಖರಗಳ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಇದು ವಿಶ್ವೇಶ್ವರಯ್ಯನವರು ನಾಡಿಗೆ ನೀಡಿದ ಕೊಡುಗೆಯಾಯಿತಷ್ಟೆ.

ಹೀಗೆಯೇ ನಾಡಿನಿಂದಾಚೆಗೂ ದೇಶವ್ಯಾಪಿ ವಿಶ್ವೇಶ್ವರಯ್ಯನವರ ಸಾಧನೆಯ ಹೆಗ್ಗುರುತುಗಳಿದ್ದು ಪೂನಾದ ಜಲನಿರ್ಗಮನ ಯೋಜನೆ, ಭೂಪಾಲ್ ನಗರದ ನೀರು ಸರಬರಾಜು ಹಾಗೂ ವಿದ್ಯುಚ್ಛಕ್ತಿ ಯೋಜನೆ ಮತ್ತು ಬಿಹಾರ, ಪಶ್ಚಿಮ ಬಂಗಾಳ ಹಾಗೂ ಅಸ್ಸಾಂ ರಾಜ್ಯಗಳ ಗಂಗಾನದಿ ಸೇತುವೆ ನಿರ್ಮಾಣ, ಗ್ವಾಲಿಯರ್‌ನ ಟ್ರಿಗ್ರಾ ಅಣೆಕಟ್ಟಿನ ಮನನಿರ್ಮಾಣ, ಮುಂಬೈನ ಸಿಂಧ್‌ನಲ್ಲಿರುವ ಸುಕ್ಕೂರು ಅಣೆಕಟ್ಟು ಯೋಜನೆ, ಒರಿಸ್ಸಾ ಪ್ರಾಂತ್ಯದ ಮಹಾನದಿ ಪ್ರವಾಹ ನಿಯಂತ್ರಣ ಯೋಜನೆ, ಮುಂಬೈನ ಆಟೋಮೊಬೈಲ್ ಕಂಪನಿ ಮುಂತಾದವು ವಿಶ್ವೇಶ್ವರಯ್ಯನವರ ಸಾಧನೆಗಳಾಗಿದ್ದು, ಭಾರತೀಯರೆಲ್ಲರೂ ಹೆಮ್ಮೆಪಡುವಂತಿದೆ. ಹಾಗೆಯೇ ದೇಶದಿಂದಾಚೆಗೂ ಇವರ ಮೇಧಾವಿತನದ ಮಹತ್ತರ ಮೈಲುಗಲ್ಲುಗಳನ್ನು ಕಾಣಬಹುದಾಗಿದ್ದು, ಇವುಗಳಲ್ಲಿ ಅಮೆರಿಕಾದ ಪನಾಮ ನದಿಗೆ ಅಳವಡಿಸಿರುವ ವಿಶ್ವೇಶ್ವರಯ್ಯನವರು ಆವಿಷ್ಕರಿಸಿದ ಸ್ವಯಂ ಚಾಲಿತ ತೂಬಿನ ಬಾಗಿಲುಗಳು ಮತ್ತು ಆಸ್ಟ್ರೇಲಿಯಾದ ಹೇಡನ್ ನಗರದ ಜಲನಿರ್ಗಮನ ಯೋಜನೆ ಪ್ರಮುಖವೆನಿಸಿವೆ. ಇಂಥ ಭಾರತರತ್ನ ಸರ್ ಎಂ.ವಿಶ್ವೇಶ್ವರಯ್ಯನವರು ಜನಿಸಿದ್ದು 1860 ಸೆಪ್ಟಂಬರ್ 15ರಂದು. ಜನ್ಮಸ್ಥಳ ಕರ್ನಾಟಕದ ಹಿಂದಿನ ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರ ತಾಲೂಕಿನ ಮುದ್ದೇನಹಳ್ಳಿ ಗ್ರಾಮ. ಚಿಕ್ಕಬಳ್ಳಾ ಪುರ–ದೊಡ್ಡಬಳ್ಳಾಪುರ ರಸ್ತೆಯ ನಂದಿಗ್ರಾಮದಿಂದ ಸುಮಾರು 2 ಕಿ.ಮೀ. ಉತ್ತರಕ್ಕೆ ತಿರ್ನಹಳ್ಳಿ ಎಂಬ ಊರಿದ್ದು, ಅಲ್ಲಿಂದ ಪಶ್ಚಿಮಕ್ಕೆ 1 ಕಿ.ಮೀ.ಗೂ ಕಡಿಮೆ ಅಂತರದಲ್ಲಿರುವ ಚಿಕ್ಕಹಳ್ಳಿ ಇದು. ಇವರ ಪೂರ್ವಿಕರು ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಮೋಕ್ಷಗುಂಡಂ ಎಂಬ ಗ್ರಾಮದವರಾಗಿದ್ದು ಬಹಳ ಹಿಂದೆಯೇ ಅಂದರೆ 1624ರಲ್ಲೇ ಇಲ್ಲಿಗೆ ಬಂದು ನೆಲೆಸಿದ್ದರು. ತಂದೆ ಮೋಕ್ಷಗುಂಡಂ ಶ್ರೀನಿವಾಸ ಶಾಸ್ತ್ರಿಗಳು ಸಂಪ್ರದಾಯಸ್ಥ ಬ್ರಾಹ್ಮಣರೂ, ವೇದಶಾಸ್ತ್ರಗಳಲ್ಲಿ ನಿಪುಣರೂ, ಸಂಸ್ಕೃತ ವಿದ್ವಾಂಸರೂ, ಯೋಗಾಭ್ಯಾಸ ಮಾಡಿದವರೂ ಅನುಭವಿ ಆಯುರ್ವೇದ ವೈದ್ಯರೂ ಆಗಿದ್ದರು. ತಾಯಿ ಸುಸಂಸ್ಕೃತೆ ಶ್ರೀಮತಿ ವೆಂಕಟಲಕ್ಷ್ಮಮ್ಮ. ಈ ದಂಪತಿಗಳಿಗೆ ನಾಲ್ಕು ಗಂಡು ಮತ್ತು ಎರಡು ಹೆಣ್ಣುಮಕ್ಕಳು ಸೇರಿ ಒಟ್ಟು ಆರು ಮಕ್ಕಳು. ಇವರಲ್ಲಿ ಎರಡನೇಯವರೇ ವಿಶ್ವೇಶ್ವರಯ್ಯನವರು.

ಇಂದು ಸರ್ ಎಂ.ವಿ. ಜನ್ಮದಿನ

ಕಡುಕಷ್ಟದಲ್ಲೇ ಬದುಕನ್ನು ಕಟ್ಟಿಕೊಂಡ ವಿಶ್ವೇಶ್ವರಯ್ಯನವರು ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡವರು. ಆಗ ಅವರು ಕುಟುಂಬಸಹಿತ ಮುದ್ದೇನಹಳ್ಳಿಯನ್ನು ಬಿಟ್ಟು ಚಿಕ್ಕಬಳ್ಳಾಪುರಕ್ಕೆ ಬಂದು ಸೋದರ ಮಾವ ಹೆಚ್.ರಾಮಯ್ಯನವರನ್ನು ಆಶ್ರಯಿಸಿದ್ದರು. ಸುಸಂಸ್ಕೃತರೂ, ಸುಶಿಕ್ಷಿತರೂ, ಶಿಸ್ತಿನ ಸಿಪಾಯಿಗಳೂ ಆಗಿದ್ದ ಮಾನವೀಯ ಮೌಲ್ಯದ ಸಾಕಾರ ಮೂರ್ತಿಯಂತಿದ್ದ ಸೋದರ ಮಾವ ರಾಮಯ್ಯನವರೇ ಆಗ ವಿಶ್ವೇಶ್ವರಯ್ಯನವರ ಮುಂದಿನ ಭವಿಷ್ಯಕ್ಕೆ ಮಾರ್ಗದರ್ಶಕರಾಗಿದ್ದರು. ಹಾಗಾಗಿ ಅವರ ಪ್ರಭಾವವೇ ವಿಶ್ವೇಶ್ವರಯ್ಯನವರ ಮೇಲೆ ಹೆಚ್ಚುಂಟು. ಅಂತೆಯೇ ಪ್ರಾಥಮಿಕ ಶಿಕ್ಷಣವನ್ನು ಹುಟ್ಟೂರು ಮುದ್ದೇನಹಳ್ಳಿ ಸಮೀಪದ ಕಂದವರ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲೂ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಚಿಕ್ಕಬಳ್ಳಾಪುರದ ಸರ್ಕಾರಿ ಮಾಧ್ಯಮಿಕ ಶಾಲೆಯಲ್ಲೂ ಹಾಗೂ ಪ್ರೌಢಶಿಕ್ಷಣವನ್ನು ಬೆಂಗಳೂರಿನ ವೆಸ್ಲಿಯರ್ ಮಿಷನ್ ಪ್ರೌಢಶಾಲೆಯಲ್ಲೂ ಕಲಿತ ವಿಶ್ವೇಶ್ವರಯ್ಯನವರಿಗೆ ಶ್ರೀಕೃಷ್ಣಗಿರಿಯ ರಾಘವೇಂದ್ರರಾಯರು ಮತ್ತು ಬಿ. ವೆಂಕಟಪತಿ ಅಯ್ಯಂಗಾರರು ಹಾಗೂ ನಾಥಮುನಿನಾಯ್ಡು ಅವರುಗಳು ಮೆಚ್ಚಿನ ಗುರುಗಳಾಗಿದ್ದರು. ಇದರಿಂದ ಅವರಿಗೆ ಸರ್ಕಾರದ ವಿದ್ಯಾರ್ಥಿವೇತನ ಸಿಕ್ಕಿ ಉನ್ನತ ಶಿಕ್ಷಣಕ್ಕೆ ಮುಂಬೈಗೆ ಹೋಗಿ ಪುಣೆಯ ಸೈನ್ಸ್ ಕಾಲೇಜು ಸೇರಿ ಎಲ್.ಸಿ.ಇ. ಮತ್ತು ಎಫ್.ಸಿ.ಇ.ಎಲ್. (ಇಂಜಿನಿಯರಿಂಗ್) ಪರೀಕ್ಷೆಗಳಲ್ಲಿ ಇಡೀ ಮುಂಬೈ ಪ್ರಾಂತ್ಯಕ್ಕೆ ಮೊದಲ ಸ್ಥಾನಗಳಿಸಿ 1883ರಲ್ಲಿ ಇಂಜಿನಿಯರ್ ಪದವಿ ಪಡೆದಿದ್ದರು. ಆಗ 'ಜೇಮ್ಸ್‌ಬರ್‌ಕ್ಲೆ' ಬಹುಮಾನ ಇವರಿಗೆ ದೊರೆತಿತ್ತು.

ವಿದ್ಯಾರ್ಥಿದಿಶೆಯಲ್ಲೇ ತಮ್ಮ ಅಗಾಧ ಪ್ರತಿಭೆ ಇಂಜಿನಿಯರ್ ಪದವೀಧರ ವಿಶ್ವೇಶ್ವರಯ್ಯನವರನ್ನು ಕರೆದು ಮುಂಬೈ ಸರ್ಕಾರ ಕೆಲಸಕೊಟ್ಟಿತ್ತು. ಮುಂಬೈ ಪ್ರಾಂತ್ಯದ ನಾಸಿಕ್ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಅಸಿಸ್ಟೆಂಟ್ ಇಂಜಿನಿಯರ್ ಆಗಿ ವಿಶ್ವೇಶ್ವರಯ್ಯನವರು ಮೊದಲಿಗೆ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದ್ದರು. ದಿವಾನ್ ವಿ.ಪಿ. ಮಾಧವರಾಯರ ಸಲಹೆ ಮೇರೆಗೆ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರೇ ಖುದ್ದು ಮುಂಬೈನಲ್ಲಿದ್ದ ವಿಶ್ವೇಶ್ವರಯ್ಯನವರನ್ನು ಬರಮಾಡಿಕೊಂಡು 1909ರ ನವೆಂಬರ್ 15ರಂದು ಅವರನ್ನು ಮೈಸೂರಿನ ಮುಖ್ಯ ಇಂಜಿನಿಯರ್ ಆಗಿ ನೇಮಿಸಿದ್ದರು. ವಿಶ್ವೇಶ್ವರಯ್ಯನವರು ಆ ಹುದ್ದೆಗೆ ಬರುವಾಗ ಆ ಹುದ್ದೆಯಲ್ಲಿ ಮುಖ್ಯ ಇಂಜಿನಿಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಕ್ಯಾಪ್ಟನ್ ಡಾಸ್ ಎಂಬ ಯೂರೋಪಿಯನ್ ಅಕಾಲ ಮರಣಕ್ಕೆ ತುತ್ತಾಗಿ ಆ ಹುದ್ದೆ ಖಾಲಿ ಇತ್ತು. ವಿಶ್ವೇಶ್ವರಯ್ಯನವರ ಮೇಧಾವಿತನಕ್ಕೆ ಮಾರು ಹೋಗಿದ್ದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು 1912ರ ನವೆಂಬರ್‌ನಲ್ಲಿ ಟಿ.ಆನಂದರಾಯರು ದಿವಾನ್ ಪದವಿಯಿಂದ ನಿವೃತ್ತರಾದ ನಂತರ ಇವರನ್ನೇ ದಿವಾನರಾಗಿ ನೇಮಕ ಮಾಡಿದ್ದರು. 1912 ನವೆಂಬರ್ 10ರಂದು ವಿಶ್ವೇಶ್ವರಯ್ಯನವರು ನಾಲ್ವಡಿ ಕೃಷ್ಣರಾಜ ಒಡೆಯರ ಅಭಿಲಾಷೆಯಂತೆ ದಿವಾನ್ ಪದವಿಯನ್ನು ಅಲಂಕರಿಸಿದ್ದರು. ಆಗಲೂ ಅಷ್ಟೆ ವಿಶ್ವೇಶ್ವರಯ್ಯನವರು ಮಾಡಿದ ಅಭಿವೃದ್ಧಿ ಕಾರ್ಯಗಳಿಂದ ಅವರಿಗೂ ಮತ್ತು ಮಹಾರಾಜರಿಗೂ ಅಭಿವೃದ್ಧಿಯ ಹರಿಕಾರರೆಂಬ ಹೆಸರನ್ನು ತಂದು ಕೊಟ್ಟಿತ್ತು. ದಿವಾನರಾಗಿ ಅವರು ಕಾರ್ಯನಿರ್ವಹಿಸಿದ್ದು ಕೇವಲ 7 ವರ್ಷಗಳು ಮಾತ್ರವೇ. ಆದರೂ 7 ಶತಮಾನಗಳಲ್ಲಿ ಮಾಡುವಷ್ಟು ಕೆಲಸಗಳನ್ನು ಮಾಡಿ 1919ರ ಡಿಸೆಂಬರ್ 9ರಂದು ದಿವಾನ್ ಪದವಿಯಿಂದ ನಿವೃತ್ತಿ ಹೊಂದಿದ್ದರು. ಅವರು ನಿವೃತ್ತರಾದರೂ ಕೂಡ ಅವರ ಬುದ್ಧಿಶಕ್ತಿಯನ್ನು ಬಳಸಿ ಕೊಳ್ಳಲು ಮುಂಬಯಿ ಸರ್ಕಾರ ತಾಂತ್ರಿಕ ಮತ್ತು ಔದ್ಯಮಿಕ ಶಿಕ್ಷಣ ಸಮಿತಿಗೆ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಿಕೊಂಡಿತ್ತು. ನಾಲ್ವಡಿ ಕೃಷ್ಣರಾಜ ಒಡೆಯರ ನಂತರ ಪಟ್ಟಕ್ಕೆ ಬಂದ ಶ್ರೀ ಜಯ ಚಾಮರಾಜ ಒಡೆಯರ್ ಸಹ ಇವರ ಸೇವೆಯನ್ನು ಬಳಸಿಕೊಳ್ಳಲು ಬಯಸಿದರಾದರೂ ಇದಕ್ಕೆ ವಿಶ್ವೇಶ್ವರಯ್ಯನವರು ಒಪ್ಪದೆ ಮಾರ್ಗದರ್ಶಕರಾಗಷ್ಟೇ ಇರಲು ಸಮ್ಮತಿಸಿದ್ದರು. ಆವಾಗಲೇ ಬೆಂಗಳೂರಿನಲ್ಲಿ ಏಷ್ಯಾ ಖಂಡದಲ್ಲಿಯೇ ಅತ್ಯಂತ ದೊಡ್ಡದಾದ ವಿಮಾನ ಕಾರ್ಖಾನೆ ಆರಂಭವಾದದ್ದು. ಇದಕ್ಕಾಗಿ ತಮಗೆ ಸಂದ ಗೌರವಧನವನ್ನು ಒಂದು ಪೈಸೆಯನ್ನೂ ಬಳಸಿಕೊಳ್ಳದೆ, ಮಹಾರಾಜರ ಹೆಸರಿನಲ್ಲೇ 'ಶ್ರೀ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ ಕಾಲೇಜ್' ಅನ್ನು ವಿಶ್ವೇಶ್ವರಯ್ಯನವರು ಪ್ರಾರಂಭಿಸಿದ್ದರು. ಇದು ಅವರಿಗಿದ್ದ ಅಪಾರವಾದ ಶಿಕ್ಷಣಪರ ಕಾಳಜಿಗೊಂದು ಸಣ್ಣ ಸಾಕ್ಷಿಯಷ್ಟೆ. ಸ್ವಾತಂತ್ರ್ಯ ನಂತರವೂ ಭಾರತ ಸರ್ಕಾರವು ಇವರ ಸಲಹೆ, ಸಹಕಾರ, ಮಾರ್ಗದರ್ಶನವನ್ನು ಪಡೆದುಕೊಳ್ಳುತ್ತಲೇ ಇತ್ತು. ಇಂಥ ಮಹಾ ಮೇಧಾವಿ ವಿಶ್ವೇಶ್ವರಯ್ಯನವರಿಗೆ 1915ರಲ್ಲಿ ಬ್ರಿಟಿಷ್ ಸರ್ಕಾರ "ಸರ್" ಎಂಬ ಗೌರವವನ್ನೂ 1955ರಲ್ಲಿ ಭಾರತ ಸರ್ಕಾರವು ತನ್ನ ಅತ್ಯುನ್ನತ ಪ್ರಶಸ್ತಿಯಾದ "ಭಾರತ ರತ್ನ" ವನ್ನೂ ನೀಡಿ ಗೌರವಿಸಿವೆ. ಶತಾಯುಷಿ ಯಾಗಿದ್ದ ತಾವು ಬದುಕಿರುವತನಕವೂ ಭಾರತದ ಅಭಿವೃದ್ಧಿಗಾಗಿ ತುಡಿಯುತ್ತಿದ್ದ, ಮಿಡಿಯುತ್ತಿದ್ದ ಸರ್.ಎಂ. ವಿಶ್ವೇಶ್ವರಯ್ಯನವರು ತಮ್ಮ 102ನೇ ವರ್ಷದಲ್ಲಿ 1962ರಲ್ಲಿ ಏಪ್ರಿಲ್ 14ರ ಬೆಳಿಗ್ಗೆ 6–15ಕ್ಕೆ ವಿಧಿವಶರಾದರು.



–ಬನ್ನೂರು ಕೆ.ರಾಜು,
ಸಾಹಿತಿ, ಹಿರಿಯ ಪತ್ರಕರ್ತ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಶುಕ್ರವಾರ 15 ಸೆಪ್ಟೆಂಬರ್ 2023

ಬಿಹಾರದಲ್ಲಿ ಬಾಗ್ಮತಿ ನದಿಯಲ್ಲಿ ದೋಣಿ ಪಲ್ಟಿ

20 ಮಕ್ಕಳ ರಕ್ಷಣೆ, 10 ಮಂದಿ ನಾಪತ್ತೆ

ಪಾಟ್ನಾ: ಬಿಹಾರದ ಮುಜಾಫರ್‌ಪುರ ಜಿಲ್ಲೆಯ ಬಾಗ್ಮತಿ ನದಿಯಲ್ಲಿ ಗುರುವಾರ 30 ಮಕ್ಕಳನ್ನು ಹೊತ್ತೊಯ್ಯುತ್ತಿದ್ದ ದೋಣಿ ಮಗುಚಿ ಬಿದ್ದಿದೆ. ಸ್ಥಳದಲ್ಲಿ ಶೋಧ ಕಾರ್ಯಾಚರಣೆ ನಡೆಯುತ್ತಿದೆ.

ಇದುವರೆಗೂ 20 ಮಕ್ಕಳನ್ನು ರಕ್ಷಿಸಲಾಗಿದ್ದು, 10 ಮಕ್ಕಳು ನಾಪತ್ತೆಯಾಗಿದ್ದಾರೆ ಎನ್ನುವ ಮಾಹಿತಿ ಲಭ್ಯವಾಗಿದೆ. ಘಟನೆಯಿಂದ ಸ್ಥಳದಲ್ಲಿ ಆತಂಕ ಉಂಟಾಗಿದ್ದು, ಶೋಧ ಕಾರ್ಯಾಚರಣೆ ಆರಂಭಿಸಲಾಗಿದೆ.

ಘಟನೆಯ ಬಗ್ಗೆ ಮಾಹಿತಿ ಪಡೆದ ಪೊಲೀಸರು ಮತ್ತು ರಾಜ್ಯ ವಿಪತ್ತು ನಿರ್ವಹಣಾ ನಿಧಿ (ಎಸ್‌ಡಿಆರ್‌ಎಫ್) ತಂಡವು ಘಟನಾ ಸ್ಥಳಕ್ಕೆ ಆಗಮಿಸಿ ರಕ್ಷಣಾ ಕಾರ್ಯಾ ಚರಣೆ ನಡೆಸಿದೆ. ಘಟನೆಯ ಬಗ್ಗೆ ಮಾಹಿತಿ ಪಡೆದ ಪೊಲೀಸರು ಮತ್ತು ರಾಜ್ಯ ವಿಪತ್ತು ನಿರ್ವಹಣಾ ನಿಧಿ (ಎಸ್‌ಡಿಆರ್ ಎಫ್) ತಂಡವು ಘಟನಾ ಸ್ಥಳಕ್ಕೆ ಆಗಮಿಸಿ ರಕ್ಷಣಾ ಕಾರ್ಯಗಳನ್ನು ಪ್ರಾರಂಭಿಸಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್, ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ. ಈ ಬಗ್ಗೆ ತುರ್ತಾಗಿ ಪರಿಶೀಲನೆ ನಡೆಸುವಂತೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಕೋರಿದ್ದೇನೆ. ಸಂತ್ರಸ್ತ ಕುಟುಂಬಗಳಿಗೆ ರಾಜ್ಯ ಸರ್ಕಾರ ಎಲ್ಲ ನೆರವು ನೀಡಲಿದೆ ಎಂದು ಹೇಳಿದ್ದಾರೆ.

ಭಯೋತ್ಪಾದನಾ ಚಟುವಟಿಕೆಯ ಕಿಂಗ್‌ಪಿನ್ ಶಿವಮೊಗ್ಗ ಮೂಲದ ಅರಾಫತ್ ಅಲಿಯನ್ನು ದೆಹಲಿಯಲ್ಲಿ ಬಂಧಿಸಿದ NIA

ನವದೆಹಲಿ: ಶಿವಮೊಗ್ಗ ಮೂಲದ ಭಯೋತ್ಪಾದಕ, ಸಂಚುಗಾರ ಅರಾಫತ್ ಅಲಿ ಎಂಬಾತನನ್ನು ಎನ್‌ಐಎ ಪೊಲೀಸರು ದೆಹಲಿಯ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧಿಸಿದ್ದಾರೆ.

ನೈರೋಬಿಯಾದಿಂದ ದೆಹಲಿಗೆ ಆಗಮಿಸಿದ್ದ ತೀರ್ಥಹಳ್ಳಿ ಮೂಲದ ಅರಾಫತ್ ಅಲಿ ಬಂಧಿತ ಆರೋಪಿಯಾಗಿದ್ದಾನೆ. ಈತ ನೇರವಾಗಿ ಎಲ್ಲಿಯೂ ಉಗ್ರ ಚಟುವಟಿಕೆಯಲ್ಲಿ ಭಾಗಿಯಾಗಿಲ್ಲ. ಆದರೆ, ಉಗ್ರ ಚಟುವಟಿಕೆಗಳಿಗೆ ವಿದೇಶಗಳಲ್ಲಿಯೇ ಕುಳಿತು ಹಣದ ವ್ಯವಸ್ಥೆ ಮಾಡುತ್ತಿದ್ದ. 2020ರಲ್ಲಿ ಕರ್ನಾಟಕದ ಮೋಸ್ಟ್ ವಾಂಟೆಡ್ ಉಗ್ರ ಅಬ್ದುಲ್ ಮತೀನ್ ಜೊತೆಗೆ ಅರಾಫತ್ ಅಲಿ ದೇಶ ಬಿಟ್ಟು ಹೋಗಿದ್ದನು.

ಅರಾಫತ್ ಅಲಿ ವಿದೇಶದಿಂದ ಕೆಲಸ ಮಾಡುತ್ತಿದ್ದು ಮುಸ್ಲಿಂ ಯುವಕರನ್ನು ಗುರುತಿಸುವುದು, ಆಮೂಲಾಗ್ರಗೊಳಿಸುವುದು ಮತ್ತು ಐಎಸ್‌ಗೆ ಸೇರಿಸುವಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದನು. ಶಿವಮೊಗ್ಗ ಭಯೋತ್ಪಾದನೆ ಸಂಚು ಪ್ರಕರಣದ ಭಾಗವಾಗಿ ಮೊಹಮ್ಮದ್ ಶಾರಿಕ್ ಎಂಬ ಆರೋಪಿ ಮಂಗಳೂರಿನ ಕದ್ರಿ ಮಂಜುನಾಥ ದೇವಸ್ಥಾನದಲ್ಲಿ ಪ್ರೆಶರ್ ಕುಕ್ಕರ್ ಐಇಡಿ ಅಳವಡಿಸಲು ತೆರಳುತ್ತಿದ್ದನು. ಆದರೆ, ಆಟೋರಿಕ್ಷಾದಲ್ಲಿ ಆಕಸ್ಮಿಕವಾಗಿ ಐಇಡಿ ಸ್ಫೋಟಗೊಂಡಿತ್ತು

14 ಟಿವಿ ಆ್ಯಂಕರ್‌ಗಳನ್ನು ಬಹಿಷ್ಕರಿಸಿದ INDIA ಮೈತ್ರಿಕೂಟ

ಮುಂಬೈ: ವಿರೋಧ ಪಕ್ಷದ ಮೈತ್ರಿಕೂಟ 'ಇಂಡಿಯನ್ ನ್ಯಾಷನಲ್ ಡೆವಲಪ್‌ಮೆಂಟ್ ಇನ್‌ಕ್ಲೂಸಿವ್ ಅಲೈಯನ್ಸ್' ಈಗ ಕೆಲವು ಟಿವಿ ಆ್ಯಂಕರ್‌ಗಳನ್ನು ಬಹಿಷ್ಕರಿಸಿದೆ.

ನ್ಯಾಶನಲಿಸ್ಟ್ ಕಾಂಗ್ರೆಸ್ ಪಾರ್ಟಿಯ ಮುಖ್ಯಸ್ಥ ಶರದ್ ಪವಾರ್ ಅವರ ನಿವಾಸದಲ್ಲಿ ಬುಧವಾರ ನಡೆದ ಸಮನ್ವಯ ಸಮಿತಿಯ ಮೊದಲ ಸಭೆಯಲ್ಲಿ INDIA ಮೈತ್ರಿಕೂಟ ಈ ನಿರ್ಧಾರವನ್ನು ತೆಗೆದುಕೊಂಡಿದೆ.

ವಾಸ್ತವವಾಗಿ, ಮಾಧ್ಯಮದ ಒಂದು ವಿಭಾಗವು ಸಮಸ್ಯೆಗಳನ್ನು ಸೃಷ್ಟಿಸುತ್ತಿದೆ ಎಂದು ವಿರೋಧ ಪಕ್ಷಗಳು ಹಲವು ಬಾರಿ ಆರೋಪಿಸಿವೆ. ರಾಹುಲ್ ಗಾಂಧಿಯವರ 'ಭಾರತ್ ಜೋಡೋ' ಭೇಟಿಗೆ ಮಾಧ್ಯಮಗಳು ಅಗತ್ಯ ಪ್ರಸಾರವನ್ನು ನೀಡಲಿಲ್ಲ ಎಂದು ಕಾಂಗ್ರೆಸ್ ಆರೋಪಿಸಿದೆ.

ಮೈತ್ರಿಕೂಟದ ಸಮನ್ವಯ ಸಮಿತಿಯ ಮೊದಲ ಸಭೆಯು ದೆಹಲಿಯ ನ್ಯಾಶನಲಿಸ್ಟ್ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ) ಮುಖ್ಯಸ್ಥ ಶರದ್ ಪವಾರ್ ಅವರ ನಿವಾಸದಲ್ಲಿ ನಡೆಯಿತು. ಶರದ್ ಪವಾರ್ ಹೊರತುಪಡಿಸಿ, ಕಾಂಗ್ರೆಸ್‌ನ ಕೆಸಿ ವೇಣುಗೋಪಾಲ್, ಡಿಎಂಕೆಯ ಟಿಆರ್ ಬಾಲು, ಆರ್‌ಜೆಡಿ ಮುಖ್ಯಸ್ಥ ತೇಜಸ್ವಿ ಯಾದವ್, ಜನತಾ ದಳದ (ಯುನೈಟೆಡ್) ಸಂಜಯ್ ಝಾ, ಆಮ್ ಆದ್ಮಿ ಪಕ್ಷದ ರಾಘವ್ ಚಡ್ಡಾ, ಶಿವಸೇನೆಯ (ಯುಬಿಟಿ) ಸಂಜಯ್ ರಾವತ್ ರಾಷ್ಟ್ರೀಯ ಸಮಾವೇಶದಲ್ಲಿ ಭಾಗವಹಿಸಿದ್ದರು.

ಬಹಿಷ್ಕೃತ ಆಂಕರ್‌ಗಳು: ಅದಿತಿ ತ್ಯಾಗಿ, ಅಮನ್ ಚೋಪ್ರಾ, ಅಮಿಶ್ ದೇವಗನ್, ಆನಂದ ನರಸಿಂಹನ್, ಅರ್ನಾಬ್ ಗೋಸ್ವಾಮಿ, ಅಶೋಕ್ ಶ್ರೀವಾಸ್ತವ, ಚಿತ್ರಾ ತ್ರಿಪಾಠಿ, ಗೌರವ್ ಸಾವಂತ್, ನಾವಿಕ ಕುಮಾರ್, ಪ್ರಾಚಿ ಪರಾಶರ, ರೂಬಿಕಾ ಲಿಯಾಕತ್, ಶಿವ ಆರೂರ್, ಸುಧೀರ್ ಚೌಧುರಿ, ಸುಶಾಂತ್ ಸಿನ್ಹಾ

ದೆಹಲಿ ಅಬಕಾರಿ ನೀತಿ ಹಗರಣ: ಬಿಆರ್‌ಎಸ್ ನಾಯಕಿ ಕವಿತಾಗೆ ಮತ್ತೆ ಇಡಿ ಸಮನ್ಸ್


ನವದೆಹಲಿ: ರಾಷ್ಟ್ರ ರಾಜಧಾನಿಯಲ್ಲಿನ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ಬಿಆರ್‌ಎಸ್ ನಾಯಕಿ ಮತ್ತು ತೆಲಂಗಾಣ ಮುಖ್ಯಮಂತ್ರಿ ಕೆ ಚಂದ್ರಶೇಖರ ರಾವ್ ಅವರ ಪುತ್ರಿ ಕೆ ಕವಿತಾ ಅವರಿಗೆ ಜಾರಿ ನಿರ್ದೇಶನಾಲಯ ಶುಕ್ರವಾರ ಮತ್ತೆ ಸಮನ್ಸ್ ಜಾರಿ ಮಾಡಿದೆ.

ಮಾರ್ಚ್‌ನಲ್ಲಿ ಇಡಿ ಪ್ರಧಾನ ಕಚೇರಿಯಲ್ಲಿ ವಿಚಾರಣೆಗೆ ಹಾಜರಾಗಿದ್ದ ಕವಿತಾ ಅವರಿಗೆ ಮತ್ತೆ ಸೆಪ್ಟೆಂಬರ್ 15 ರಂದು ದೆಹಲಿಯಲ್ಲಿ ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತೆಲಂಗಾಣ ಸಿಎಂ ಕೆ ಚಂದ್ರಶೇಖರರಾವ್ ಪುತ್ರಿ ಕವಿತಾ ಅವರನ್ನು ಮಾರ್ಚ್ 11 ರಂದು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಮೊದಲು ಬಾರಿ ಸುಮಾರು ಒಂಬತ್ತು ಗಂಟೆಗಳ ಕಾಲ ವಿಚಾರಣೆ ನಡೆಸಿದ್ದರು. ನಂತರ ಮಾರ್ಚ್ 16 ರಂದು ಅವರಿಗೆ ಮತ್ತೆ ಸಮನ್ಸ್ ಜಾರಿ ಮಾಡಲಾಗಿತ್ತು. ಆದರೆ, ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಉಳಿದಿರುವ ಅರ್ಜಿಯನ್ನು ಉಲ್ಲೇಖಿಸಿ ವಿಚಾರಣೆಯಿಂದ ಹೊರಗುಳಿದಿದ್ದರು. ಈ ಮನವಿಯನ್ನು ತಿರಸ್ಕರಿಸಿದ್ದ ಇಡಿ ಅಧಿಕಾರಿಗಳು ಮಾರ್ಚ್ 20 ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿತ್ತು.

ಜೆಟ್ ಏರ್‌ವೇಸ್ ಸ್ಥಾಪಕ ನರೇಶ್‌ಗೋಯಲ್‌ಗೆ 14 ದಿನ ನ್ಯಾಯಾಂಗ ಬಂಧನ

ಮುಂಬೈ (ಪಿಟಿಐ): ಬ್ಯಾಂಕ್‌ಗೆ ವಂಚಿಸಿದ ಪ್ರಕರಣದಲ್ಲಿ ಬಂಧಿತರಾಗಿರುವ ಜೆಟ್ ಏರ್‌ವೇಸ್‌ನ ಸ್ಥಾಪಕರಾದ ನರೇಶ್ ಗೋಯಲ್ ಅವರನ್ನು ಪಿಎಂಎಲ್‌ಎ ಕೋರ್ಟ್ 14 ದಿನ ಅವಧಿಗೆ ನ್ಯಾಯಾಂಗ ಬಂಧನಕ್ಕೆ ಗುರುವಾರ ಒಪ್ಪಿಸಿತು.



ಕೆನರಾ ಬ್ಯಾಂಕ್‌ಗೆ 538 ಕೋಟಿ ವಂಚನೆಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಗೋಯಲ್‌ರನ್ನು ಬಂಧಿಸಲಾಗಿದೆ. ತಮ್ಮನ್ನು ದಕ್ಷಿಣ ಮುಂಬೈನ ಆರ್ಥರ್ ರಸ್ತೆಯ ಜೈಲಿಗೆ ಕಳುಹಿಸಬೇಕು ಎಂಬ ಗೋಯಲ್ ಮನವಿಯನ್ನು ಕೋರ್ಟ್ ಪುರಸ್ಕರಿಸಿತು. 74 ವರ್ಷದ ಗೋಯಲ್ ರನ್ನು ಸೆ. 1ರಂದು ಪಿಎಂಎಲ್‌ಎ ಕಾಯ್ದೆಯಡಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಬಂಧಿಸಿದ್ದರು. ಪಿಎಂಎಲ್‌ಎ ವಿಶೇಷ ಕೋರ್ಟ್‌ನ ನ್ಯಾಯಾಧೀಶರಾದ ಎಂ.ಜಿ.ದೇಶಪಾಂಡೆ ಅವರ ಎದುರು ಗುರುವಾರ ಹಾಜರುಪಡಿಸಲಾಗಿತ್ತು.

ಬಳಿಕ, ತಾವು ವಿವಿಧ ಅನಾರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದು, ಕುಟುಂಬ ಹಾಗೂ ಪರಿಣತ ವೈದ್ಯರಿಂದ ನಿತ್ಯ ಆರೋಗ್ಯ ತಪಾಸಣೆಗೆ ಒಳಗಾಗಲು ಅನುವು ಮಾಡಿಕೊಡಬೇಕು. ನಿಯಮಿತವಾಗಿ ವೈದ್ಯಕೀಯ ಸೌಲಭ್ಯ ಒದಗಿಸಬೇಕು ಎಂದು ಕೋರಿ ಗೋಯಲ್ ಅರ್ಜಿ ಸಲ್ಲಿಸಿದರು.

ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಜಾಹೀರಾತು ಫಲಕಗಳಿಗೆ ಅವಕಾಶ

ಮೈಸೂರು, ಸೆ.14– 2023 ರ ಮೈಸೂರು ದಸರಾ ಅಂಗವಾಗಿ ಮೈಸೂರು ವಸ್ತು ಪ್ರದರ್ಶನದಲ್ಲಿ ಅ.10 ರಿಂದ 2024 ರ ಜನವರಿ 12 ರವರೆಗೆ ದಸರಾ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಈ ಅವಧಿಯಲ್ಲಿ ವಸ್ತು ಪ್ರದರ್ಶನ ವೀಕ್ಷಿಸಲು ಸ್ಥಳೀಯ, ಜಿಲ್ಲೆಯ, ರಾಜ್ಯ ಹಾಗೂ ದೇಶ ವಿದೇಶಗಳಿಂದ ಲಕ್ಷಾಂತರ ಜನ ಆಗಮಿಸಲಿದ್ದು, ವಸ್ತು ಪ್ರದರ್ಶನ ಆವರಣದ ಆಯ್ದ ಸ್ಥಳಗಳಲ್ಲಿ ವಿವಿಧ ಅಳತೆಯ ಪ್ರಾಯೋಜಕತ್ವದ ಜಾಹೀರಾತು ಫಲಕ (ಫ್ಲೆಕ್ಸ್) ಅಳವಡಿಸಲು ಸ್ಥಳಾವಕಾಶ ಕಲ್ಪಿಸಲಾಗಿದೆ. ಆಸಕ್ತ ಉದ್ಯಮಿಗಳು, ಸಂಘಸಂಸ್ಥೆಗಳು ಮುಂಚಿತವಾಗಿ ಸ್ಥಳ ಕಾಯ್ದಿರಿಸಿ ತಮ್ಮ ಸಂಸ್ಥೆಯ ಉದ್ದೇಶ ಮತ್ತು ಕಾರ್ಯ ಚಟುವಟಿಕೆಗಳ ಬಗ್ಗೆ ಜನರಿಗೆ ಹೆಚ್ಚಿನ ಪ್ರಚಾರ ದೊರಕುವ ಸಂಬಂಧ ಸಿದ್ಧಪಡಿಸುವ ವೇದಿಕೆಯನ್ನು ಪ್ರಾಯೋಜಕತ್ವ ನೀಡಿ ಸದುಪಯೋಗಪಡಿಸಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ವಸ್ತುಪ್ರದರ್ಶನ ಪ್ರಾಧಿಕಾರದ ವ್ಯವಸ್ಥಾಪಕ ಎಂ.ಎಸ್ ವೆಂಕಟೇಶ್ ದೂ.ಸಂ: 9986846047 ಹಾಗೂ ದ್ವಿತೀಯ ದರ್ಜೆ ಸಹಾಯಕ ನವೀನ್ ಕುಮಾರ್.ಸಿ ದೂ.ಸಂ: 8892855236 ಅನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಫಾ ವೈರಸ್ ಹಿನ್ನೆಲೆ

ಬಾವಲಿಗಳ ಬಗ್ಗೆ ಎಚ್ಚರಿಕೆಯಿಂದಿರಿ; ಪಕ್ಷಿ ಕಚ್ಚಿರುವ ಹಣ್ಣು ಬಳಸಬೇಡಿ



ಮೈಸೂರು ಜಿಲ್ಲಾಧಿಕಾರಿ ಡಾ. ರಾಜೇಂದ್ರ ಸಲಹೆ


- ಖಾಸಗಿ ಕ್ಲಿನಿಕ್‌ಗಳಲ್ಲಿ ಮಾಹಿತಿ ಕಡ್ಡಾಯ
- ಬೇಜವಾಬ್ದಾರಿ ಗ್ರಾಮ ಒನ್ ಸೆಂಟರ್‌ಗೆ ನೋಟಿಸ್
- ರೈತರು ಗುಳೆ ಹೋಗದಂತೆ ತಡೆಯಿರಿ
- ಕುಡಿಯುವ ನೀರಿನ ಓವರ್‌ಹೆಡ್ ಟ್ಯಾಂಕ್ ಸ್ವಚ್ಛ ಮಾಡಿ

ಮೈಸೂರು, ಸೆ.14(ಬಿಎಲ್‌ಯು)– ಕೇರಳದಲ್ಲಿ ವ್ಯಾಪಕಗೊಳ್ಳುತ್ತಿರುವ ನಿಫಾ ವೈರಸ್ ಹಿನ್ನೆಲೆಯಲ್ಲಿ ಮನೆ ಬಳಿ ಬಾವಲಿಗಳು ಇದ್ದರೆ ಎಚ್ಚರಿಕೆ ವಹಿಸಿ, ಪಕ್ಷಿಗಳು ಕಚ್ಚಿರುವ ಹಣ್ಣುಗಳನ್ನು ಬಳಸಬೇಡಿ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸಲಹೆ ನೀಡಿದ್ದಾರೆ.

ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿಯ ಕೆಸ್ವಾನ್ ಸಭಾಂಗಣದಲ್ಲಿ ನಿಫಾ ವೈರಸ್ ನಿಯಂತ್ರಣ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳ ಜೊತೆ ನಡೆಸಿದ ಸಭೆಯಲ್ಲಿ ಮಾತನಾಡಿದ ಅವರು, ಹಣ್ಣುಗಳನ್ನು ಚೆನ್ನಾಗಿ ತೊಳೆದು ತಿನ್ನಬೇಕು ಎಂದು ಹೇಳಿದರು.

ಕೇರಳ ಗಡಿಭಾಗದ ನಂಜನಗೂಡು ಹಾಗೂ ಹೆಚ್.ಡಿ.ಕೋಟೆ ಬಾವಲಿ ಬಳಿ ಚೆಕ್‌ಪೋಸ್ಟ್ ತೆರೆಯಲಾಗಿದೆ. ಕೇರಳದಿಂದ ಬರುವವರನ್ನು ಪರೀಕ್ಷೆಗೊಳಪಡಿಸಲಾಗುತ್ತಿದೆ. ಅವರಿಗೆ ಜ್ವರ, ತಲೆನೋವು, ಮೈಕೈ ನೋವು ಇದ್ದರೆ ಪರೀಕ್ಷೆ ಮಾಡಿಸಿಕೊಳ್ಳುವಂತೆ ಅರಿವು ಮೂಡಿಸಲಾಗುತ್ತಿದೆ. ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಂಡಿರುವ ಹಿನ್ನೆಲೆಯಲ್ಲಿ ಮೈಸೂರು ಜನರು ನಿಫಾ ವೈರಸ್ ಬಗ್ಗೆ ಆತಂಕಪಡುವುದು ಬೇಡ ಎಂದು ಡಾ.ರಾಜೇಂದ್ರ ತಿಳಿಸಿದ್ದಾರೆ.

ಖಾಸಗಿ ಕ್ಲಿನಿಕ್‌ಗಳಲ್ಲಿ ಮಾಹಿತಿ ಫಲಕ: ಖಾಸಗಿ ಕ್ಲಿನಿಕ್‌ಗಳಲ್ಲಿ ವೈದ್ಯರ ಮಾಹಿತಿ, ಅವರ ವಿದ್ಯಾರ್ಹತೆ ಹಾಗೂ ನೋಂದಣಿ ಸಂಖ್ಯೆಗಳಿರುವ ಮಾಹಿತಿ ಫಲಕವನ್ನು ಕಡ್ಡಾಯವಾಗಿ ಹಾಕಿರಬೇಕು. ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಆರೋಗ್ಯಾಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ಮಾಡಬೇಕು. ತಾಯಿ, ಮಗುವಿನ ಮರಣ ಪ್ರಮಾಣವನ್ನು ಕಡಿಮೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.



ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಹಳ್ಳಿಗಳಲ್ಲಿ ಗರ್ಭಿಣಿ ಸ್ತ್ರೀಯರನ್ನು ಗುರುತಿಸಿ, ಸರ್ಕಾರದ ಸೌಲಭ್ಯಗಳನ್ನು ಅವರಿಗೆ ತಿಳಿಸಬೇಕು. ಜೊತೆಗೆ ವೈದ್ಯಕೀಯ ಸೌಲಭ್ಯ ದೊರೆಯುವ ಕುರಿತಂತೆ ಮಾಹಿತಿ ನೀಡಬೇಕು ಎಂದು ಡಾ.ರಾಜೇಂದ್ರ ಸೂಚನೆ ನೀಡಿದರು.

ಆರೋಗ್ಯ ಕಾರ್ಡ್ ವಿತರಣೆ: ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಕಾರ್ಡ್‌ಗಳನ್ನು ವಿತರಣೆ ಮಾಡುವಲ್ಲಿ ಆರೋಗ್ಯಾಧಿಕಾರಿಗಳು ಮುತುವರ್ಜಿ ವಹಿಸಬೇಕು. ಮೈಸೂರು ಜಿಲ್ಲೆಗೆ 26 ಲಕ್ಷ ಗುರಿ ನಿಗದಿ ಮಾಡಲಾಗಿದ್ದು, 6 ಲಕ್ಷ ಮಾತ್ರ ನೋಂದಣಿಯಾಗಿದೆ ಈ ಹಿನ್ನೆಲೆಯಲ್ಲಿ ಸರಿಯಾಗಿ ನೋಂದಣಿಗೆ ಸಹಕರಿಸದ ಗ್ರಾಮ ಒನ್ ಸೆಂಟರ್‌ಗಳಿಗೆ ನೋಟಿಸ್ ನೀಡಲಾಗುವುದು ಎಂದು ಎಚ್ಚರಿಸಿದರು.

ಆತ್ಮಹತ್ಯೆ ಮಾಡಿಕೊಂಡಿರುವ ರೈತರ ಕುಟುಂಬಗಳಿಗೆ ಮುಂದಿನ ಒಂದು ವಾರದೊಳಗೆ ಆರೋಗ್ಯ ಕಾರ್ಡ್‌ಗಳನ್ನು ಮಾಡಿಸಬೇಕು ಎಂದು ಡಾ.ರಾಜೇಂದ್ರ ತಾಕೀತು ಮಾಡಿದರು.

ಮೈಸೂರು ಜಿಲ್ಲೆಯಲ್ಲಿ ಕೆ.ಆರ್.ನಗರ ಹೊರತುಪಡಿಸಿ ಉಳಿದ ಎಲ್ಲಾ ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಣೆ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಗ್ರಾಮಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ಯಾವುದೇ ತೊಂದರೆ ಆಗದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು. ಕುಡಿಯುವ ನೀರಿನ ಓವರ್‌ಹೆಡ್ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸಬೇಕು. ಜಾನುವಾರು ಮೇವು ಲಭ್ಯತೆ ಕುರಿತು ಮಾಹಿತಿ ಹೊಂದಿರಬೇಕು. ಮೇವು ಬೆಳೆಯಲು ಮೇವು ಬಿತ್ತನೆ ಬೀಜ ವಿತರಣಾ ಕಾರ್ಯ ಕೈಗೊಳ್ಳಬೇಕು ಎಂದು ಪಶು ಸಂಗೋಪನಾ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನರೇಗಾ ಯೋಜನೆಯಡಿ ರೈತರಿಗೆ ಕೆಲಸಗಳನ್ನು ನೀಡಿ ಅವರಿಗೆ ಆರ್ಥಿಕ ಬಲ ದೊರೆಯುವಂತೆ ಮಾಡಬೇಕು. ರೈತರು ಗುಳೆ ಹೋಗದಂತೆ ನೋಡಿಕೊಳ್ಳಬೇಕು ಎಂದು ಡಾ.ರಾಜೇಂದ್ರ ಸೂಚನೆ ನೀಡಿದರು.

ಇದೇ ವೇಳೆ ಮಾತನಾಡಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯತ್ರಿ, ಕುಡಿಯುವ ನೀರಿನ ಸಮಸ್ಯೆ ಎದುರಾದರೆ 24 ಗಂಟೆಯೊಳಗೆ ಪರಿಹಾರ ಮಾಡಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು. ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕುಮಾರಸ್ವಾಮಿ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್ ವಿರುದ್ಧದ ಲಂಚ ಪ್ರಕರಣ ರದ್ದುಗೊಳಿಸಿದ ಹೈಕೋರ್ಟ್

ಬೆಂಗಳೂರು: ಲಂಚ ಪ್ರಕರಣದಲ್ಲಿ ಭ್ರಷ್ಟಾಚಾರ ತಡೆ ಕಾಯ್ದೆಯಡಿ ಹಿರಿಯ ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್ ವಿರುದ್ಧದ ಕ್ರಿಮಿನಲ್ ಮೊಕದ್ದಮೆಯನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಆದಾಗ್ಯೂ, ಸಕ್ಷಮ ಪ್ರಾಧಿಕಾರದಿಂದ ಮಾನ್ಯವಾದ ಮಂಜೂರಾತಿಯನ್ನು ಪ್ರಾಸಿಕ್ಯೂಷನ್‌ನಿಂದ ಹಾಜರುಪಡಿಸಿದ ನಂತರವೇ ಅಲೋಕ್ ಕುಮಾರ್ ವಿರುದ್ಧ ವಿಶೇಷ ನ್ಯಾಯಾಲಯಕ್ಕೆ ಮುಂದುವರಿಯುವ ಸ್ವಾತಂತ್ರ್ಯವನ್ನು ಹೈಕೋರ್ಟ್ ಕಾಯ್ದಿರಿಸಿದೆ.

2015ರಲ್ಲಿ ಲೋಕಾಯುಕ್ತ ಪೊಲೀಸರು ದಾಖಲಿಸಿದ್ದ ಅಪರಾಧಕ್ಕೆ ಸಂಬಂಧಿಸಿದಂತೆ ತಮ್ಮ ವಿರುದ್ಧದ ಅಪರಾಧಗಳ ವಿಚಾರಣೆಗೆ 2022ರ ಡಿಸೆಂಬರ್ 13ರಂದು ವಿಶೇಷ ನ್ಯಾಯಾಲಯ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಅಲೋಕ್ ಕುಮಾರ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಅವರ ಅರ್ಜಿಯನ್ನು ಅಂಗೀಕರಿಸಿದ ನ್ಯಾಯಮೂರ್ತಿ ಎಂ ನಾಗಪ್ರಸನ್ನ, ಅರ್ಜಿದಾರರ ವಿರುದ್ಧ ಕಾನೂನು ಕ್ರಮ ಜರುಗಿಸಲು ಅನುಮತಿ ಇಲ್ಲದಿದ್ದಲ್ಲಿ ವಿಶೇಷ ನ್ಯಾಯಾಲಯವು ಸ್ವಯಂ ಪ್ರೇರಿತವಾಗಿ ತೆಗೆದುಕೊಳ್ಳುವಂತಿಲ್ಲ ಎಂದು ಹೇಳಿದರು.

ಅಪರಾಧದಾಖಲಿಸಿದಾಗ ಅರ್ಜಿದಾರರನ್ನು ಆರೋಪಿ ಎಂದು ಹೆಸರಿಸಲಾಗಿಲ್ಲ.



ನಂತರ ಲೋಕಾಯುಕ್ತ ಪೊಲೀಸರು ತನಿಖೆ ನಡೆಸಿ ವಿಶೇಷ ನ್ಯಾಯಾಲಯಕ್ಕೆ 'ಬಿ' ರಿಪೋರ್ಟ್ ಸಲ್ಲಿಸಿದ್ದರು. 'ಬಿ' ವರದಿಯನ್ನು ತಿರಸ್ಕರಿಸುವಂತೆ ದೂರುದಾರರು ಸಲ್ಲಿಸಿದ ಪ್ರತಿಭಟನಾ ಮೆಮೊ ಆಧರಿಸಿ, ಅರ್ಜಿದಾರರ ವಿರುದ್ಧ ಕಾಗ್ನಿಜೆನ್ಸ್ ತೆಗೆದುಕೊಳ್ಳಲಾಗಿದೆ. ಹೀಗಾಗಿ ಮಂಜೂರಾತಿ ಅನಿವಾರ್ಯ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ದೂರಿನಲ್ಲಿ ಲಂಚದ ಬೇಡಿಕೆ ಮತ್ತು ಸ್ವೀಕರಿಸುವುದು ಇಲ್ಲ, ಅರ್ಜಿದಾರರು ನಗರದಲ್ಲಿ ರೌಡಿ ಚಟುವಟಿಕೆಗಳನ್ನು ತಡೆಯುವಲ್ಲಿ ಕಟ್ಟುನಿಟ್ಟಾಗಿ ವರ್ತಿಸಿದ್ದಾರೆ ಎಂದು ಅಲೋಕ್ ಕುಮಾರ್ ಪರ ವಕೀಲರು ವಾದಿಸಿದರು. 2015ರ ಮೇ 30ರಂದು ಬಾರ್ ಅಂಡ್ ರೆಸ್ಟೋರೆಂಟ್‌ವೊಂದರ ಆಡಳಿತ ಮಂಡಳಿ ಹಾಗೂ ದೂರುದಾರರ ನಡುವೆ ವಾಗ್ವಾದ ನಡೆದಿದ್ದು, ವೈಯಾಲಿಕಾವಲ್ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ತನಿಖೆಯ ವೇಳೆ ಎಸಿಪಿ ಮತ್ತು ಇತರ ಪೊಲೀಸ್ ಅಧಿಕಾರಿಗಳು ರವಿಗೆ ಕರೆ ಮಾಡಿ ಪ್ರಕರಣವನ್ನು ಮುಚ್ಚಿ ಹಾಕಲು ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎನ್ನಲಾಗಿದೆ.

ರವಿ 5 ಲಕ್ಷ ರೂ. ನೀಡಿದ್ದರು. ಆದರೆ ಎಸಿಪಿ 1 ಕೋಟಿ ರೂ.ಗೆ ಬೇಡಿಕೆ ಇಟ್ಟಿದ್ದು, ಅದನ್ನು ಅಲೋಕ್ ಕುಮಾರ್ ಅವರಿಗೆ ನೀಡಬೇಕು ಎಂದು ದೂರಿನಲ್ಲಿ ಹೇಳಲಾಗಿದೆ. ರವಿ ಲಂಚ ನೀಡದಿದ್ದಾಗ ಶಸ್ತ್ರಾಸ್ತ್ರ ಕಾಯಿದೆಯಡಿ ಗಂಭೀರ ಅಪರಾಧ ಮಾಡುವುದಾಗಿ ಬೆದರಿಕೆ ಹಾಕಿದ್ದರು. ಇದರ ಆಧಾರದ ಮೇಲೆ ಲೋಕಾಯುಕ್ತ ಪೊಲೀಸರ ಮುಂದೆ ಅಪರಾಧ ಪ್ರಕರಣ ದಾಖಲಾಗಿತ್ತು. ಲಂಚದ ಬೇಡಿಕೆ ಮತ್ತು ಸ್ವೀಕಾರದ ಆರೋಪದಲ್ಲಿ ಯಾವುದೇ ಹುರುಳಿಲ್ಲ ಎಂದು ಪ್ರತಿಪಾದಿಸಿ ಅಲೋಕ್ ಕುಮಾರ್ ವಿರುದ್ಧ 'ಬಿ' ರಿಪೋರ್ಟ್ ಸಲ್ಲಿಸಿದ್ದರು.

ಸರ್ಕಾರದ ಹೊಸ ನಿಯಮ: 5 ವರ್ಷ ಗುತ್ತಿಗೆದಾರರಿಂದಲೇ ರಸ್ತೆ ನಿರ್ವಹಣೆ

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಘೋಷಣೆ

ಬೆಂಗಳೂರು: ಇನ್ನು ಮುಂದೆ ನಮ್ಮ ರಾಜ್ಯದ ರಸ್ತೆಗಳನ್ನು ನಿರ್ಮಾಣ ಮಾಡಿದ ಗುತ್ತಿಗೆದಾರರೇ ಐದು ವರ್ಷದವರೆಗೆ ನಿರ್ವಹಣೆ ಮಾಡಬೇಕು ಎಂಬ ಹೊಸ ನಿಯಮವನ್ನು ಜಾರಿಗೆ ತರುತ್ತಿದ್ದೇವೆ. ಇಲ್ಲಿಯವರೆಗೆ ಈ ರೂಲ್ಸ್ ಇರಲಿಲ್ಲ. ಹೊಸದಾಗಿ ಜಾರಿ ಮಾಡುತ್ತಾ ಇದ್ದೇವೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದ್ದಾರೆ.



ಮಾಧ್ಯಮದವರೊಂದಿಗೆ ಮಾತನಾಡಿದ ಸಚಿವರು, ಲೋಕೋಪಯೋಗಿ ಇಲಾಖೆಯಲ್ಲಿ ಸುಧಾರಣೆ ಮಾಡುವುದಕ್ಕೆ ಕ್ರಮ ಕೈಗೊಂಡಿದ್ದೇವೆ. ಈ ನಿಟ್ಟಿನಲ್ಲಿಯೇ ನಿರ್ವಹಣೆಯ ಜವಾಬ್ದಾರಿಯನ್ನು ರಸ್ತೆ ನಿರ್ಮಾಣ ಮಾಡುವ ಗುತ್ತಿಗೆದಾರರಿಗೇ ನೀಡಲಾಗಿದೆ ಎಂದು ತಿಳಿಸಿದರು.

ಲೋಕೋಪಯೋಗಿ ಇಲಾಖೆಯಲ್ಲಿ ಆ್ಯಪ್ ಟ್ರಯಲ್‌ನಲ್ಲಿದೆ. ಇದು ಬಿಡುಗಡೆಯಾದರೆ ಅನುಕೂಲ ಆಗಲಿದೆ ಇದು ಹೇಗೆ ಕಾರ್ಯ ನಿರ್ವಹಣೆ ಮಾಡಲಿದೆ, ಇದು ಯಾವುದಕ್ಕೆಲ್ಲ ಉಪಯೋಗವಾಗಲಿದೆ ಎಂಬ ಬಗ್ಗೆ ಮಾಹಿತಿ ಇನ್ನು ನೀಡಿಲ್ಲ.

ನಮ್ಮ ಐಬಿಗಳ ನಿರ್ವಹಣೆ ಮಾಡಲು ಇಬ್ಬರು, ಮೂವರು ಜನರನ್ನು ಗುತ್ತಿಗೆ ಆಧಾರಿತವಾಗಿ ನೇಮಕ ಮಾಡುತ್ತೇವೆ. ರಾಜ್ಯದಲ್ಲಿ ರಸ್ತೆ ಅಭಿವೃದ್ಧಿ ಮಾಡುವಾಗ ಕಳಪೆ ಮಾಡುತ್ತಾರೆ ಎಂಬ ಆರೋಪಗಳು ಹೆಚ್ಚಾಗಿದೆ ಆದ್ದರಿಂದ ಮುಂದಿನ ದಿನಗಳಲ್ಲಿ ಗುತ್ತಿಗೆದಾರರೇ 5 ವರ್ಷಗಳ ಕಾಲ ತಾವು ಅಭಿವೃದ್ಧಿ ಮಾಡಿದ ರಸ್ತೆಗಳನ್ನು ನಿರ್ವಹಣೆ ಮಾಡಬೇಕು ಎಂದರು.

ಶಕ್ತಿ ಸೋಲಾರ್‌ನ ನೇರ ಮಾರಾಟ ಮಳಿಗೆ ಆರಂಭ

ಮೈಸೂರು, ಸೆ.14–ಅತ್ಯುತ್ತಮ ಗುಣಮಟ್ಟದ ಸೋಲಾರ್ ಉಪಕರಣಗಳನ್ನು ತಯಾರಿಸುತ್ತಿರುವ ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿರುವ ಶಕ್ತಿ ರಿನಿವಬಲ್ಸ್ ಸಂಸ್ಥೆಯು ರಿಂಗ್ ರಸ್ತೆಯ ಬೆಲವತ್ತ ಜಂಕ್ಷನ್‌ನಲ್ಲಿ ತನ್ನ ಶಕ್ತಿ ಸೋಲಾರ್ ನೇರ ಮಾರಾಟ ಮಳಿಗೆಯನ್ನು ಶುಕ್ರವಾರ (ಸೆ.15) ಆರಂಭಿಸಲಿದೆ.

ದೀರ್ಘ ಬಾಳಿಕೆಯ ಉತ್ಕೃಷ್ಟ ದರ್ಜೆಯ ಸೋಲಾರ್ ಹೀಟರ್‌ಗಳು, ಸೋಲಾರ್ ಲೈಟಿಂಗ್‌ಗಳು, ಸೋಲಾರ್ ರೂಫ್‌ಟಾಪ್‌ಗಳು, ಬಾಯ್ಲರ್‌ಗಳಿಗಾಗಿ ಗ್ರಾಹಕರು ಈ ನೇರ ಮಾರಾಟ ಮಳಿಗೆಯನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ನಂ. 9845206033 ಅಥವಾ 8296053533ಗೆ ಕರೆ ಮಾಡಬಹುದು.

ಕ್ರೈಂ ಬಾಕ್ಸ್

ಕೇರ್ಗಳ್ಳಿ ಬಳಿ ವ್ಯಕ್ತಿ ಹತ್ಯೆ ಪ್ರಕರಣ: 24 ಗಂಟೆಯಲ್ಲಿ ಆರೋಪಿ ಸೆರೆ

ತನಗೆ ಸಾಲ ಕೊಡಿಸಿದವನಿಗೆ ಶೂಲ ಹಾಕಿದ!

ಮೈಸೂರು, ಸೆ.14(ಎಸ್‌ಬಿಡಿ)– ಮೈಸೂರು ತಾಲೂಕು ಜಯಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ವ್ಯಕ್ತಿಯೊಬ್ಬರ ಹತ್ಯೆ ಪ್ರಕರಣ ಸಂಬಂಧ ಆರೋಪಿಯನ್ನು ಬಂಧಿಸಲಾಗಿದೆ.

ಜಯಪುರ ಹೋಬಳಿ, ಕೇರ್ಗಳ್ಳಿ ಗ್ರಾಮದ ಮಹದೇವ(45) ಅವರನ್ನು ಸೆ.9ರಂದು ಹತ್ಯೆ ಮಾಡಲಾಗಿತ್ತು ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ ಪೊಲೀಸರು ಮೈಸೂರು ನಗರದ ಕೆಸರೆ 7ನೇ ಕ್ರಾಸ್ ನಿವಾಸಿ ಕೌಶಿರ್ ಪಾಷಾನ ಪುತ್ರ ಅಫ್ಸರ್ ಪಾಷಾ(35)ನನ್ನು ಸೆ.12ರಂದು ಕೆ.ಆರ್.ಪೇಟೆಯಲ್ಲಿ ಬಂಧಿಸಿದ್ದಾರೆ. ಪ್ರಕರಣ ದಾಖಲಾದ 24 ಗಂಟೆಯೊಳಗೆ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾದ ಪೊಲೀಸರು, ಬಳಿಕ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದು, ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಹಣಕಾಸು ವಿಚಾರ: ಮೈಸೂರಿನ ಅಫ್ಸರ್ ಪಾಷಾ ಕೇರ್ಗಳ್ಳಿಯಲ್ಲಿ ಮಟನ್ ಅಂಗಡಿ ನಡೆಸುತ್ತಿದ್ದ. ಈತನಿಗೆ ಮಹದೇವ ಪರಿಚಿತ. ಹಾಗಾಗಿ ಅಫ್ಸರ್ ಪಾಷಾಗೆ ಬೇರೊಬ್ಬರಿಂದ ಒಂದೂವರೆ ಲಕ್ಷ ರೂ. ಸಾಲ ಕೊಡಿಸಿದ್ದ. ಆದರೆ ಅಫ್ಸರ್, ಸರಿಯಾಗಿ ಬಡ್ಡಿ ಕಟ್ಟುತ್ತಿರಲಿಲ್ಲ. ಇತ್ತ ಹಣ ನೀಡಿದ್ದವರು ಮಹದೇವನಿಗೆ ಹಣಕ್ಕೆ ಒತ್ತಾಯಿಸುತ್ತಿದ್ದರು. ಇದರಿಂದ ಸಿಟ್ಟಿಗೆದ್ದ ಮಹದೇವ, ಸರಿಯಾಗಿ ಬಡ್ಡಿ ಕಟ್ಟಬೇಕು, ಇಲ್ಲವೇ ಹಣವನ್ನು ವಾಪಸ್ ನೀಡಬೇಕೆಂದು ಅಫ್ಸರ್‌ಗೆ ಒತ್ತಡ ಹೇರುತ್ತಿದ್ದ. ಇದನ್ನು ಸಹಿಸದ ಅಫ್ಸರ್, ಹತ್ಯೆಗೆ ಸ್ಕೆಚ್ ಹಾಕಿದ್ದ ಬಗ್ಗೆ ಪೊಲೀಸರ ವಿಚಾರಣೆಯಲ್ಲಿ ತಿಳಿದುಬಂದಿದೆ.

ಕುಡಿಸಿ ನಂತರ ಹತ್ಯೆ: ಸೆ.9ರಂದು ಬೆಳಗ್ಗೆ ಮಾತನಾಡುವ ನೆಪದಲ್ಲಿ ಅಫ್ಸರ್ ಪಾಷಾ, ಮಹದೇವನನ್ನು ಗ್ರಾಮದ ಹೊರವಲಯದ ಬಾರ್‌ವೊಂದರ ಬಳಿ ಇರುವ ಪಾಳು ತೋಟಕ್ಕೆ ಕರೆದೊಯ್ದಿದ್ದ. ಮರವೊಂದರ ಬಳಿ ಇಬ್ಬರೂ ಮದ್ಯಪಾನ ಮಾಡಿದ್ದಾರೆ. ಆಗ ಸಾಲದ ವಿಚಾರವಾಗಿ ಶುರುವಾದ ಜಗಳ ವಿಕೋಪಕ್ಕೆ ತಿರುಗಿದೆ ಆ ವೇಳೆ ಅಫ್ಸರ್ ಪಾಷಾ ಪೂರ್ವ ನಿಯೋಜಿತವಾಗಿ ತೆಗೆದುಕೊಂಡು ಹೋಗಿದ್ದ ಮಟನ್ ಕತ್ತರಿಸುವ ಮಾರಕಾಸ್ತ್ರದಿಂದ ಮಹದೇವನ ಕತ್ತು ಕೊಯ್ದು, ಹತ್ಯೆ ಮಾಡಿ ತಲೆಮರೆಸಿಕೊಂಡಿದ್ದ.

ಸಿಮ್ ಬದಲಿಸಿದ್ದ: ಪೊಲೀಸರ ತನಿಖೆ ವೇಳೆ ಮಹದೇವನಿಗೆ ಕಡೆಯದಾಗಿ ಕರೆ ಮಾಡಿದ್ದು ಅಫ್ಸರ್ ಎಂದು ಗೊತ್ತಾಗಿದೆ. ಆತನಿಗೆ ಕರೆ ಮಾಡಿದಾಗ ಮೊಬೈಲ್ ಸ್ವಿಚ್ಡ್‌ಆಫ್ ಆಗಿದ್ದರಿಂದ ಪೊಲೀಸರ ಅನುಮಾನ ಗಟ್ಟಿಯಾಗಿದೆ. ಬಳಿಕ ಪೊಲೀಸರು ಮೊಬೈಲ್ ಐಎಂಇಐ ನಂಬರ್ ಆಧಾರದಲ್ಲಿ ತನಿಖೆ ಮುಂದುವರೆಸಿದಾಗ ಆತ ಬೆಂಗಳೂರಿನಲ್ಲಿರುವುದು ತಿಳಿದು, ಬೆನ್ನತ್ತಿದ್ದಾರೆ. ಆದರೆ ಕೆಲ ಗಂಟೆಗಳ ನಂತರ ಕೆ.ಆರ್.ಪೇಟೆಯಲ್ಲಿರುವ ಮಾಹಿತಿ ಲಭ್ಯವಾಗಿದ್ದು, ಅಲ್ಲಿ ಬಲೆ ಬೀಸಿ ಅಫ್ಸರ್‌ನನ್ನು ಬಂಧಿಸಿದ್ದಾರೆ ಎನ್ನಲಾಗಿದೆ. ಪೊಲೀಸರಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಅಫ್ಸರ್ ಮೊಬೈಲ್‌ನಿಂದ ತನ್ನ ಸಿಮ್ ತೆಗೆದು, ತನ್ನ ಪತ್ನಿಯ ಸಿಮ್ ಹಾಕಿಕೊಂಡು ಹೋಗಿದ್ದ ಎಂದು ತಿಳಿದುಬಂದಿದೆ.

ಮಹದೇವ, ಸೆ.9ರಂದು ಬೆಳಗ್ಗೆ 8 ಗಂಟೆಗೆ ಮನೆಯಿಂದ ಹೊರಟು ಬಾರ್ ಬಳಿ ಹೋಗಿದ್ದಾನೆ. ಬೆಳಗ್ಗೆ 10.30ಕ್ಕೆ ಅವರ ಪತ್ನಿ ಲಕ್ಷ್ಮಮ್ಮ ಕರೆ ಮಾಡಿ, ಉಪಾಹಾರಕ್ಕೆ ಬರುವಂತೆ ಹೇಳಿದಾಗ ಬಾಳೆ ಎಲೆ ಕುಯ್ಯಲು ಬಂದಿದ್ದೇನೆ. ಇಲ್ಲಿಯೇ ತಿಂಡಿ ಕೊಡುತ್ತಾರೆ ಎಂದು ತಿಳಿಸಿದ್ದಾನೆ. ಸ್ವಲ್ಪ ಸಮಯದ ಬಳಿಕ ಮತ್ತೆ ಕರೆ ಮಾಡಿದಾಗ ಮೊಬೈಲ್ ನಾಟ್ ರೀಚಬಲ್ ಬಂದಿದೆ. ಎಲ್ಲಿಂಯೋ ಹೋಗಿರಬೇಕು ಎಂದು ತಿಳಿದಿದ್ದರು. ಆದರೆ ಸಂಜೆಯಾದರೂ ಮಹದೇವ ಮನೆಗೆ ಬಾರದೆ ಇದ್ದಾಗ ಗಾಬರಿಗೊಂಡು ಎಲ್ಲಾ ಕಡೆ ಹುಡುಕಾಡಿದ್ದರು. ಲಕ್ಷ್ಮಮ್ಮ ಅವರ ಮೈದುನ ಗವಿಸಿದ್ದ ಹಾಗೂ ಅಳಿಯ ರಾಮು, ಸೆ.11ರಂದು ಬೆಳಗ್ಗೆ ಹುಡುಕಾಟ ನಡೆಸುವಾಗ ಗ್ರಾಮದ ಹೊರವಲಯದ ಬಸವೇಗೌಡರ ಜಮೀನಿನ ಬಳಿ ಮಹದೇವನ ಶವ ಪತ್ತೆಯಾಗಿತ್ತು.

ಸ್ಥಳ ಪರಿಶೀಲನೆ ನಡೆಸಿದ್ದ ಪೊಲೀಸರು, ವೈದ್ಯಕೀಯ ಪರೀಕ್ಷೆ ನಂತರ ಶವವನ್ನು ವಾರಸುದಾರರಿಗೆ ಒಪ್ಪಿಸಿದ್ದರು. ಘಟನೆ ಸಂಬಂಧ ಮಹದೇವ ಅವರ ಪತ್ನಿ ಲಕ್ಷ್ಮಮ್ಮ ನೀಡಿದ ದೂರಿನ ಆಧಾರದಲ್ಲಿ ಜಯಪುರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಎಎಸ್ಪಿ ಡಾ.ನಂದಿನಿ ಮಾರ್ಗದರ್ಶನ, ಡಿವೈಎಸ್ಪಿ ಆರ್.ಸುಮಿತ್ ನಿರ್ದೇಶನದಲ್ಲಿ ಮೈಸೂರು ಗ್ರಾಮಾಂತರ ಉಪ ವಿಭಾಗದ ವೃತ್ತ ನಿರೀಕ್ಷಕಿ (ಪ್ರಭಾರ) ಜಿ.ಎಸ್.ಸ್ವರ್ಣ, ಜಯಪುರ ಠಾಣೆ ಸಬ್‌ಇನ್ಸ್‌ಪೆಕ್ಟರ್ ಕೆ.ಎನ್.ಸುರೇಶ್ ಬೋಪಣ್ಣ, ಸಿಬ್ಬಂದಿ ಕೆರವಿಕುಮಾರ್, ಕೃಷ್ಣಶೆಟ್ಟಿ, ಕೆಎಸ್.ಆನಂದ, ಎಂ.ಹರೀಶ್, ದಸ್ತಗೀರ್ ಸಾಬ್ ದುಮ್ಮದ್ರಿ, ಚಾಲಕರಾದ ಮಹದೇವಸ್ವಾಮಿ, ಅರುಣೇಶ್ ಕಾರ್ಯಾಚರಣೆ ನಡೆಸಿ, ಪ್ರಕರಣವನ್ನು ಭೇದಿಸಿದ್ದಾರೆ.

ಹೆದ್ದಾರಿಯಲ್ಲಿ ಕಾರು ತಡೆದು ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿ ಮೊಬೈಲ್, ದಾಖಲೆ ಬ್ಯಾಗ್ ದೋಚಿದ್ದ ಮೂವರ ಬಂಧನ

ಮೈಸೂರು, ಸೆ.14(ಎಸ್‌ಬಿಡಿ)– ಮೈಸೂರು–ಹುಣಸೂರು ಹೆದ್ದಾರಿಯಲ್ಲಿ ಕಾರು ತಡೆದು ಚಾಲಕನ ಮೇಲೆ ಹಲ್ಲೆ ನಡೆಸಿ, ಮೊಬೈಲ್ ಹಾಗೂ ದಾಖಲೆಗಳಿದ್ದ ಬ್ಯಾಗ್ ದೋಚಿದ್ದ ಮೂವರು ಖದೀಮರನ್ನು ಮೈಸೂರಿನ ಇಲವಾಲ ಠಾಣೆ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಮೈಸೂರಿನ ಹೂಟಗಳ್ಳಿ ನಿವಾಸಿಗಳಾದ ಕಾವೇರಪ್ಪ, ನಿಶಾಂತ್ ಹಾಗೂ ಅಮೃತೇಶ್ ಬಂಧಿತರು. ಇವರಿಂದ ಮೊಬೈಲ್, ದಾಖಲಾತಿಗಳಿದ್ದ ಬ್ಯಾಗ್ ಹಾಗೂ ಕೃತ್ಯಕ್ಕೆ ಬಳಸಿದ್ದ 2 ಸ್ಕೂಟರ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಬಂಧಿತರನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದು, ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಮೈಸೂರು ಪೊಲೀಸ್ ಠಾಣೆಯೊಂದರ ಸಿಬ್ಬಂದಿ ಕೆ.ಬಿ.ವೀರಭದ್ರ(40) ಅವರು ಸೆ.9ರಂದು ರಾತ್ರಿ 11.30ರ ಸಮಯದಲ್ಲಿ ಕಾರ್ಯನಿಮಿತ್ತ ಮೈಸೂರಿನಿಂದ ಇಲವಾಲಕ್ಕೆ ತಮ್ಮ ಸ್ನೇಹಿತರೊಬ್ಬರ ಮಾರುತಿ ಸುಜುಕಿ ಆಲ್ಟೋ 800 ಕಾರಿನಲ್ಲಿ ಹೋಗುತ್ತಿದ್ದರು. ಈ ವೇಳೆ ಇಲವಾಲದ ಸರ್ಕಾರಿ ಆಸ್ಪತ್ರೆ ಬಳಿ ಬೈಕ್‌ನಲ್ಲಿ ಬಂದ ಮೂವರು ಕಾರನ್ನು ಅಡ್ಡಗಟ್ಟಿ ನಿಲ್ಲಿಸಿ, ಏಕಾಏಕಿ ವೀರಭದ್ರ ಅವರನ್ನು ಕಾರಿನಿಂದ ಕೆಳಗೆ ಎಳೆದು ಹಲ್ಲೆ ನಡೆಸಿದರಲ್ಲದೆ, ಕಾರಿನ ಗಾಜು ಪುಡಿಪುಡಿ ಮಾಡಿ, ಸುಮಾರು 45 ಸಾವಿರ ಬೆಲೆ ಬಾಳುವ 1+ ಮೊಬೈಲ್ ಹಾಗೂ ದಾಖಲೆಗಳಿದ್ದ ಬ್ಯಾಗ್ ಕಿತ್ತುಕೊಂಡು ಪರಾರಿಯಾಗಿದ್ದರು.

ಈ ಸಂಬಂಧ ಇಲವಾಲ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಎಎಸ್‌ಪಿ ಡಾ.ನಂದಿನಿ, ಮೈಸೂರು ಗ್ರಾಮಾಂತರ ಉಪವಿಭಾಗದ ಡಿವೈಎಸ್ಪಿ ಸುಮೀತ್ ನಿರ್ದೇಶನ, ಗ್ರಾಮಾಂತರ ವೃತ್ತ ನಿರೀಕ್ಷಕಿ ಜಿ.ಎಸ್.ಸ್ವರ್ಣ ಮಾರ್ಗದರ್ಶನದಲ್ಲಿ ಇಲವಾಲ ಸಬ್‌ಇನ್ಸ್‌ಪೆಕ್ಟರ್ ಎಂ.ಮಂಜುನಾಥ ನಾಯಕ, ಎಎಸ್‌ಐ ನಾಗರಾಜು, ಸಿಬ್ಬಂದಿ ಎಂ.ಬಿ.ಧರ್ಮ, ಹೆಚ್.ಇ.ಸಿದ್ದವೀರಪ್ಪ ನಿಂಗರಾಜೇಗೌಡ, ಬಿ.ಕೆ.ರಾಜೇಗೌಡ, ಆರ್.ದಿಲೀಪ್, ಪ್ರಕಾಶ್ ಹಾಗೂ ಅಭಿಷೇಕ್ ಕಾರ್ಯಾಚರಣೆ ನಡೆಸಿ, ಹೆದ್ದಾರಿ ಖದೀಮರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಗಾಂಜಾ ಸಾಗಿಸುತ್ತಿದ್ದ ವ್ಯಕ್ತಿ ಬಂಧನ

ಮೈಸೂರು, ಸೆ.14(ಎಸ್‌ಬಿಡಿ)– ಮೈಸೂರಿನ ಸಿಸಿಬಿ ಪೊಲೀಸರು ಗಾಂಜಾ ಸಾಗಿಸುತ್ತಿದ್ದ ವ್ಯಕ್ತಿಯನ್ನು ಬಂಧಿಸಿ, ಸುಮಾರು 35 ಸಾವಿರ ರೂ. ಮೌಲ್ಯದ ಗಾಂಜಾ ವಶಪಡಿಸಿಕೊಂಡಿದ್ದಾರೆ. ಮೈಸೂರಿನ ನಜರ್‌ಬಾದ್ ಹೈದರ್ ಅಲಿ ಮುಖ್ಯ ರಸ್ತೆಯಲ್ಲಿ ಸೆ.11ರಂದು ವ್ಯಕ್ತಿಯೊಬ್ಬ ದ್ವಿಚಕ್ರ ವಾಹನದಲ್ಲಿ ಗಾಂಜಾ ಸಾಗಿಸುತ್ತಿರುವ ಬಗ್ಗೆ ಖಚಿತ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಸಿಸಿಬಿ ಪೊಲೀಸರು ದಾಳಿ ನಡೆಸಿ, ಬಂಧಿಸಿದ್ದಾರೆ. ಆತನಿಂದ ದ್ವಿಚಕ್ರ ವಾಹನ ಹಾಗೂ 1 ಕೆಜಿ 167 ಗ್ರಾಂ ಗಾಂಜಾ ವಶಪಡಿಸಿಕೊಳ್ಳಲಾಗಿದೆ. ಈ ಬಗ್ಗೆ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡಿಸಿಪಿ ಎಸ್.ಜಾಹ್ನವಿ ಮಾರ್ಗದರ್ಶನ, ಸಿಸಿಬಿ ಎಸಿಪಿ ಎಸ್.ಎನ್.ಸಂದೇಶ್‌ಕುಮಾರ್ ನೇತೃತ್ವದಲ್ಲಿ ಸಿಸಿಬಿ ಇನ್ಸ್‌ಪೆಕ್ಟರ್ ಕೆ.ಸಿ.ಪೂವಯ್ಯ, ಸಬ್‌ಇನ್ಸ್‌ಪೆಕ್ಟರ್ ಮಾರುತಿ ಅಂತರಗಟ್ಟಿ, ಸಿಬ್ಬಂದಿ ರಾಮಸ್ವಾಮಿ, ಟಿ.ಪ್ರಕಾಶ್, ಎ.ಉಮಾಮಹೇಶ್, ಶಿವಣ್ಣ, ಮೋಹನಾರಾಧ್ಯ ಮತ್ತು ಗೋವಿಂದ ಕಾರ್ಯಾಚರಣೆ ನಡೆಸಿದ್ದಾರೆ.

ಮನೆಯ ಹಿಂದೆ ಬೆಳೆದ ಗಾಂಜಾ ವಶ; ಆರೋಪಿ ಪರಾರಿ

ಮೈಸೂರು, ಸೆ.14(ಎಸ್‌ಬಿಡಿ)– ವ್ಯಕ್ತಿಯೊಬ್ಬ ಮನೆ ಹಿಂಭಾಗ ಬೆಳೆದಿದ್ದ ಗಾಂಜಾ ಗಿಡಗಳನ್ನು ತಿ.ನರಸೀಪುರ ತಾಲೂಕು, ತಲಕಾಡು ಠಾಣೆ ಪೊಲೀಸರು ವಶಪಡಿಸಿಕೊಂಡಿದ್ದಾರೆ. ಕೊಳತ್ತೂರು ಗ್ರಾಮದ ಮಹದೇವ್ ತಮ್ಮ ಮನೆಯ ಹಿಂದೆ ಗಾಂಜಾ ಗಿಡ ಬೆಳೆದಿರುವ ಬಗ್ಗೆ ಮಾಹಿತಿ ತಿಳಿದ ಪೊಲೀಸರು, ಸೆ.13ರಂದು ದಾಳಿ ನಡೆಸಿ, ಹಲವು ಗಾಂಜಾ ಗಿಡ(ಸುಮಾರು 5 ಕೆಜಿ ಸೊಪ್ಪು)ಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ತಲಕಾಡು ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದು, ತಲೆಮರೆಸಿಕೊಂಡಿರುವ ಆರೋಪಿ ಪತ್ತೆಗೆ ಬಲೆ ಬೀಸಿದ್ದಾರೆ.

ಮೈಸೂರು ಮಿತ್ರ ಶುಕ್ರವಾರ 15 ಸೆಪ್ಟೆಂಬರ್ 2023

ಅಕ್ಷರ, ಅನ್ನ ನೀಡಿದವರನ್ನು ಎಂದಿಗೂ ಮರೆಯಬಾರದು

ಭಾರತೀ ಉತ್ಸವದಲ್ಲಿ ನಟ ದೊಡ್ಡಣ್ಣ



ಭಾರತೀನಗರ, ಸೆ.14– ಅಕ್ಷರ, ಅನ್ನ ನೀಡಿದವರನ್ನು ನಾವು ಎಂದಿಗೂ ಮರೆಯಬಾರದು ಎಂದು ನಟ ದೊಡ್ಡಣ್ಣ ತಿಳಿಸಿದರು.

ಇಲ್ಲಿನ ಭಾರತೀ ಎಜುಕೇಷನ್ ಟ್ರಸ್ಟ್‌ನಲ್ಲಿ ಆಯೋಜಿಸಿದ್ದ ಭಾರತೀ ಉತ್ಸವ–2023 ಅನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಕ್ಷರವಿಲ್ಲದೇ ಭವಿಷ್ಯ ರೂಪಿಸಿಕೊಳ್ಳಲಾಗದು. ಹಾಗೆಯೇ ಅನ್ನ ಇಲ್ಲದೇ ಬದುಕಲಾಗದು. ಹೀಗಾಗಿ ಅಕ್ಷರ ನೀಡಿದ ಗುರು, ಅನ್ನ ನೀಡಿದ ರೈತರು ಹಾಗೂ ಮನೆ ದೇವರನ್ನು ವರ್ಷಕ್ಕೆ ಒಮ್ಮೆಯಾದರೂ ಎಲ್ಲೆ ಇದ್ದರೂ ಪೂಜಿಸುವ ಸಂಸ್ಕಾರ ಬೆಳೆಸಿಕೊಳ್ಳಬೇಕು ಎಂದರು.

40 ವರ್ಷಗಳ ಹಿಂದೆ ಕುಗ್ರಾಮವಾಗಿದ್ದ ಕಾಳಮುದ್ದನ ದೊಡ್ಡಿ ಜಿ.ಮಾದೇಗೌಡರ ದೂರದೃಷ್ಟಿಯ ಫಲವಾಗಿ ಇಂದು ಭಾರತೀ ನಗರವಾಗಿ ಬೆಳೆದು ನಿಂತಿದೆ. ಜಿಲ್ಲೆಗೆ ದಿ.ಡಾ.ಜಿ.ಮಾದೇಗೌಡರ ಸೇವೆ ಅನನ್ಯ. ಕಾವೇರಿ ಚಳವಳಿಯ ಮೂಲಕ ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದ ಮಾದೇಗೌಡರ ಹಾದಿಯಲ್ಲೇ ಪುತ್ರ ಮಧು ಜಿ.ಮಾದೇಗೌಡ ಸಾಗುತ್ತಿದ್ದಾರೆ ಎಂದರು.

ಲಕ್ಷಾಂತರ ವಿದ್ಯಾರ್ಥಿಗಳಿಗೆ ಭಾರತಿ ವಿದ್ಯಾಸಂಸ್ಥೆ ವಿದ್ಯಾದಾನ ಮಾಡಿದೆ. ಮಧು ಜಿ.ಮಾದೇಗೌಡರು ಅವರ ತಂದೆಯಂತೆಯೇ ಸಂಸ್ಥೆಯನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಈ ಸಂಸ್ಥೆ ಮತ್ತಷ್ಟು ಅಭಿವೃದ್ಧಿ ಕಾಣಲಿ ಎಂದರು. ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿ, ವ್ಯಕ್ತಿಗೆ ಸಾವು ಬರಬಹುದು ಆದರೆ ಸಾಧನೆಗೆ ಸಾವಿಲ್ಲ ಎಂಬುದಕ್ಕೆ ಜಿ.ಮಾದೇಗೌಡರೇ ಸಾಕ್ಷಿ. ಜಿ.ಮಾದೇಗೌಡರು ಜಿಲ್ಲೆಗೆ ಮಾಣಿಕ್ಯವಿದ್ದಂತೆ. ಚರಿತ್ರೆಯಲ್ಲಿ ಕಾವೇರಿ ಹೋರಾಟಗಾರ ದಿ.ಜಿ.ಮಾದೇಗೌಡರ ಹೆಸರು ಅಚ್ಚಳಿಯದೆ ಉಳಿದಿದೆ ಎಂದರು.

13 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾರತೀ ವಿದ್ಯಾಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವುದು ಜಿಲ್ಲೆಗೆ ಹೆಮ್ಮೆ ತರುವ ವಿಚಾರ. ಹಾಗಾಗಿ ವಿದ್ಯಾರ್ಥಿಗಳು ಸಂಸ್ಕಾರ, ಸಂಸ್ಕೃತಿಗೆ ಹೆಚ್ಚು ಒತ್ತು ನೀಡಬೇಕೆಂದರು.

ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಅಧ್ಯಕ್ಷತೆ ವಹಿಸಿ ಮಾತನಾಡಿ, ನಮ್ಮ ತಂದೆ ಹಾದಿಯಲ್ಲೇ ಸಾಮಾಜಿಕ ಕಳಕಳಿ ಹೊಂದಿ ಸಂಸ್ಥೆಯನ್ನು ಅಭಿವೃದ್ಧಿಯತ್ತ ಕೊಂಡೊಯ್ಯುತ್ತೇನೆ. ಪಕ್ಷಾತೀತವಾಗಿ ಬಡವರ ಸೇವೆಗಾಗಿ ಶ್ರಮಿಸುತ್ತೇನೆ ಎಂದರು.

ಸಾಹಿತಿ ಹಾಗೂ ಚಿಂತಕ ಅಗ್ರಹಾರ ಕೃಷ್ಣಮೂರ್ತಿ ಮಾತನಾಡಿದರು. ವೇದಿಕೆಯಲ್ಲಿ ನಟಿ ರಚನಾ ಇಂಧರ್, ಭಾರತಿ ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಬಿ.ಎಂ.ನಂಜೇಗೌಡ, ಸಿದ್ದೇಗೌಡ, ಕೆ.ಬಿ.ಮಹದೇವಪ್ಪ ಟ್ರಸ್ಟಿಗಳಾದ ಪಾಪಣ್ಣ, ಎಸ್.ಬಸವೇಗೌಡ, ಎಸ್.ಜಯರಾಮು, ಮುದ್ದಯ್ಯ, ಡಾ.ಪಿ.ನಾಗೇಂದ್ರ, ಗ್ರಾಪಂ ಅಧ್ಯಕ್ಷೆ ಕೌಶಲ್ಯ, ಸಂಚಾಲಕರಾದ ರೇವಣ್ಣ, ಮಹದೇವಸ್ವಾಮಿ ಇದ್ದರು.

ತ.ನಾಡಿಗೆ ಮತ್ತೆ ನೀರು ಬಿಡುಗಡೆಗೆ ಆದೇಶ

ರೈತ ಹಿತರಕ್ಷಣಾ ಸಮಿತಿಯಿಂದ ರಸ್ತೆ ತಡೆ



ಮಂಡ್ಯ, ಸೆ.14– ಕೆಆರ್‌ಎಸ್‌ನಿಂದ ತಮಿಳುನಾಡಿಗೆ ಮತ್ತೆ 15 ದಿನ ನಿತ್ಯ 5 ಸಾವಿರ ಕ್ಯುಸೆಕ್ ನೀರು ಬಿಡುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಸೂಚನೆ ಹಾಗೂ ರಾಜ್ಯ ಸರ್ಕಾರ ಸರ್ವಪಕ್ಷಗಳ ಸಭೆಯಲ್ಲಿ ನೀರು ಬಿಡುವುದಿಲ್ಲ ಎಂಬ ದೃಢ ನಿರ್ಧಾರ ಕೈಗೊಳ್ಳಲು ವಿಫಲವಾಗಿರುವುದನ್ನು ಖಂಡಿಸಿ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನೇತೃತ್ವದಲ್ಲಿ ವಿವಿಧ ಸಂಘಟನೆಗಳು ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ನಗರದ ಸರ್‌ಎಂವಿ ಪ್ರತಿಮೆ ಎದುರು ಆರಂಭವಾಗಿರುವ ಧರಣಿಯಲ್ಲಿ ಭಾಗವಹಿಸಿದ ಪ್ರತಿಭಟನಾಕಾರರು, ಬೆಂಗಳೂರು–ಮೈಸೂರು ಹೆದ್ದಾರಿ ತಡೆದು ರಾಜ್ಯ ಸರ್ಕಾರದ ವಿರುದ್ಧ ಕಿಡಿಕಾರಿದರು. ಈ ವೇಳೆ ಕೆಲಕಾಲ ವಾಹನ ಸಂಚಾರ ಅಸ್ತವ್ಯಸ್ತವಾಯಿತು.

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ತಮಿಳುನಾಡಿಗೆ ಪ್ರತಿನಿತ್ಯ 5 ಸಾವಿರ ಕ್ಯುಸೆಕ್ ನೀರು ಬಿಡುಗಡೆ ಮಾಡಬೇಕು ಎಂದು ಸೂಚಿಸಿದೆ. ರಾಜ್ಯ ಸರ್ಕಾರ ಯಾವುದೇ ಕಾರಣಕ್ಕೂ ನೀರು ಬಿಡುವುದಿಲ್ಲ ಎಂದು ಹೋರಾಟಗಾರರಿಗೆ ಮಾತು ಕೊಟ್ಟಿತ್ತು. ಆದರೆ ಸರ್ವ ಪಕ್ಷ ಸಭೆಯಲ್ಲಿ ನೀರು ಬಿಡುವುದಿಲ್ಲ ಎಂದು ದೃಢ ನಿರ್ಧಾರ ಮಾಡುವ ಬದಲು ಕಾನೂನು ತಜ್ಞರ ಜೊತೆ ಮಾತುಕತೆ ನಡೆಸಿ ನೀರು ಬಿಡುವ ಕುರಿತು ತೀರ್ಮಾನ ಕೈಗೊಳ್ಳಲಾಗುವುದು ಎಂದು ಗೊಂದಲ ನಿರ್ಧಾರ ಕೈಗೊಂಡಿರುವುದು ಕಾವೇರಿ ಕೊಳ್ಳದ ರೈತರಿಗೆ ಮಾಡಿದ ದ್ರೋಹ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರದ ಇಂತಹ ನಿಲುವು ಗೊಂದಲವಾಗಿದ್ದು, ಸ್ಪಷ್ಟ ನಿರ್ಧಾರ ಮಾಡದಿರುವುದು ಅನುಮಾನ ಮೂಡಿಸಿದೆ. ಕೆಆರ್‌ಎಸ್‌ನಲ್ಲಿ ನೀರಿನ ಮಟ್ಟ 97 ಅಡಿಗೆ ಕುಸಿದಿದೆ. ಕುಡಿಯಲು ಸಹ ನೀರು ಸಾಕಾಗುವುದಿಲ್ಲ. ಇಂತಹ ಸಮಯದಲ್ಲಿ ನೀರು ಬಿಟ್ಟರೆ ರಾಜ್ಯ ಸರ್ಕಾರವೇ ಸಂಪೂರ್ಣ ಹೊಣೆ ಹೊರಬೇಕು. ಸುಪ್ರೀಂ ಕೋರ್ಟ್‌ನಲ್ಲಿ ಸೆ.21ರಂದು ನಡೆಯುವ ವಿಚಾರಣೆ ವೇಳೆ ಕಾವೇರಿ ಕೊಳ್ಳದ ಪ್ರದೇಶದಲ್ಲಿರುವ ಜಲಾಶಯಗಳ ವಾಸ್ತವ ಪರಿಸ್ಥಿತಿ ಕುರಿತು ಸಮರ್ಥ ವಾದ ಮಾಡುವ ಮೂಲಕ ರೈತರ ಕಾಪಾಡಲು ಮುಂದಾಗಬೇಕು ಎಂದು ಆಗ್ರಹಿಸಿದರು.

ಸಂಸದರು ಮತ್ತು ಶಾಸಕರು ಕಾವೇರಿ ವಿಚಾರದಲ್ಲಿ ರೈತಪರ ಹೋರಾಟಕ್ಕೆ ಇಳಿಯಬೇಕು. ರಾಜ್ಯ ಸರ್ಕಾರ ನೀರು ಬಿಡದಂತೆ ಒತ್ತಡ ಹಾಕಬೇಕು. ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ಸಂಕಷ್ಟ ಕಾಲದಲ್ಲಿ ರಾಜ್ಯದ ರೈತರ ಹಿತ ಕಾಪಾಡಲು ಮುಂದಾಗಬೇಕು. ಕುಡಿಯುವ ನೀರಿಗೆ ಕಾವೇರಿ ಕೊಳ್ಳದ ಜಲಾಶಯಗಳನ್ನು ಅವಲಂಬಿಸಿರುವ ಬೆಂಗಳೂರು ಮತ್ತು ಮೈಸೂರಿನ ಜನತೆ ಕಾವೇರಿ ಹೋರಾಟ ಬೆಂಬಲಿಸಿ ಪ್ರತಿಭಟನೆಗೆ ಮುಂದಾಗಬೇಕು. ಇಲ್ಲದಿದ್ದರೆ ಕುಡಿಯುವ ನೀರಿನ ಅಭಾವ ಸೃಷ್ಟಿಯಾಗುವುದರ ಜೊತೆಗೆ ಮುಂದಿನ ಪೀಳಿಗೆಗೆ ಕಾವೇರಿ ವಿಚಾರದಲ್ಲಿ ದೊಡ್ಡ ಅನ್ಯಾಯ ಮಾಡಿದಂತಾಗುತ್ತದೆ ಎಂದು ಎಚ್ಚರಿಸಿದರು.

ಈ ವೇಳೆ ರೈತ ಹಿತರಕ್ಷಣಾ ಸಮಿತಿ ಸುನಂದಾ ಜಯರಾಂ, ಕೆ.ಬೋರಯ್ಯ, ಮಾಜಿ ಶಾಸಕ ಕೆ.ಟಿ.ಶ್ರೀಕಂಠೇಗೌಡ, ರೈತ ಮುಖಂಡ ಚಂದ್ರಶೇಖರ್, ಮುದ್ದೇಗೌಡ, ಕೃಷ್ಣ, ಮೈಷುಗರ್ ಮಾಜಿ ಅಧ್ಯಕ್ಷ ಸಿದ್ದರಾಮೇಗೌಡ, ಕನ್ನಡ ಸೇನೆ ಮಂಜುನಾಥ್, ದಸಂಸ ಮುಖಂಡ ಎಂ.ವಿ.ಕೃಷ್ಣ ಮತ್ತಿತರರಿದ್ದರು.

ಬರ ಹಿನ್ನೆಲೆ: 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮುಂದೂಡಿಕೆ

ಮಂಡ್ಯ, ಸೆ.14– ರಾಜ್ಯದಲ್ಲಿ ಬರಗಾಲ ಹಾಗೂ 195 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಿರುವ ಹಿನ್ನೆಲೆಯಲ್ಲಿ ಈ ವರ್ಷದ ಅಂತ್ಯದಲ್ಲಿ ಮಂಡ್ಯದಲ್ಲಿ



ನಡೆಯಬೇಕಿದ್ದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ ಎಂದು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಮಹೇಶ್ ಜೋಶಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಲೆ, ಸಾಹಿತ್ಯ, ಸಂಸ್ಕೃತಿ ಮತ್ತು ಪರಂಪರೆ ಬಿಂಬಿಸುವ ಪಾರಂಪರಿಕ ಕನ್ನಡ ಜಾತ್ರೆಯನ್ನು ಮಂಡ್ಯದಲ್ಲಿ ವೈಭವದಿಂದ ಆಚರಿಸಬೇಕು. ಕನ್ನಡದ ಹಬ್ಬವನ್ನು ಸಮಸ್ತ ಕನ್ನಡಿಗರು ಸೇರಿದಂತೆ ಎಲ್ಲರೂ ಕಣ್ತುಂಬಿಕೊಳ್ಳಲು ದೇಶ, ವಿದೇಶಗಳಲ್ಲಿರುವ ಕನ್ನಡಿಗರನ್ನು ಪರಿಷತ್ತು ಆಹ್ವಾನಿಸುತ್ತಿದೆ. ಇಂತಹ ಸಂದರ್ಭದಲ್ಲಿ ರಾಜ್ಯದಲ್ಲಿ ಬರಗಾಲವಿದ್ದಾಗ ಅದ್ಧೂರಿತನಕ್ಕೆ ಅರ್ಥವಿಲ್ಲ ಎನ್ನುವ ಕಾರಣಕ್ಕೆ ಮಂಡ್ಯದಲ್ಲಿ ಹಮ್ಮಿಕೊಂಡಿದ್ದ 87ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನವನ್ನು ಮುಂದೂಡಲು ನಿರ್ಧರಿಸಲಾಗಿದೆ ಎಂದರು.

ಸರಳ ದಸರಾಕ್ಕೆ ಆಗ್ರಹ: ರಾಜ್ಯದಲ್ಲಿ ಬರ ಆವರಿಸಿರುವ ಕಾರಣ ಮೈಸೂರು ದಸರಾ ಸೇರಿದಂತೆ ಎಲ್ಲಾ ಉತ್ಸವಗಳನ್ನು ಸಾಂಕೇತಿಕವಾಗಿ ನಡೆಸಬೇಕು. ಉತ್ಸವಗಳು ಅದ್ಧೂರಿತನ ತೊರೆದು ಸರಳವಾಗಿ ಆಚರಿಸುವ ಮೂಲಕ ಅರ್ಥಪೂರ್ಣವಾಗಿ ಜನರ ನೋವಿಗೆ ಸ್ಪಂದಿಸುವಂತಿರಬೇಕು. ದುಂದು ವೆಚ್ಚಕ್ಕೆ ಕಡಿವಾಣ ಹಾಕಿ ಬರ ಪರಿಸ್ಥಿತಿಯನ್ನು ಸರ್ಕಾರ ಮತ್ತು ನಾಡಿನ ಜನತೆ ಸಮರ್ಥವಾಗಿ ಎದುರಿಸಬೇಕು ಎಂದರು.

ಡೇರಿಗೆ ಗುಣಮಟ್ಟದ ಹಾಲು ಪೂರೈಸಲು ಮನವಿ



ಕೆ.ಆರ್.ಪೇಟೆ, ಸೆ.14– ಉತ್ಪಾದಕರು ಡೈರಿಗೆ ಗುಣಮಟ್ಟದ ಹಾಲನ್ನು ಸರಬರಾಜು ಮಾಡುವ ಮೂಲಕ ಸಂಘದ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದು ಸಾರಂಗಿ ಡೈರಿ ಅಧ್ಯಕ್ಷ ರಾಮಚಂದ್ರು ಮನವಿ ಮಾಡಿದರು.

ತಾಲೂಕಿನ ಸಾರಂಗಿಯಲ್ಲಿ ನಡೆದ ಬಿಎಂಸಿ ಮತ್ತು ಹಾಲು ಉತ್ಪಾದಕರ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದರು.

ಮಾರ್ಗ ವಿಸ್ತರಣಾಧಿಕಾರಿ ಗುರುರಾಜ್ ಮಾತನಾಡಿ, ಸಾರಂಗಿ ಡೈರಿ ಈ ವರ್ಷ ಲಾಭದಲ್ಲಿದ್ದು, ಉತ್ಪಾದಕರು ಸಂಘಕ್ಕೆ ಗುಣಮಟ್ಟದ ಹಾಲು ಹಾಕುವ ಮೂಲಕ ಸಂಘದ ಹೆಚ್ಚಿನ ಅಭಿವೃದ್ಧಿಗೆ ಶ್ರಮಿಸಬೇಕು ಎಂದರು. ಇದೇ ವೇಳೆ ಸಂಘಕ್ಕೆ ಹೆಚ್ಚು ಹಾಲು ಸರಬರಾಜು ಮಾಡಿದ ಉತ್ಪಾದಕರಾದ ಪ್ರಸನ್ನ, ನಿರ್ದೇಶಕ ನಾಗರಾಜು, ಅವಿನಾಶ್ ಅವರಿಗೆ ಬಹುಮಾನ ವಿತರಿಸಲಾಯಿತು.

ಈ ವೇಳೆ ಮಾರ್ಗ ವಿಸ್ತರಣಾಧಿಕಾರಿ ಸಂಧ್ಯಾ, ಸಂಘದ ಉಪಾಧ್ಯಕ್ಷ ಜಿನ್ನಾ ಸಾಬ್, ನಿರ್ದೇಶಕರಾದ ಮಂಜೇಗೌಡ, ಪ್ರಕಾಶ್, ಯೋಗೇಶ್, ರಮೇಶ್, ಗವಿಯಯ್ಯ, ಶಾಲಿನಿ, ಮಂಜುಳ, ಅನಿತಾ, ಗ್ರಾಪಂ ಸದಸ್ಯ ಎನ್.ರಮೇಶ್, ಈಶಣ್ಣ, ಪಿಎಸಿಎಸ್ ಮಾಜಿ ಅಧ್ಯಕ್ಷ ರಾಜು, ನಿರ್ದೇಶಕ ಮನುಮೋಹನ್, ಡೇರಿ ಕಾರ್ಯದರ್ಶಿ ಬಸವರಾಜು, ಹಾಲು ಪರೀಕ್ಷಕ ರವಿ, ಸಹಾಯಕ ಶಂಕರ್ ಸೇರಿದಂತೆ ಇನ್ನಿತರರಿದ್ದರು.

ಒಕ್ಕೂಟದಿಂದ ಸಿಗುವ ಸವಲತ್ತು ಸದ್ಬಳಕೆ ಮಾಡಿಕೊಳ್ಳಿ



ಪಾಂಡವಪುರ, ಸೆ.14– ಹಾಲು ಉತ್ಪಾದಕರು ಒಕ್ಕೂಟದಿಂದ ಸಿಗುವ ಸವಲತ್ತುಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಮನ್‌ಮುಲ್ ನಿರ್ದೇಶಕ ಕಾಡೇನಹಳ್ಳಿ ರಾಮಚಂದ್ರು ತಿಳಿಸಿದರು.

ಪಟ್ಟಣದ ಮನ್‌ಮುಲ್ ಉಪಕಚೇರಿಯಲ್ಲಿ ನಡೆದ ರೈತ ಕಲ್ಯಾಣ ಟ್ರಸ್ಟ್, ಗುಂಪು ವಿಮೆ ಯೋಜನೆ ಫಲಾನುಭವಿಗಳಿಗೆ ಚೆಕ್ ವಿತರಿಸಿ ಮಾತನಾಡಿದ ಅವರು, ಮನ್‌ಮುಲ್ ರೈತರ ಆರ್ಥಿಕಾಭಿವೃದ್ಧಿಗಾಗಿ ಕೆಲಸ ಮಾಡುತ್ತಿದ್ದು, ಹಲವು ಸೌಲಭ್ಯಗಳನ್ನು ನೀಡುತ್ತಿದೆ. ಆದರೆ ಉತ್ಪಾದಕರಿಗೆ ಸವಲತ್ತುಗಳ ಬಗ್ಗೆ ಮಾಹಿತಿ ಕೊರತೆ ಇದೆ. ರೈತರು ಡೇರಿ ಕಾರ್ಯದರ್ಶಿಗಳ ಬಳಿ ಒಕ್ಕೂಟದಿಂದ ಸಿಗುವ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದು ಅವುಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಒಕ್ಕೂಟವು ರಾಸುಗಳಿಗೆ ವಿಮೆ ಹಾಗೂ ರೈತರಿಗೆ ಗುಂಪು ವಿಮಾ ಯೋಜನೆ ಜಾರಿಗೆ ತಂದಿದ್ದೇವೆ. ಉತ್ಪಾದಕ ರೈತರು ವರ್ಷಕ್ಕೆ 200 ರೂ. ಕಟ್ಟಿದರೆ ಆ ಕುಟುಂಬದಲ್ಲಿ ಅಕಾಲಿಕ ಮರಣ ಹೊಂದಿದರೆ ಅವರಿಗೆ 50 ಸಾವಿರ ರೂ. ವಿಮೆ ಹಣ ದೊರೆಯಲಿದೆ. ಆದರೆ, ರೈತರು ಗುಂಪು ವಿಮೆ ಮಾಡಿಸಲು ನಿರಾಸಕ್ತಿ ತೋರುತ್ತಿದ್ದಾರೆ. ಅದೇ ರೀತಿ ಕಡ್ಡಾಯವಾಗಿ ತಮ್ಮ ರಾಸುಗಳಿಗೂ ವಿಮೆ ಮಾಡಿಸಿ ಎಂದು ಸಲಹೆ ನೀಡಿದರು. ಇದೇ ವೇಳೆ ರೈತ ಕಲ್ಯಾಣ ಟ್ರಸ್ಟ್, ಗುಂಪು ವಿಮೆ ಯೋಜನೆ, ವಿವಿಧ ಡೇರಿಗಳಿಗೆ ಕಟ್ಟಡ ನಿಧಿ ಯೋಜನೆ ಸೇರಿದಂತೆ 5.20 ಲಕ್ಷ ಮೌಲ್ಯದ ಚೆಕ್ ವಿತರಿಸಲಾಯಿತು. ಸಭೆಯಲ್ಲಿ ಮನ್‌ಮುಲ್ ಉಪ ವ್ಯವಸ್ಥಾಪಕ ಆರ್.ಪ್ರಸಾದ್, ಸಹಾಯಕ ನಿರ್ದೇಶಕಿ ನಿವೇದಿತಾ, ಮಾರ್ಗ ವಿಸ್ತರಣಾಧಿಕಾರಿಗಳಾದ ನಿತಿನ್, ಅಭಿಲಾಷ್ ಸೇರಿದಂತೆ ಇತರರಿದ್ದರು.

ಸೆ.17, ವಿಶ್ವಕರ್ಮ ಮಹೋತ್ಸವ

ಮಂಡ್ಯ, ಸೆ.14– ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ನಗರಸಭೆ ಹಾಗೂ ಜಿಲ್ಲಾ ವಿಶ್ವಕರ್ಮ ಸಮಾಜದ ವಿವಿಧ ಸಂಘಟನೆಗಳ ಸಹಯೋಗದೊಂದಿಗೆ ಸೆ.17 ರಂದು ಬೆಳಗ್ಗೆ 11 ಗಂಟೆಗೆ ವಿಶ್ವಕರ್ಮ ಮಹೋತ್ಸವವನ್ನು ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಉದ್ಘಾಟಿಸಲಿದ್ದು, ಶಾಸಕ ಪಿ.ರವಿಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಅತಿಥಿಗಳಾಗಿ ಸಂಸದೆ ಸುಮಲತಾ, ಎಂಎಲ್‌ಸಿಗಳಾದ ಮರಿತಿಬ್ಬೇಗೌಡ, ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ ಹಾಗೂ ಶಾಸಕರಾದ ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಪಿ.ಎಂ.ನರೇಂದ್ರಸ್ವಾಮಿ, ದರ್ಶನ್ ಪುಟ್ಟಣ್ಣಯ್ಯ, ಹೆಚ್.ಟಿ.ಮಂಜು, ಕೆ.ಎಂ.ಉದಯ್ ಸೇರಿದಂತೆ ಇನ್ನಿತರ ಗಣ್ಯರು ಭಾಗವಹಿಸಲಿದ್ದಾರೆ.

ಒಂದನೇ ಪುಟದಿಂದ

ಮತ್ತೆ ನೀರು ಹರಿಸಲು ಸಾಧ್ಯವೇ ಇಲ್ಲ

ಹವಾಮಾನ ಮುನ್ಸೂಚನೆಯಂತೆ ಮಳೆಯಾಗುವ ಲಕ್ಷಣಗಳಿಲ್ಲ. ಮೆಟ್ಟೂರು ಜಲಾಶಯದಲ್ಲಿ 12.09.2023 ರಂದು 24.233 ಟಿಎಂಸಿ ನೀರು ಸಂಗ್ರಹವಿದ್ದು (live storage) ಪ್ರಸ್ತುತ ಬಿಡುಗಡೆಯಾಗಿರುವ ನೀರನ್ನು ಪರಿಗಣಿಸಿದರೆ, ತಮಿಳುನಾಡಿನ ಅವಶ್ಯಕತೆಯನ್ನು ಪೂರೈಸಲು ಸಾಕಾಗುವಷ್ಟು ನೀರು ಲಭ್ಯವಿದೆ.

ಕರ್ನಾಟಕದ ಬೆಳೆಗಳ ರಕ್ಷಣೆಗೆ 70 ಟಿಎಂಸಿ, ಕುಡಿಯುವ ನೀರಿಗೆ 33 ಹಾಗೂ ಕೈಗಾರಿಕೆಗಳಿಗೆ 3 ಟಿಎಂಸಿ ನೀರು ಅಗತ್ಯವಿದೆ. ನಮ್ಮ ಸಂಗ್ರಹ 53 ಟಿಎಂಸಿ ಮಾತ್ರವಿದ್ದು, ನಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸಹ ಈ ಪ್ರಮಾಣದ ಸಂಗ್ರಹ ಸಾಕಾಗುವುದಿಲ್ಲ ಎಂದು ಮುಖ್ಯಮಂತ್ರಿಗಳು ಪತ್ರದಲ್ಲಿ ತಿಳಿಸಿದ್ದಾರೆ.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾವೇರಿ ನೀರು ನಿಯಂತ್ರಣ ಸಮಿತಿ ಮುಂದೆ ಮನರ್ ಪರಿಶೀಲನಾ ಅರ್ಜಿ ಹಾಗೂ ಸುಪ್ರೀಂಕೋರ್ಟಿನಲ್ಲಿ ಅರ್ಜಿ ವಾಸ್ತವಾಂಶ ಮನವರಿಕೆ ಮಾಡಿಕೊಡಲು ಸರ್ಕಾರ ನಿರ್ಧರಿಸಿದೆ. ದೆಹಲಿಗೆ ತೆರಳಿರುವ ಜಲಸಂಪನ್ಮೂಲ ಖಾತೆ ಹೊಂದಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸುಪ್ರೀಂಕೋರ್ಟಿನಲ್ಲಿ ರಾಜ್ಯದ ಪರ ವಾದ ಮಾಡುವ ಕಾನೂನು ತಜ್ಞರೊಂದಿಗೆ ಸಮಾಲೋಚನೆ ಮಾಡಿದ್ದಾರೆ.

ಅವರಿಗೆ ಸರ್ಕಾರದ ತೀರ್ಮಾನ ತಿಳಿಸಿದ್ದು, ರಾಜ್ಯದ ಹಿತ ಕಾಪಾಡಲು ಕಾನೂನು ತಜ್ಞರು ನ್ಯಾಯಾಲಯದಲ್ಲಿ ವಾದ ಮಂಡಿಸಲಿದ್ದಾರೆ. ಕಾನೂನು ರೀತಿ ಸಾಧ್ಯವಿರುವ ಎಲ್ಲಾ ಹೋರಾಟಗಳನ್ನು ಸರ್ಕಾರ ಮಾಡಲಿದೆ ಎಂದರು.

ನಗರಾಭಿವೃದ್ಧಿ ಇಲಾಖೆ ಸೂಚನೆ

ಹರ್ಷವರ್ಧನ್, ವಿಷ್ಣುವರ್ಧನ್ ರೆಡ್ಡಿ, ಸಂಬಂಧಪಟ್ಟ ವಿಶೇಷ ತಹಶೀಲ್ದಾರ್‌ಗಳು ಹಾಗೂ ನೌಕರರು ಮಾಡಿಕೊಂಡಿದ್ದಾರೆಂದು ದೂರುದಾರರು ಆರೋಪಿಸಿರುವುದರಿಂದ ಪ್ರತಿಯೊಂದು ಆರೋಪದ ಸಂಬಂಧ ನಿಯಮಾನುಸಾರ ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ಸೂಕ್ತ ವರದಿ ನೀಡುವಂತೆ ಲತಾ, ಜಿಲ್ಲಾಧಿಕಾರಿಗಳಿಗೆ ಪತ್ರದಲ್ಲಿ ತಿಳಿಸಿದ್ದಾರೆ. ಮುಡಾದ ನಿವೃತ್ತ ನಗರ ಯೋಜನಾ ಸಹಾಯಕ ನಿರ್ದೇಶಕರೂ ಆದ ಪಿ.ಎಸ್. ನಟರಾಜ್, ಮುಡಾ ಭೂ ಸ್ವಾಧೀನಪಡಿಸದೇ ಬಳಸಿಕೊಂಡ ಪ್ರಕರಣಗಳಲ್ಲಿ ಪರಿಹಾರದ ಬದಲಾಗಿ ಅಭಿವೃದ್ಧಿಪಡಿಸಿದ ಒಟ್ಟು ವಿಸ್ತೀರ್ಣದ ಶೇ.50 ಜಾಗವನ್ನು ನೀಡಲು ಮುಡಾ ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ತಮ್ಮ ದೂರಿನಲ್ಲಿ ಆರೋಪಿಸಿದ್ದಾರೆ. ಭೂ ಮಾಲೀಕರು ರಿಯಲ್ ಎಸ್ಟೇಟ್ ಉದ್ಯಮಿಗಳೊಂದಿಗೆ ಒಳಒಪ್ಪಂದ ಮಾಡಿಕೊಂಡು ಈ ಹಿಂದೆ ಅಭಿವೃದ್ಧಿ ಪಡಿಸಿದ ಪ್ರತಿಷ್ಠಿತ ಬಡಾವಣೆಯ ಕೋಟ್ಯಾಂತರ ರೂ. ಬೆಲೆ ಬಾಳುವ ನಿವೇಶನಗಳನ್ನು ಪರಿಹಾರದ ರೂಪದಲ್ಲಿ ನೀಡಿ ಪ್ರಾಧಿಕಾರಕ್ಕೆ ನಷ್ಟ ಉಂಟುಮಾಡಿರುವುದಲ್ಲದೆ, ಕಿಕ್ ಬ್ಯಾಕ್ ಪಡೆದು ಬೇನಾಮಿ ಆಸ್ತಿ ಮಾಡಿಕೊಂಡಿದ್ದಾರೆ ಎಂದು ನಟರಾಜ್ ದೂರಿದ್ದಾರೆ. ತುಂಡು ಭೂಮಿ ಹಂಚಿಕೆ, ಭೂ ಪರಿಹಾರವಾಗಿ ನಿಯಮಗಳನ್ನು ಗಾಳಿಗೆ ತೂರಿ ನಿರ್ಣಯ ಕೈಗೊಂಡು ಬದಲಿಯಾಗಿ ಜಾಗ ನೀಡಿ ಪ್ರಾಧಿಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ. ಪ್ರಾಧಿಕಾರದಲ್ಲಿ ಅಕ್ರಮವೆಸಗಿ 1,000 ಕೋಟಿ ರೂ.ಗೂ ಹೆಚ್ಚು ನಷ್ಟ ಉಂಟು ಮಾಡಿ, ಬೇನಾಮಿ ಆಸ್ತಿ ಹಾಗೂ ಕೋಟ್ಯಾಂತರ ರೂ. ಲಾಭ ಮಾಡಿಕೊಂಡಿರುವ ಮಾಜಿ ಅಧ್ಯಕ್ಷರುಗಳಾದ ಹೆಚ್.ವಿ.ರಾಜೀವ್, ಯಶಸ್ವಿ ಎಸ್. ಸೋಮಶೇಖರ್, ಹಿಂದಿನ ಆಯುಕ್ತ ಡಿ.ಬಿ. ನಟೇಶ್, ಹಾಲಿ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಬೇಕೆಂದು ನಟರಾಜ್ ಕೋರಿದ್ದರು.

ಧರ್ಮವನ್ನು ನಾಶ ಮಾಡಲು 'ಇಂಡಿಯಾ' ಸಂಕಲ್ಪ

ಇವರು ನಿರ್ಧರಿಸಿದಂತೆ ಕಾಣುತ್ತಿದೆ.ಸನಾತನ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಕೊನೆಗೊಳಿಸಲು ಘಮಂಡಿಯಾ ಒಕ್ಕೂಟವು ಸಂಕಲ್ಪ ಮಾಡಿದಂತೆ ಕಾಣುತ್ತಿದೆ. ಮಹಾತ್ಮ ಗಾಂಧಿಯವರು ಸನಾತನ ಧರ್ಮ ತಮ್ಮ ಜೀವನಕ್ಕೆ ಅತ್ಯಗತ್ಯ ಎಂದು ಹೇಳಿದ್ದಾರೆ. ಅವರು ತಮ್ಮ ಜೀವನದುದ್ದಕ್ಕೂ ಶ್ರೀರಾಮನಿಂದ ಪ್ರೇರಣೆಗೊಂಡಿದ್ದರು. ಅವರ ಕೊನೆಯ ಮಾತುಗಳು "ಹೇ ರಾಮ್". ಸ್ವಾಮಿ ವಿವೇಕಾನಂದರು ಹಾಗೂ ಲೋಕಮಾನ್ಯ ತಿಲಕ್‌ರವರು ಸನಾತನ ಧರ್ಮದಿಂದ ಪ್ರೇರಿತರಾಗಿದ್ದರು. ಬ್ರಿಟಿಷರಿಂದ ಗಲ್ಲಿಗೇರಿಸಲ್ಪಟ್ಟ ಸ್ವಾತಂತ್ರ್ಯ ಹೋರಾಟಗಾರರು ಸಹ ಸನಾತನ ಧರ್ಮದಿಂದ ಪ್ರೇರಣೆಗೊಂಡು ಮತ್ತೊಮ್ಮೆ ಭಾರತಾಂಬೆ ಮಡಿಲಲ್ಲಿ ಹುಟ್ಟುವಂತೆ ತಮ್ಮ ಕೊನೆ ಆಸೆಯನ್ನು ಹೇಳುವಂತೆ ಪ್ರೇರೆಪಿಸಿದೆ. ಬರುವ ದಿನಗಳಲ್ಲಿ ಅವರು ಈ ರೀತಿಯ ಹೇಳಿಕೆಯನ್ನು ಹೆಚ್ಚಿಗೆ ನೀಡುತ್ತಾ ಹೋಗುತ್ತಾರೆ. ಈ ದೇಶವನ್ನು ಪ್ರೀತಿಸುವ ಪ್ರತಿಯೊಬ್ಬರು ಸಹ ಜಾಗೃತರಾಗಬೇಕು. ಅವರು ಸನಾತನ ಧರ್ಮವನ್ನು ನಿರ್ಮೂಲನೆ ಮಾಡುವ ಮೂಲಕ ದೇಶವನ್ನು ಸಾವಿರಾರು ವರ್ಷಗಳ ಹಿಂದಿನ ಗುಲಾಮಗಿರಿಗೆ ತಳ್ಳಲು ಸಿದ್ಧರಾಗಿದ್ದಾರೆ. ನಾವು ಇಂತಹ ದುಷ್ಟ ಶಕ್ತಿಗಳನ್ನು ಸಂಘಟನೆಯ ಬಲದ ಮೂಲಕ ತಡೆದು ನಿಲ್ಲಿಸಬೇಕಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ವಿಪಕ್ಷಗಳ ಮೈತ್ರಿಕೂಟ I.N.D.I.Aದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಇಂದು ಚರಕ ಜಯಂತಿ ಸಮಾರೋಪ

ಮೈಸೂರು,ಸೆ.14(ಪಿಎಂ)– ಮೈಸೂರಿನ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ವತಿಯಿಂದ ಸೆ.15ರಂದು 'ಆರಾಧನ' ಶೀರ್ಷಿಕೆಯ 'ಚರಕ ಜಯಂತಿ'ಯ ಸಮಾರೋಪ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಮಹಾವಿದ್ಯಾಲಯದ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಅಂದು ಬೆಳಗ್ಗೆ 11.30ಕ್ಕೆ ಕಾರ್ಯಕ್ರಮ ನಡೆಯಲಿದೆ. ಮುಖ್ಯ ಅತಿಥಿಯಾಗಿ ಜೆಎಸ್‌ಎಸ್ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆಯ ಪ್ರಾಧ್ಯಾಪಕ ಡಾ.ಬಿ.ಗುರು ಬಸವರಾಜು ಪಾಲ್ಗೊಳ್ಳಲಿದ್ದು, ಮಹಾ ವಿದ್ಯಾಲಯದ ಪ್ರಾಂಶುಪಾಲ ಡಾ.ಕೆ.ಎಸ್. ರಾಧಾಕೃಷ್ಣ ರಾಮರಾವ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಕಂಪ್ಯೂಟರ್ ಹ್ಯಾಕ್; ಪರಿಹರಿಸಲು ಹಣಕ್ಕೆ ಬೇಡಿಕೆ!

ಮೈಸೂರು, ಸೆ.14– ಮೈಸೂರಿನ ಕುವೆಂಪುನಗರದಲ್ಲಿ ಇರುವ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಕಂಪ್ಯೂಟರ್ ಹ್ಯಾಕ್ ಮಾಡಿರುವ ಹ್ಯಾಕರ್‌ಗಳು ಅದನ್ನು ಸರಿಪಡಿಸಲು ಹಣಕ್ಕೆ ಬೇಡಿಕೆ ಇಟ್ಟಿರುವ ಬಗ್ಗೆ ವರದಿಯಾಗಿದೆ.

ಆಯೋಗದ ಶೀಘ್ರಲಿಪಿಗಾರರು ಉಪಯೋಗಿಸುವ ಕಂಪ್ಯೂಟರ್‌ಗೆ ಸೆ.4ರಂದು ಬೆಳಗ್ಗೆ 10.02ರ ವೇಳೆಯಲ್ಲಿ RANSOMEWARE ವೈರಸ್ ದಾಳಿಯಾಗಿದ್ದು, ಇದರಿಂದಾಗಿ ಕಂಪ್ಯೂಟರ್‌ನಲ್ಲಿದ್ದ ಎಲ್ಲಾ ಫೈಲ್‌ಗಳೂ ಎನ್‌ಕ್ರಿಪ್ಟ್ ಆಗಿವೆ. ಅದನ್ನು ಡಿಕ್ರಿಪ್ಟ್ ಮಾಡಲು ಕೀ ಒದಗಿಸಲು 980 ಡಾಲರ್ ಆಗಲಿದ್ದು, 72 ಗಂಟೆಯಲ್ಲಿ support @ freshmail.top and datarestorehelp@aimail.cc ಗೆ ಸಂಪರ್ಕಿಸಿದ್ದಲ್ಲಿ ಶೇ.50ರಷ್ಟು ರಿಯಾಯಿತಿಯಲ್ಲಿ 490 ಡಾಲರ್‌ಗೆ ಡಿಕ್ರಿಪ್ಟ್ ಕೀ ಒದಗಿಸುತ್ತೇವೆ ಎಂಬ ಸಂದೇಶವನ್ನು ಫೈಲ್‌ಗಳ ಜೊತೆ ಹ್ಯಾಕರ್‌ಗಳು ರವಾನಿಸಿದ್ದಾರೆ. ಈ ಸಂಬಂಧ ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ಅಧಿಕಾರಿ ಹೆಚ್.ಎಸ್.ವಿಜಯಕುಮಾರ್ ಅವರು ಸೆನ್ ಠಾಣೆಗೆ ಸೆ.11ರಂದು ದೂರು ಸಲ್ಲಿಸಿದ್ದಾರೆ.

ನಾಳೆ ವಿದ್ಯುತ್ ವ್ಯತ್ಯಯ

ಮೈಸೂರು, ಸೆ.14– ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿ ಕಾಮಗಾರಿ ನಿಮಿತ್ತ ಸೆ.16 ರಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಶ್ರೀರಾಂಪುರ 2ನೇ ಹಂತ, ರಮಾಭಾಯಿನಗರ, ಮಹದೇವಪುರ, ಜಯನಗರ 1 ರಿಂದ 20ನೇ ಕ್ರಾಸ್, ಪರಸಯ್ಯನಹುಂಡಿ, ಶಿವಪುರ, ಕುವೆಂಪುನಗರ ಕೆ ಬ್ಲಾಕ್, ಅಪೋಲೊ ಆಸ್ಪತ್ರೆಯ ಸುತ್ತಮುತ್ತಲಿನ ಪ್ರದೇಶಗಳು. ಚಿಕ್ಕಹರದನಹಳ್ಳಿ, ಗೊರೂರು ಗ್ರಾಮ, ಕಳಲವಾಡಿ, ಕೋಟೆಹುಂಡಿ, ಯಡಹಳ್ಳಿ, ರಾಯನಕೆರೆ, ಸುಸ್ವಾಶಿಪುರ 1 ನೇ ಮುಖ್ಯ ರಸ್ತೆಯಿಂದ 6 ನೇ ಮುಖ್ಯ ರಸ್ತೆ, ಭಾಗಶಃ ಕೆ.ಜಿ.ಕೊಪ್ಪಲು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.



ಮೈಸೂರು ಚಾಮರಾಜ ಕ್ಷೇತ್ರದ ಮಾಜಿ ಶಾಸಕ ಎಲ್. ನಾಗೇಂದ್ರ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಕೆಜಿ ಕೊಪ್ಪಲು ಗ್ರಾಮದ ಮುಖಂಡರಾದ ಬಿಸಿಲು ಮಾರಮ್ಮ ದೇವಸ್ಥಾನದ ಗುಡ್ಡಪ್ಪ ಲೇಟ್ ದೇವೇಗೌಡರ ಮಗ ಡಿ. ಲಿಂಗಪ್ಪ, ಅವರ ಸ್ನೇಹಿತರಾದ ಎಲ್. ಚುಂದ್ರು, ನಾರಾಯಣಸ್ವಾಮಿ, ದಾಸನಕೊಪ್ಪಲು ಶೇಖರ್, ಬೋರಪ್ಪ, ಹರ್ಷ, ಶಿವಪ್ಪ, ವಸಂತ್ ಕುಮಾರ್, ಜವರೇಗೌಡ, ನಿಂಗಪ್ಪನವರ ಅಭಿಮಾನಿಗಳು ಅಭಿನಂದಿಸಿ ಶುಭಾಶಯ ಕೋರಿದರು.

ಮಣ್ಣಿನ ಗಣೇಶ ಮೂರ್ತಿ ತಯಾರಿಕಾ ಕಾರ್ಯಾಗಾರ



ಮೈಸೂರು, ಸೆ.14(ಪಿಎಂ)– ನಮ್ಮ ರೂಪನಗರ ರೆಸಿಡೆಂಟ್ಸ್ ವೆಲ್ಫೇರ್ ಅಸೋಸಿಯೇಷನ್ ವತಿಯಿಂದ ಇತ್ತೀಚೆಗೆ ಗಣೇಶನ ಮಣ್ಣಿನ ಮೂರ್ತಿ ತಯಾರಿಸುವ ಕಾರ್ಯಾಗಾರ ನಡೆಯಿತು. ಮೈಸೂರಿನ ದೀಪಾ ಕಾಂಪೋಸಿಟ್ ಪಿಯು ಕಾಲೇಜು ಆವರಣದಲ್ಲಿ 3 ಗಂಟೆ ಕಾಲ ಪರಿಸರ ಸ್ನೇಹಿ ಮಣ್ಣಿನ ಮೂರ್ತಿ ಸಿದ್ಧಪಡಿಸುವ ಕಾರ್ಯಾಗಾರ ನಡೆಯಿತು. ಹಿರಿಯರು ಹಾಗೂ ಕಿರಿಯರು ಸೇರಿದಂತೆ ಒಟ್ಟು 35 ಮಂದಿ ಪಾಲ್ಗೊಂಡಿದ್ದರು. ಶಿಲ್ಪ ಕಲಾವಿದ ಖಾಜು ಗುತ್ತಲ್ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು ಎಂದು ಪ್ರಕಟಣೆ ತಿಳಿಸಿದೆ.

ಜಮೀನಲ್ಲಿ ಬೀಡು ಬಿಟ್ಟ ಕಾಡಾನೆಗಳು

ಮೈಸೂರು–ಮಾನಂದವಾಡಿ ರಸ್ತೆ ಬಂದ್ ಮಾಡಿ ಆನೆಗಳನ್ನು ಕಾಡಿಗಟ್ಟಲು ಹರಸಾಹಸ

ಹೆಚ್.ಡಿ.ಕೋಟೆ, ಸೆ.14– ಕಾಡಿನಿಂದ ನಾಡಿಗೆ ಬಂದಿರುವ ಎರಡು ಕಾಡಾನೆಗಳು ತಾಲೂಕಿನ ಮಾದಾಪುರ ಸಮೀಪದ ರೈತರ ಜಮೀನಿನಲ್ಲಿ ಬೀಡು ಬಿಟ್ಟಿದ್ದು, ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿಸಿದೆ.

ಆನೆಗಳನ್ನು ಕಾಡಿಗೆ ಅಟ್ಟುವ ಪ್ರಯತ್ನದ ಭಾಗವಾಗಿ ಮೈಸೂರು–ಮಾನಂದವಾಡಿ ರಾಜ್ಯ ಹೆದ್ದಾರಿಯನ್ನು ಕೆಲವು ಗಂಟೆಗಳ ಕಾಲ ಬಂದ್ ಮಾಡಿ ಅರಣ್ಯ ಇಲಾಖೆಯ ಅಧಿಕಾರಿಗಳು ಪ್ರಯತ್ನ ಪಟ್ಟರಾದರೂ ಸಹ ಆನೆಗಳು ರಸ್ತೆಯನ್ನು ದಾಟದೆ ಜಮೀನಿನಲ್ಲಿಯೇ ಉಳಿದು ಬಿಟ್ಟವು. ತಡ ರಾತ್ರಿಯವರೆಗೂ ಆನೆಗಳನ್ನು ಕಾಡಿಗೆ ಓಡಿಸಲು ಅರಣ್ಯ ಇಲಾಖೆಯ ಅಧಿಕಾರಿಗಳು ಹರಸಾಹಸ ಪಟ್ಟರೂ ಸಾಧ್ಯವಾಗಿಲ್ಲ.

ಆನೆಗಳು ಕಾಡಿನಿಂದ ಗ್ರಾಮಗಳತ್ತ ಬಂದಿರುವ ಬಗ್ಗೆ ಇಂದು ಬೆಳಗ್ಗೆ ಮಾಹಿತಿ ಲಭಿಸಿತು. ಆನೆಗಳನ್ನು ಕಾಡಿಗೆ ಅಟ್ಟಲು ನಿರಂತರವಾಗಿ ಇಲಾಖೆ ಎಲ್ಲಾ ರೀತಿ ಕ್ರಮ ಕೈಗೊಂಡಿದೆ. ಬೆಳಗ್ಗೆಯಿಂದಲೇ ಆನೆಗಳನ್ನು ಕಾಡಿಗೆ ಸೇರಿಸಲು, ಪ್ರಯತ್ನ ಪಡುತ್ತಿದ್ದೇವೆ ಎಂದು ಹೆಚ್.ಡಿ. ಕೋಟೆ ಸಾಮಾಜಿಕ ಅರಣ್ಯ ವಲಯ ಅಧಿಕಾರಿ ಪೂಜಾ ತಿಳಿಸಿದ್ದಾರೆ.

ಗುರುವಾರ ಬೆಳಗ್ಗೆ ಆನೆಗಳು, ಚಿಕ್ಕಕೆರೆಯೂರು ಗ್ರಾಮದ ಸಮೀಪ ಪೈಲ್ವಾನ್ ಕಾಲೋನಿಯಲ್ಲಿ ಕಾಣಿಸಿಕೊಂಡು ಸಂಜೆ ಆಗುತ್ತಿದ್ದಂತೆ ಮೈಸೂರು–ಮಾನಂದವಾಡಿ ಮುಖ್ಯ ರಸ್ತೆಯ ಮಾದಾಪುರ ಹಾಗೂ ಹೈರಿಗೆ ಗ್ರಾಮಗಳ ಬಳಿ ರಾತ್ರಿ 7ರ ಸಮಯದಲ್ಲಿ ಆನೆಗಳು ರಸ್ತೆ ದಾಟುತ್ತಿದ್ದ ದೃಶ್ಯಗಳು ಕಂಡು ಬಂದಿತು. ಆನೆಗಳು ಗಾಬರಿಗೊಂಡು ಮಾದಾಪುರ ಸಮೀಪ ಜಮೀನಿನಲ್ಲಿ ಬೀಡು ಬಿಟ್ಟಿದೆ ಎಂದು ತಿಳಿದು ಬಂದ ಆದ ಕಾರಣ ರಸ್ತೆ ಸಂಚಾರಕ್ಕೆ ಪೊಲೀಸರು, ಅನುವು ಮಾಡಿಕೊಟ್ಟರು.

ಅನೈರ್ಮಲ್ಯವಿದ್ದ ಸ್ಥಳವೀಗ ಸ್ವಚ್ಛತೆಯಿಂದ ಕೂಡಿದ ಮಕ್ಕಳ ಆಟದ ತಾಣ

ಮೈಸೂರು, ಸೆ.14(ಪಿಎಂ)– ಚಾಮುಂಡಿಪುರಂನಲ್ಲಿ ನಿತ್ಯ ಅನೈರ್ಮಲ್ಯದಿಂದ ಕೂಡಿರುತ್ತಿದ್ದ ಸ್ಥಳವೊಂದು ಇಲ್ಲಿನ ಪಾಲಿಕೆ ಸದಸ್ಯರ ಕಾಳಜಿಯಿಂದ ಸ್ವಚ್ಛತೆಯಿಂದ ಕೂಡಿದ ಮಕ್ಕಳ ಆಟದ ತಾಣವಾಗಿ ಪರಿವರ್ತನೆ ಕಂಡಿದೆ.

ಮೈಸೂರು ಮಹಾನಗರ ಪಾಲಿಕೆ ವಾರ್ಡ್ 55ರ ವ್ಯಾಪ್ತಿಯ ಸೆಂಟ್ ಮೇರಿಸ್ ಶಾಲೆ ಹಿಂಭಾಗದ ಸ್ಥಳವೊಂದರಲ್ಲಿ ಪ್ರತಿನಿತ್ಯ ನಾಗರಿಕರು ಕಸ ತಂದು ಹಾಕುತ್ತಿದ್ದರು. ಇದರಿಂದ ಸದರಿ ಸ್ಥಳವು ಅನೈರ್ಮಲ್ಯದ ತಾಣವಾಗಿತ್ತು. ಇದನ್ನು ತಡೆಗಟ್ಟಲು ವಾರ್ಡ್‌ನ ಪಾಲಿಕೆ ಸದಸ್ಯ ಹಾಗೂ



ಪಾಲಿಕೆ ಆಡಳಿತ ಪಕ್ಷದ ನಾಯಕ ಮ.ವಿ.ರಾಮ್‌ಪ್ರಸಾದ್ ಮಾಡಿದ ಪ್ರಯತ್ನ ಸಫಲವಾಗಿದೆ.

ಇದೀಗ ಸದರಿ ಸ್ಥಳ ಸ್ವಚ್ಛತೆಯಿಂದ ಕೂಡಿದ್ದು, ಇಲ್ಲಿ ಮಕ್ಕಳ ಆಟಿಕೆಗಳನ್ನು ಅಳವಡಿಸಲಾಗಿದೆ. ಶಾಸಕ ಟಿ.ಎಸ್. ಶ್ರೀವತ್ಸ ತಮ್ಮ ಪಾದಯಾತ್ರೆ ಸಂದರ್ಭದಲ್ಲಿ ಈ ಬದಲಾವಣೆ ಕಂಡು ಮ.ವಿ.ರಾಮ್‌ಪ್ರಸಾದ್ ಅವರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮ.ವಿ.ರಾಮ್‌ಪ್ರಸಾದ್, ವಕೀಲ ಶಿವರಾಜ್, ಮುಖಂಡರಾದ ಪುರುಷೋತ್ತಮ್, ಸಂದೀಪ್, ಧರ್ಮರಾಜ್, ಉಮಾಶಂಕರ್, ಆನಂದ್ ಮತ್ತಿತರರು ಹಾಜರಿದ್ದರು.

ಮೈಸೂರು ಮಿತ್ರ
ಶುಕ್ರವಾರ 15 ಸೆಪ್ಟೆಂಬರ್ 2023



ಮೈಸೂರು ದಸರಾ ಉದ್ಘಾಟನೆ ಮಾಡಲಿರುವ ಸಂಗೀತ ಮಹಾಗುರು ಡಾ. ಹಂಸಲೇಖ ಅವರನ್ನು ಕಸಾಪ ವತಿಯಿಂದ ಸನ್ಮಾನಿಸಲಾಯಿತು. ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕಾರ್ಯದರ್ಶಿ ಮ.ನ.ಲತಾಮೋಹನ್, ಚೀಲೂರು ಚಂದ್ರಶೇಖರ್, ರಂಗನಾಥ್, ಗಂಗೂಬಾಯಿ ಹಾನಗಲ್‌ನ ಕುಲಪತಿ ಡಾ. ನಾಗೇಶ್ ವಿ ಬೆಟ್ಟಕೋಟೆ, ವಯೋಲಿನ್ ವಿದ್ವಾಂಸರಾದ ಡಾ. ಸುಬ್ರಮಣ್ಯಂ, ವಿಶ್ರಾಂತ ಕುಲಪತಿ ಪ್ರೊ ಹಿ.ಚಿ ಬೋರಲಿಂಗಯ್ಯ, ವಿಶ್ರಾಂತ ನಿರ್ದೇಶಕ ಪ್ರೊ ಬಾಲಸುಬ್ರಹ್ಮಣ್ಯಂ, ನಿರ್ದೇಶಕ ಬಿ.ಸುರೇಶ್, ಪ್ರಾಧ್ಯಾಪಕರಾದ ನಾರಾಯಣಸ್ವಾಮಿ, ಪ್ರಾಚಾರ್ಯ ಶ್ರೀಧರ್, ಖ್ಯಾತ ನೃತ್ಯ ನಿರ್ದೇಶಕ ಸೈಯದ್ ಸಲ್ಲಾವುದ್ದೀನ್ ಪಾಷ, ಮೋಹನ್ ಮತ್ತಿತರರಿದ್ದಾರೆ.

ಕೊಡಗು ಗೌಡ ಸಮಾಜದ ವತಿಯಿಂದ ಸೆ.17ರಂದು 'ಕೈಲ್ ಮುಹೂರ್ತ'

ಮೈಸೂರು, ಸೆ.14– ಮೈಸೂರಿನ ಕೊಡಗು ಗೌಡ ಸಮಾಜದ ವತಿಯಿಂದ ಸೆ.17ರಂದು 'ಕೈಲ್ ಮುಹೂರ್ತ' ಆಚರಿಸಲಾಗುತ್ತಿದೆ. ಇಲ್ಲಿನ ವಿಜಯನಗರ 2ನೇ ಹಂತದಲ್ಲಿರುವ ಕೊಡಗು ಗೌಡ ಸಮಾಜದ ಸಭಾ ಭವನದಲ್ಲಿ ಅಂದು ಬೆಳಗ್ಗೆ 9.30ಕ್ಕೆ ಸಾಂಪ್ರದಾಯಿಕ ಆಯುಧಪೂಜೆ ನೆರವೇರಿಸಿದ ನಂತರ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳು ಹಾಗೂ ವಿವಿಧ ಕ್ಷೇತ್ರಗಳ ಸಾಧಕರನ್ನು ಇದೇ ವೇಳೆ ಅಭಿನಂದಿಸಲಾಗುತ್ತದೆ. ಜೊತೆಗೆ ಹಬ್ಬದ ಪ್ರಯುಕ್ತ ನಡೆಸಲಾದ ಕ್ರೀಡಾಕೂಟದಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಗುವುದು.

ಸಮಾಜದ ಅಧ್ಯಕ್ಷ ತೋಟಂಬೈಲಯ ಈ.ಮನೋಹರ್ ಅಧ್ಯಕ್ಷತೆಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಮಡಿಕೇರಿಯ ಕೊಡಗು ಗೌಡ ವಿದ್ಯಾ ಸಂಘದ ಅಧ್ಯಕ್ಷ ಅಂಬೆಕಲ್ಲು ನವೀನ್ ಕುಶಾಲಪ್ಪ, ಸಂಸದ ಪ್ರತಾಪ್ ಸಿಂಹ, ಶಾಸಕ ಕೆ.ಹರೀಶ್ ಗೌಡ, ಮಾಜಿ ಶಾಸಕರಾದ ವಾಸು, ಎಲ್. ನಾಗೇಂದ್ರ, ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್ ಮತ್ತಿತರ ಗಣ್ಯರು ಭಾಗವಹಿಸಲಿದ್ದಾರೆ ಎಂದು ಸಮಾಜದ ಗೌರವ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಅಮವಾಸ್ಯೆ ಹಿನ್ನೆಲೆಯಲ್ಲಿ ಗುರುವಾರ ಅರಮನೆ ಆವರಣದಲ್ಲೇ ದಸರಾ ಗಜಪಡೆ ತಾಲೀಮು ನಡೆಸಲಾಯಿತು.

ಜಿಲ್ಲಾ, ರಾಜ್ಯಮಟ್ಟದ ಬಾಪೂಜಿ ಪ್ರಬಂಧ ಸ್ಪರ್ಧೆ

ಮೈಸೂರು, ಸೆ.14– ಮಹಾತ್ಮ ಗಾಂಧಿ 154ನೇ ಜಯಂತಿ ಆಚರಣೆ ಅಂಗವಾಗಿ ಬಾಪೂಜಿ ಬದುಕು, ಸ್ವಾತಂತ್ರ್ಯ ಚಳವಳಿ, ಸರಳತೆ, ಅಹಿಂಸಾ ಮಾರ್ಗ, ಸಹಬಾಳ್ವೆ, ಅಸ್ಪೃಶ್ಯತೆ ನಿವಾರಣೆಗಾಗಿ ನಡೆಸಿದ ಪ್ರಯೋಗಗಳ ಅರಿವು ಮೂಡಿಸಲು ಪ್ರೌಢಶಾಲೆ, ಪದವಿ ಪೂರ್ವ ಶಿಕ್ಷಣ ಹಾಗೂ ಸ್ನಾತಕೋತ್ತರ ಪದವಿಗಳ ಹಂತದ ವಿದ್ಯಾರ್ಥಿಗಳಿಗೆ ಬಾಪೂಜಿ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಸೆ.26 ರೊಳಗೆ ಪ್ರಬಂಧ ಬರಹವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಚೇರಿಗೆ ತಲುಪಿಸಬೇಕು. ವಿಜೇತರಿಗೆ ಮೂರು ವಿಭಾಗಗಳಲ್ಲಿ ಬಹುಮಾನ ನೀಡಲಾಗುತ್ತದೆ. ಪ್ರಬಂಧದ ವಿಷಯಗಳು ಹಾಗೂ ಮಾಹಿತಿಗಾಗಿ ಉಪನಿರ್ದೇಶಕರ ದೂ.9480841229 ಅನ್ನು ಸಂಪರ್ಕಿಸಬಹುದು.



ಮೈಸೂರಿನ ಅನಂತಗೀತ ವಿದ್ಯಾಲಯದಲ್ಲಿ ರಾಷ್ಟ್ರೀಯ ಆಡಳಿತ ಭಾಷೆ "ಹಿಂದಿ ದಿವಸ್" ಆಚರಣೆ ಅಂಗವಾಗಿ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು ಹಾಗೂ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಈ ವೇಳೆ ಸಂಸ್ಥೆಯ ಪ್ರಾಂಶುಪಾಲ ಶ್ರೀಕಾಂತ್ ಅಮರನಾಥ್, ಉಪ ಪ್ರಾಂಶುಪಾಲ ಹರದೂರು ಲೋಕೇಶ್ ಹಾಗೂ ಹಿಂದಿ ಭಾಷಾ ವಿಭಾಗದ ಮುಖ್ಯಸ್ಥರಾದ ಜಮುನಾ, ಶಿಕ್ಷಕರಾದ ರೂಪಶ್ರೀ, ವಿನುತಾ ಹಾಜರಿದ್ದರು.

ರ‍್ಯಾಗಿಂಗ್ ವಿರುದ್ಧ ಕ್ರಮಕ್ಕೆ ಪ್ರಬಲ ಕಾನೂನಿದೆ ; ಮೈಸೂರು ಎಸ್‌ಪಿ ಸೀಮಾ ಲಾಟ್ಕರ್

ಎಫ್‌ಐಆರ್ ಇಲ್ಲದೇ ರೌಡಿಶೀಟ್ ಕೂಡ ತೆರೆಯಬಹುದು



ಮೈಸೂರು,ಸೆ.14(ಪಿಎಂ)– ರ‍್ಯಾಗಿಂಗ್ ಸಣ್ಣ ವಿಷಯವಲ್ಲ. ಇದರ ವಿರುದ್ಧ ಕ್ರಮ ಕೈಗೊಳ್ಳಲು ಈಗ ಪ್ರಬಲ ಕಾನೂನು ಇದೆ ಎಂದು ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ತಿಳಿಸಿದರು.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕು ಬೆಳಗೊಳದಲ್ಲಿರುವ ದಿ ಪಾಲ್ ಕಾಲೇಜು ಸಭಾಂಗಣದಲ್ಲಿ ಕಾಲೇಜು ಮತ್ತು ರೆಡ್ ಎಫ್‌ಎಂ ಜಂಟಿ ಆಶ್ರಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ ವಿಚಾರ ಗೋಷ್ಠಿಯಲ್ಲಿ 'ರ‍್ಯಾಗಿಂಗ್ ಮತ್ತು ಲೈಂಗಿಕ ಕಿರುಕುಳದ ವಿರುದ್ಧ ಕಾನೂನು ಕ್ರಮಗಳು' ಕುರಿತು ಮಾತನಾಡಿದರು.

ಕಳೆದ 10 ವರ್ಷಗಳ ಹಿಂದೆ ರ‍್ಯಾಗಿಂಗ್ ಅನ್ನು ಲಘುವಾಗಿ ತೆಗೆದುಕೊಂಡ ಹಿನ್ನೆಲೆಯಲ್ಲಿ ಅದರು ದುಷ್ಪರಿಣಾಮ ವ್ಯಾಪಕವಾಯಿತು. ರ‍್ಯಾಗಿಂಗ್‌ಗೆ ಒಳಗಾದ ಪ್ರಕರಣಗಳು ಗಂಭೀರ ಸ್ವರೂಪ ಪಡೆಯಲು ಪ್ರಾರಂಭವಾದವು. ಅಲ್ಲದೆ, ಆತ್ಮಹತ್ಯೆ ಮಾಡಿಕೊಳ್ಳುವಷ್ಟು ಗಂಭೀರತೆ ಪಡೆದ ಹಿನ್ನೆಲೆಯಲ್ಲಿ ಕಟ್ಟುನಿಟ್ಟಿನ ಕಾನೂನು ರೂಪಿಸಬೇಕೆಂಬ ಚರ್ಚೆಗಳು ಆರಂಭವಾದವು ಎಂದು ಹೇಳಿದರು.

ರ‍್ಯಾಗಿಂಗ್‌ನಿಂದ ಬಾಧಿತರಾದವರು ಅದನ್ನು ಯಾವ ರೀತಿಯಲ್ಲಿ ತೆಗೆದುಕೊಳ್ಳುತ್ತಾರೆ ಎಂಬುದರ ಮೇಲೆ ಎಲ್ಲವೂ ಅವಲಂಭಿತವಾಗಿರುತ್ತದೆ. ಅದು ಸಂತ್ರಸ್ತರಲ್ಲಿ ಮಾನಸಿಕ ಹಾಗೂ ದೈಹಿಕವಾಗಿ ದುಷ್ಪರಿಣಾಮ ಉಂಟು ಮಾಡಬಹುದು. ಆರಂಭದಲ್ಲಿ ರ‍್ಯಾಗಿಂಗ್‌ಗೆ ಯಾವುದೇ ನಿರ್ದಿಷ್ಟ ಕಾನೂನು ಇರಲಿಲ್ಲ. ಹಾಗಾಗಿ ಐಪಿಸಿ ಸೆಕ್ಷನ್ 323ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗುತ್ತಿತ್ತು. ಆದರೆ ಈಗ ಅದಕ್ಕೆ ಪ್ರತ್ಯೇಕ ಕಾಯ್ದೆ ಜಾರಿಯಾಗಿದೆ ಎಂದರು.

ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಮಹಿಳಾ ಕಿರುಕುಳ ವಿರೋಧಿ ಸೆಲ್ ಕಡ್ಡಾಯವಾಗಿ ಇರಬೇಕು. ಇಂದು ಎಫ್‌ಐಆರ್ ದಾಖಲಿಸದೆ ಕೂಡ ಕ್ರಮ ಕೈಗೊಳ್ಳಲು ಕಾನೂನು ಮತ್ತು ನಿಯಮಗಳಿವೆ. ಹಾಗಾಗಿ ಯಾರೂ ಯಾವುದರಿಂದಲೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಎಫ್‌ಐಆರ್ ಇಲ್ಲದೇ ರೌಡಿಶೀಟ್ ಕೂಡ ತೆರೆಯಬಹುದು ಎಂದು ತಿಳಿಸಿದರು.

ಪ್ರತಿಯೊಬ್ಬರು ತಮ್ಮದೇ ಆದ ವಿಶೇಷತೆ ಹೊಂದಿರುತ್ತಾರೆ. ನಿಮ್ಮ ಉತ್ತಮ ಆಲೋಚನೆ ಹಾಗೂ ನಡವಳಿಕೆ ನಿಮ್ಮನ್ನು ಉನ್ನತ ಮಾರ್ಗದೆಡೆಗೆ ಸಾಗಿಸುತ್ತದೆ. ನಿಮ್ಮ ಕನಸುಗಳನ್ನು ನನಸಾಗಿಸಲು ಶ್ರಮಿಸಬೇಕು. ಸರಿ–ತಪ್ಪುಗಳನ್ನು ತಿಳಿದು ಸರಿ ದಾರಿಯಲ್ಲಿ ಮುನ್ನಡೆಯಬೇಕು. ನಿಮ್ಮ ಬೆಳವಣಿಗೆಗೆ ಪರಿಶ್ರಮ ವಹಿಸುವ ಜೊತೆಗೆ ಉತ್ತಮ ಸಮಾಜ ನಿರ್ಮಾಣಕ್ಕೂ ಸಹಕಾರ ನೀಡಬೇಕು ಎಂದು ನೆರೆದಿದ್ದ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ರೆಡ್ ಎಫ್‌ಎಂ ಕ್ಲಸ್ಟರ್ ಮ್ಯಾನೇಜರ್ ಬಿ.ವಿ.ರಾಘವ್, ದಿ ಪಾಲ್ ಕಾಲೇಜಿನ ಪ್ರಾಂಶುಪಾಲ ರೆ.ಫಾದರ್ ಬೈಜು ಆಂಟೋನಿ, ದಿ ಪಾಲ್ ಇಂಟರ್‌ನ್ಯಾಷನಲ್ ಸ್ಕೂಲ್‌ನ ಉಪಪ್ರಾಂಶುಪಾಲ ರೆ.ಫಾದರ್ ಅನೀಶ್ ಕ್ಸೇವಿಯರ್ ಮತ್ತಿತರರು ಹಾಜರಿದ್ದರು.

ಭಾರತ ರತ್ನ ದಿವಾನ್ ಸರ್‌ಎಂ.ವಿಶ್ವೇಶ್ವರಯ್ಯ ಜಯಂತಿ

ಮೈಸೂರು, ಸೆ. 14– ಜೀವಧಾರ ರಕ್ತ ನಿಧಿ ಕೇಂದ್ರದ ವತಿಯಿಂದ ಭಾರತ ರತ್ನ ದಿವಾನ್ ಸರ್‌ಎಂ.ವಿಶ್ವೇಶ್ವರಯ್ಯ ಜಯಂತಿ ಆಚರಣೆಯನ್ನು ಆಯುರ್ವೇದ (ಸರ್‌ಎಂವಿ) ವೃತ್ತದಲ್ಲಿ ಸೆ.15 ರಂದು ಬೆಳಗ್ಗೆ 11 ಗಂಟೆಗೆ ಆಯೋಜಿಸಲಾಗಿದೆ ಎಂದು ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ತಿಳಿಸಿದ್ದಾರೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶಾಸಕ ಟಿ.ಎಸ್.ಶ್ರೀವತ್ಸ, ಮೇಯರ್ ಶಿವಕುಮಾರ್, ಮಾಜಿ ಶಾಸಕ ಎಲ್ ನಾಗೇಂದ್ರ, ನಗರಪಾಲಿಕೆ ಸದಸ್ಯರಾದ ರಮಣಿ, ಎಂ.ಡಿ. ನಾಗರಾಜ್, ಮಾಜಿ ಮಹಾಪೌರ ಸಂದೇಶ ಸ್ವಾಮಿ, ಆರ್.ರಘು ಕೌಟಿಲ್ಯ, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾನಂದೀಶ್ ಹಾಗೂ ಸಾಮಾಜಿಕ ಹೋರಾಟಗಾರ ವಿಕ್ರಮ್ ಅಯ್ಯಂಗಾರ್, ಅಜಯ್ ಶಾಸ್ತ್ರಿ ಇನ್ನಿತರರು ಆಗಮಿಸಲಿದ್ದಾರೆ.



ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ವಿವೇಕಾನಂದ ಪದವಿ ಪೂರ್ವ ಕಾಲೇಜು ವತಿಯಿಂದ ಆಯೋಜಿಸಿದ್ದ ಪದವಿ ಪೂರ್ವ ಕಾಲೇಜುಗಳ ತಾಲೂಕು ಮಟ್ಟದ ಖೋ ಖೋ ಪಂದ್ಯಾವಳಿ 2023–24ರಲ್ಲಿ ಹರಿ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಬಾಲಕರ ತಂಡವು ದ್ವಿತೀಯ ಸ್ಥಾನವನ್ನು ಪಡೆದುಕೊಂಡಿದೆ.

ಪ್ಲಾಸ್ಟಿಕ್ ನಿಯಂತ್ರಣ ಕಾರ್ಯಾಚರಣೆ ತೀವ್ರಗೊಳಿಸಿದ ಪಾಲಿಕೆ ಅಧಿಕಾರಿಗಳು

ಟ್ರಾನ್ಸ್‌ಪೋರ್ಟ್‌ಗಳ ಮೇಲೆ ದಾಳಿ; 715 ಕೆಜಿ ಪ್ಲಾಸ್ಟಿಕ್ ವಶಕ್ಕೆ

ಮೈಸೂರು, ಸೆ.14(ಎಸ್‌ಬಿಡಿ)– ಮೈಸೂರಲ್ಲಿ ಪ್ಲಾಸ್ಟಿಕ್ ನಿಯಂತ್ರಣಕ್ಕೆ ಕಾರ್ಯಾಚರಣೆ ತೀವ್ರಗೊಳಿಸಿರುವ ನಗರ ಪಾಲಿಕೆ ಅಧಿಕಾರಿಗಳು, ಗುರುವಾರ ಟ್ರಾನ್ಸ್‌ಪೋರ್ಟ್‌ಗಳ ಮೇಲೆ ದಾಳಿ ನಡೆಸಿದ್ದಾರೆ.

ಸಂತೆಪೇಟೆಯ ಸನ್ ಟ್ರಾನ್ಸ್‌ಪೋರ್ಟ್, ವೇಗ ಟ್ರಾನ್ಸ್‌ಪೋರ್ಟ್ ಹಾಗೂ ಸಂತೋಷ್ ಮಾತಾ ಟ್ರಾನ್ಸ್‌ಪೋರ್ಟ್ ಮೇಲೆ ದಾಳಿ ನಡೆಸಿರುವ ಅಧಿಕಾರಿಗಳ ತಂಡ, ಸುಮಾರು 715 ಕೆಜಿ ಪ್ಲಾಸ್ಟಿಕ್ ವಶಪಡಿಸಿಕೊಂಡಿದೆ.

ವಲಯ ಕಚೇರಿ 1ರ ಉಪ ಆಯುಕ್ತ ಮಂಜುನಾಥ ರೆಡ್ಡಿ, ಪರಿಸರ ಇಂಜಿನಿಯರ್‌ಗಳಾದ ಮೈತ್ರಿ, ಜ್ಯೋತಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳಾದ ಹರಿಶಂಕರ್, ಜಯಲಕ್ಷ್ಮಿ, ಆರೋಗ್ಯ ನಿರೀಕ್ಷಕರು ಹಾಗೂ ಅಭಯ ತಂಡದ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ಈವರೆಗೆ ಅಂಗಡಿಗಳ ಮೇಲೆ ದಾಳಿ ನಡೆಸಿ, ಪ್ಲಾಸ್ಟಿಕ್ ವಶಪಡಿಸಿಕೊಳ್ಳುವುದರ ಜೊತೆಗೆ ದಂಡ ವಿಧಿಸುತ್ತಿದ್ದ ಅಧಿಕಾರಿಗಳು, ಸಾಗಿಸುವ ಹಂತದಲ್ಲೇ ನಿಯಂತ್ರಿಸಲು ಈ ಕಾರ್ಯಾಚರಣೆಗೆ ಮುಂದಾಗಿದ್ದಾರೆ.

ಟ್ರಾನ್ಸ್‌ಪೋರ್ಟ್‌ಗಳಲ್ಲೇ ವಶಪಡಿಸಿಕೊಂಡರೆ ಮಳಿಗೆಗಳಿಗೆ ವಿತರಣೆಯಾಗದಂತೆ ತಡೆಯಬಹುದು ಎಂಬುದು ಅವರ ಲೆಕ್ಕಾಚಾರವಾಗಿದೆ. ಆದರೆ ಪ್ಲಾಸ್ಟಿಕ್ ನಿರ್ಮೂಲನೆಗೆ ಮತ್ತಷ್ಟು ವ್ಯಾಪಕ ಕ್ರಮ ಅಗತ್ಯವಿದೆ ಎನ್ನುವುದು ಸಾರ್ವಜನಿಕರ ಅಭಿಪ್ರಾಯ.



'ಬೊಂಬೆ ಮನೆ' ಪ್ರದರ್ಶನ



ಮೈಸೂರು, ಸೆ.14– ಮೈಸೂರಿನ ನಜರ್‌ಬಾದ್ ಮುಖ್ಯರಸ್ತೆಯಲ್ಲಿರುವ ರಾಮ್‌ಸನ್ಸ್ ಬೊಂಬೆ ಮನೆಯಲ್ಲಿ ಸೆ.15ಕ್ಕೆ ಪ್ರಸಕ್ತ ವರ್ಷದ 'ಬೊಂಬೆ ಮನೆ' ಪ್ರದರ್ಶನ ಆರಂಭವಾಗಲಿದೆ. ಸೆ.16ರಿಂದ ವರ್ಷವಿಡೀ ನಿತ್ಯ ಬೆಳಗ್ಗೆ 10ರಿಂದ ಸಂಜೆ 7ರವರೆಗೆ ಪ್ರದರ್ಶನವಿರಲಿದೆ. ಮಾಹಿತಿಗೆ ರಘು ಧರ್ಮೇಂದ್ರ(9880111625) ಅವರನ್ನು ಸಂಪರ್ಕಿಸಬಹುದು.

ಬಸವ ಮಾರ್ಗ ಫೌಂಡೇಷನ್ ಟ್ರಸ್ಟ್‌ಗೆ 37.90 ಲಕ್ಷ ವಂಚನೆ; ಇಬ್ಬರು ಮಾಜಿ ನೌಕರರ ವಿರುದ್ಧ ಪ್ರಕರಣ ದಾಖಲು

ಮೈಸೂರು, ಸೆ.14–ಮೈಸೂರಿನ ಹೆಬ್ಬಾಳ್ ರಿಂಗ್ ರಸ್ತೆಯಲ್ಲಿರುವ 'ಬಸವ ಮಾರ್ಗ ಫೌಂಡೇಷನ್ ಟ್ರಸ್ಟ್'ನ ಹಿಂದಿನ ನೌಕರರಿಬ್ಬರು ಟ್ರಸ್ಟ್‌ಗೆ 37.90 ಲಕ್ಷ ರೂ. ವಂಚಿಸಿರುವ ಬಗ್ಗೆ ಪ್ರಕರಣ ದಾಖಲಾಗಿದೆ. ಮಂಡ್ಯದ ಗಾಂಧಿನಗರ ನಿವಾಸಿ ವಿಶಾಲ್‌ರಾಜ್ ಮತ್ತು ಮೈಸೂರಿನ ರಾಮಕೃಷ್ಣನಗರ ನಿವಾಸಿ ಕೆ.ಗೋಕುಲ್ ಆರೋಪಕ್ಕೆ ಒಳಗಾಗಿರುವವರು.

ವಿವರ: ಮಂಡ್ಯದ ವಿಶಾಲ್‌ರಾಜ್ ಎಂಬಾತ 2022ರ ಆ.25ರಂದು ಚಿಕಿತ್ಸೆಗಾಗಿ ಬಸವ ಮಾರ್ಗ ಫೌಂಡೇಷನ್ ರಿಯಾಬಿಟೇಷನ್ ಕೇಂದ್ರಕ್ಕೆ ದಾಖಲಾಗಿದ್ದ. ಚಿಕಿತ್ಸೆ ಮುಗಿದು ಗುಣಮುಖನಾದ ನಂತರ ಕೆಲಸ ಕೊಡಿ ಎಂದು ಆತ ಕೇಳಿದಾಗ ಮಾನವೀಯತೆ ದೃಷ್ಟಿಯಿಂದ 2022ರ ನವೆಂಬರ್ ತಿಂಗಳಿನಲ್ಲಿ ಆತನಿಗೆ ಟ್ರಸ್ಟ್‌ನಲ್ಲಿ ಕೆಲಸ ನೀಡಿ ಹಣಕಾಸು ವ್ಯವಸ್ಥೆ ನೋಡಿಕೊಳ್ಳುವ ಜವಾಬ್ದಾರಿ ವಹಿಸಲಾಗಿತ್ತು. ಇದೇ ಸಂಸ್ಥೆಯಲ್ಲಿ ಗೋಕುಲ್ ರಾಜ್ ಎಂಬಾತ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದ. ಕೇಂದ್ರದಲ್ಲಿ ಚಿಕಿತ್ಸೆಗೆ ದಾಖಲಾಗುವವರು ನೀಡುತ್ತಿದ್ದ ಹಣವನ್ನು ಫೌಂಡೇಷನ್‌ನ ಬ್ಯಾಂಕ್ ಖಾತೆಗೆ ಇವರು ಜಮೆ ಮಾಡಬೇಕಿತ್ತು. ಈ ಮಧ್ಯೆ ಕಳೆದ ಜೂ.14ರಂದು ಅಕೌಂಟೆಂಟ್ ಕೆಲಸ ಮಾಡುತ್ತಿದ್ದ ಗೋಕುಲ್ ಟ್ರಸ್ಟ್‌ಗೆ ಸಂಬಂಧಿಸಿದ ಯಾವುದೇ ಲೆಕ್ಕಪತ್ರಗಳನ್ನೂ ನೀಡದೇ ಇದ್ದಕ್ಕಿದ್ದಂತೆ ಕೆಲಸ ಬಿಟ್ಟು ಹೋಗಿದ್ದು, ನಂತರ ಟ್ರಸ್ಟ್‌ನವರ ಸಂಪರ್ಕಕ್ಕೆ ಸಿಗಲಿಲ್ಲ. ಹೀಗಾಗಿ ವಿಶಾಲ್‌ರಾಜ್ ಹೆಚ್ಚುವರಿಯಾಗಿ ಅಕೌಂಟೆಂಟ್ ಕೆಲಸವನ್ನು ವಹಿಸಿಕೊಂಡಿದ್ದ. ಆದರೆ ಈತ ಟ್ರಸ್ಟ್‌ನ ಲೆಕ್ಕಪತ್ರಗಳನ್ನು ಕೊಡಲು ಸತಾಯಿಸಿದ್ದರಿಂದ ಅನುಮಾನಗೊಂಡು ಫೌಂಡೇಷನ್‌ನ ಬ್ಯಾಂಕ್ ಅಕೌಂಟ್ ಸ್ಟೇಟ್‌ಮೆಂಟ್ ಅನ್ನು ಪರಿಶೀಲಿಸಿದಾಗ ವಿಶಾಲ್‌ರಾಜ್ ತನಗೆ ನೀಡಿದ್ದ ಬ್ಯಾಂಕ್ ಅಕೌಂಟ್ ಲಿಂಕ್ ಇರುವ ಸಿಮ್ ಹೊಂದಿದ ಮೊಬೈಲ್ ಮೂಲಕ ಕಳೆದ ಜೂನ್ 17ರಿಂದ ಜುಲೈ 24ರವರೆಗೆ ಒಟ್ಟು 37.90 ಲಕ್ಷ ರೂ.ಗಳನ್ನು ವಿವಿಧ' ಖಾತೆಗಳಿಗೆ ವರ್ಗಾವಣೆ ಮಾಡಿಕೊಂಡು ವಂಚಿಸಿರುವುದು ಬೆಳಕಿಗೆ ಬಂದಿದೆ. ಟ್ರಸ್ಟ್‌ನ ಎಲ್ಲಾ ಲೆಕ್ಕಪತ್ರಗಳ ಬಗ್ಗೆಯೂ ಗೊತ್ತಿದ್ದ ಗೋಕುಲ್ ಅಕ್ರಮವಾಗಿ ಹಣ ವರ್ಗಾವಣೆ ಮಾಡಿಕೊಳ್ಳಲು ವಿಶಾಲ್‌ರಾಜ್‌ಗೆ ಸಹಕರಿಸಿದ್ದಾನೆ ಎಂದು ಫೌಂಡೇಷನ್‌ನ ಮುಖ್ಯಸ್ಥ ಎಸ್.ಬಸವರಾಜು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಹೆಬ್ಬಾಳ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಕಾಫಿಯಲ್ಲಿ ಮತ್ತು ಬರುವ ಔಷಧಿ ಹಾಕಿ ವೃದ್ಧರ ಉಂಗುರ ಕಳವು

ಮೈಸೂರು ಬಸ್ ನಿಲ್ದಾಣದ ಹೋಟೆಲ್‌ನಲ್ಲಿ ಪ್ರಕರಣ

ಮೈಸೂರು, ಸೆ.14–ವಯೋವೃದ್ಧರೋರ್ವರಿಗೆ ಕಾಫಿಯಲ್ಲಿ ಮತ್ತು ಬರುವ ಔಷಧಿ ಬೆರೆಸಿಕೊಟ್ಟು ಚಿನ್ನದ ಉಂಗುರ ಕಳವು ಮಾಡಿರುವ ಘಟನೆ ಮೈಸೂರು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿರುವ ಕಸ್ತೂರಿ ಭವನ ಹೋಟೆಲ್‌ನಲ್ಲಿ ನಡೆದಿದೆ. ಮೈಸೂರಿನ ಕುವೆಂಪುನಗರ ನಿವಾಸಿ ಪಲ್ಲಕ್ಕಿ ವೀರಣ್ಣ(82) ಎಂಬುವರು ಸೆ.12ರಂದು ಬೆಂಗಳೂರಿನಿಂದ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಮೈಸೂರಿಗೆ ಆಗಮಿಸಿದ್ದಾರೆ. ಇವರ ಪಕ್ಕದ ಸೀಟ್‌ನಲ್ಲಿ ಕುಳಿತಿದ್ದ ವ್ಯಕ್ತಿಯೋರ್ವ ಇವರ ಜೊತೆ ಅನ್ಯೋನ್ಯವಾಗಿ ಮಾತನಾಡಿಕೊಂಡು ಬಂದಿದ್ದಾರೆ. ಅಂದು ಬೆಳಗ್ಗೆ 11.15ಕ್ಕೆ ಬಸ್ ಮೈಸೂರು ತಲುಪಿದಾಗ ಅಪರಿಚಿತ ವ್ಯಕ್ತಿ ಪಲ್ಲಕ್ಕಿ ವೀರಣ್ಣ ಅವರಿಗೆ ಕಾಫಿ ಕುಡಿಯಲು ಬಲವಂತವಾಗಿ ಕಸ್ತೂರಿ ಭವನ ಹೋಟೆಲ್‌ಗೆ ಕರೆದುಕೊಂಡು ಹೋಗಿ, ಆತನೇ ಕ್ಯಾಷ್ ಕೌಂಟರ್‌ನಲ್ಲಿ ಹಣ ನೀಡಿ ಅವರಿಗೆ ಕಾಫಿ ತಂದು ಕೊಟ್ಟಿದ್ದಾನೆ. ಕಾಫಿ ಕುಡಿಯುತ್ತಿದ್ದಂತೆಯೇ ಮಂಕು ಕವಿದಂತಾಗಿ ವೀರಣ್ಣ ಪ್ರಜ್ಞೆ ತಪ್ಪಿದ್ದಾರೆ. ಈ ವೇಳೆ ಖದೀಮ ಅವರ ಬೆರಳಿನಲ್ಲಿದ್ದ 6 ಗ್ರಾಂ ತೂಕದ ಚಿನ್ನದ ಉಂಗುರ ಕಳವು ಮಾಡಿಕೊಂಡು ಪರಾರಿಯಾಗಿದ್ದಾನೆ.

12 ಗಂಟೆ ಸುಮಾರಿನಲ್ಲಿ ರವಿಕುಮಾರ್ ಎಂಬುವರು ಪಲ್ಲಕ್ಕಿ ವೀರಣ್ಣ ಪುತ್ರ ಪಿ.ವಿ.ಬಸವರಾಜು ಅವರಿಗೆ ವೀರಣ್ಣನವರ ಮೊಬೈಲ್‌ನಿಂದಲೇ ಕರೆ ಮಾಡಿ ನಿಮ್ಮ ತಂದೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಕಸ್ತೂರಿ ಭವನದಲ್ಲಿ ಪ್ರಜ್ಞೆ ತಪ್ಪಿ ಬಿದ್ದಿದ್ದರು. ಅವರನ್ನು ಕೆ.ಆರ್.ಆಸ್ಪತ್ರೆಗೆ ಕರೆದೊಯ್ಯುತ್ತಿದ್ದೇವೆ, ಬನ್ನಿ ಎಂದು ತಿಳಿಸಿದ್ದರು. ಬಸವರಾಜು ಅವರ ಪತ್ನಿ ಕೆ.ಆರ್.ಆಸ್ಪತ್ರೆಗೆ ತೆರಳಿದಾಗ ವೀರಣ್ಣ ಅಲ್ಲಿನ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ನಂತರ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿ ಅವರಿಗೆ ಮರುದಿನ (ಸೆ.13) ಪ್ರಜ್ಞೆ ಬಂದ ನಂತರ ಅವರ ಉಂಗುರ ಕಳುವಿನ ವಿಚಾರ ಬೆಳಕಿಗೆ ಬಂದಿದೆ. ಈ ಸಂಬಂಧ ಲಷ್ಕರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡಾ.ಯೋಗಣ್ಣರ ಆಧ್ಯಾತ್ಮಿಕ ಆರೋಗ್ಯ ದರ್ಶನ ಕೃತಿ ವಿಚಾರ ಸಂಕಿರಣ

ಮೈಸೂರು, ಸೆ.14– ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮ ಹಾಗೂ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ವೈದ್ಯ ಸಾಹಿತಿ ಡಾ.ಎಸ್.ಪಿ.ಯೋಗಣ್ಣ ಅವರ ಕನ್ನಡ ಸಾಹಿತ್ಯ ಅಕಾಡೆಮಿ ಪುರಸ್ಕೃತ ಗ್ರಂಥ 'ಆಧ್ಯಾತ್ಮಿಕ ಆರೋಗ್ಯ ದರ್ಶನ' ಕೃತಿಯ ವಿಚಾರ ಸಂಕಿರಣವನ್ನು ಆಶ್ರಮದ ಸಭಾಂಗಣದಲ್ಲಿ ಸೆ.24ರ ಸಂಜೆ 4.30ಕ್ಕೆ ಆಯೋಜಿಸಲಾಗಿದೆ.

ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಶ್ರೀ ಮುಕ್ತಿದಾನಂದಜೀ ಮಹಾರಾಜ್ ಸಾನ್ನಿಧ್ಯದಲ್ಲಿ ಹಿರಿಯ ವಿದ್ವಾಂಸ ಡಾ.ಪ್ರಧಾನ ಗುರುದತ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ವೈದ್ಯ ಸಾಹಿತಿಯೂ ಆದ ಖ್ಯಾತ ಮನೋರೋಗ ತಜ್ಞ ಡಾ.ಸಿ.ಆರ್.ಚಂದ್ರಶೇಖರ್ ಹಾಗೂ ಹಿರಿಯ ವಿದ್ವಾಂಸ ಡಾ.ಜಿ.ರಾಮಕೃಷ್ಣ ಅವರು ಕೃತಿ ಕುರಿತು ಮಾತನಾಡಲಿದ್ದಾರೆ. ಲೇಖಕ ಡಾ.ಎಸ್.ಪಿ.ಯೋಗಣ್ಣ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಭಾಗವಹಿಸಲಿದ್ದಾರೆ.

ಎಸ್‌ಪಿವಿಜಿಎಂಸಿ ಟ್ರಸ್ಟ್‌ನಿಂದ ಮೈಸೂರಿನ ವಿವಿ ಮೊಹಲ್ಲಾದ 8ನೇ ಕ್ರಾಸ್‌ನಲ್ಲಿ ಸೆ.18ರಿಂದ 62ನೇ ಪಾರಂಪರಿಕ ಸಂಗೀತೋತ್ಸವ



ಕೆರೆಮನೆ ಶಿವಾನಂದ ಹೆಗಡೆ



ಪಂಡಿತ್ ರಾಕೇಶ್ ಚೌರಾಷಿಯಾ



ಪಂಡಿತ್ ವೆಂಕಟೇಶ್ ಕುಮಾರ್



ಶಿವಾನಂದ ಹೆಗಡೆ



ವಿದುಷಿ ಅರುಣಾ ಸಾಯಿರಾಮ್



ವಿದ್ವಾನ್ ಭರತ್ ಸುಂದರ್



ವಿದ್ವಾನ್ ಉಮಲಾಪುರಂ ಕೆ.ಶಿವರಾಮನ್



ವಿದ್ವಾನ್ ಹೈದರಾಬಾದ್ ಬ್ರದರ್ಸ್



ವಿದ್ವಾನ್ ಮೈಸೂರು ನಾಗರಾಜ್ ಮತ್ತು ಡಾ.ಮೈಸೂರು ಮಂಜುನಾಥ್



ವಿದ್ವಾನ್ ನೆಮ್ಮರ ಕಣ್ಣನ್ ಮತ್ತು ಆನಂದ ಬ್ರಹ್ಮ



ವಿದ್ವಾನ್ ರವಿಕಿರಣ್



ವಿದ್ವಾನ್ ಟಿ.ಎಂ.ಕೃಷ್ಣ



ವಿದ್ವಾನ್ ವಿಷ್ಣುದೇವ್ ನಂಬೂದರಿ



ವಿದ್ವಾನ್ ಶಶಾಂಕ್ ಸುಬ್ರಹ್ಮಣ್ಯ

ಮೈಸೂರು, ಸೆ. 14– ಮೈಸೂರಿನ ಎಸ್‌ಪಿವಿಜಿಎಂಸಿ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಕಾರದೊಂದಿಗೆ ಸೆ. 18 ರಿಂದ 30 ರವರೆಗೆ ಪ್ರತಿದಿನ ಸಂಜೆ 6.45 ರಿಂದ ಗಣೇಶ ಹಬ್ಬದ ಪ್ರಯುಕ್ತ ವಿ.ವಿ. ಮೊಹಲ್ಲಾ 8ನೇ ಕ್ರಾಸ್‌ನಲ್ಲಿ 62ನೇ ಪಾರಂಪರಿಕ ಸಂಗೀತೋತ್ಸವ ಏರ್ಪಡಿಸಲಾಗಿದೆ. ಇಲ್ಲಿ ಆಯೋಜಿಸುವ ಸಂಗೀತ ಕಾರ್ಯಕ್ರಮಗಳಲ್ಲಿ ದಿಗ್ಗಜರೇ ಸಂಗೀತ ಸಾರ ಉಣಬಡಿಸುತ್ತಾರೆ. ಸತತ 62 ವರ್ಷಗಳ ಕಾಲ ನಡೆಯುತ್ತಾ ಬಂದಿರುವ ಸಂಗೀತ ಕಾರ್ಯಕ್ರಮ ದಾಖಲೆಯನ್ನೇ ಬರೆದಿದೆ.

- **ಸೆ. 18:** ವಿದ್ವಾನ್ ಮೂರ್ತಿ ಕೊಡಿಯಾಲ–ನಾದಸ್ವರ, ವಿದ್ವಾನ್ ಕೇಶವ ಮೋಹನ್–ವಯೋಲಿನ್, ವಿದ್ವಾನ್ ಎ.ರಾಧೇಶ್ – ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ
- **ಸೆ. 19:** ಸಂಜೆ 6ಕ್ಕೆ 62ನೇ ಪಾರಂಪರಿಕ ಸಂಗೀತೋತ್ಸವದ ಉದ್ಘಾಟನಾ ಸಮಾರಂಭ, ಉದ್ಘಾಟನೆ: ವಿದ್ವಾನ್ ಎನ್.ರವಿಕಿರಣ್, ಅಧ್ಯಕ್ಷತೆ: ಉದ್ಯಮಿ ಎಂ.ಜಗನ್ನಾಥ ಶೆಣೈ, ಉಪಸ್ಥಿತರು: ಮಾಜಿ ಶಾಸಕ ವಾಸು. ಸಂಜೆ 6.45ಕ್ಕೆ ವಿದ್ವಾನ್ ಎನ್ ರವಿಕಿರಣ್–ಚಿತ್ರವೀಣಾ, ವಿದೂಷಿ ಗಾಯತ್ರಿ–ವಯೋಲಿನ್, ವಿದ್ವಾನ್ ಮನ್ನಾರ್‌ಗುಡಿ ಈಶ್ವರನ್–ಮೃದಂಗ, ವಿದ್ವಾನ್ ಜಿ.ಎಸ್. ರಾಮಾನುಜಮ್–ಘಟಂ
- **ಸೆ. 20:** 5.30ರಿಂದ 6.40ರವರಗೆ ಗಣೇಶ ಪುರಾಣ, ವಾಚನ: ವಿ.ಮಹಿಮಾ ಕಶ್ಯಪ, ವ್ಯಾಖ್ಯಾನ : ಡಾ. ಜ್ಯೋತಿ ಶಂಕರ. ಸಂಜೆ 6.45ಕ್ಕೆ ವಿದ್ವಾನ್ ಶೇಷಾಚಾರಿ–ವಿದ್ವಾನ್ ರಾಘವಚಾರಿ (ಹೈದರಾಬಾದ್ ಬ್ರದರ್ಸ್)–ದ್ವಂದ್ವ ಗಾಯನ, ವಿದ್ವಾನ್ ಎಚ್.ಎನ್. ಭಾಸ್ಕರ್–ವಯೋಲಿನ್, ವಿದ್ವಾನ್ ಮನ್ನಾರ್‌ಗುಡಿ ಈಶ್ವರನ್– ಮೃದಂಗ, ವಿದ್ವಾನ್ ಗಿರಿಧರ ಉಡುಪ – ಘಟಂ
- **ಸೆ. 21:** 5:30ರಿಂದ 6:40ರವರಗೆ ಗೋಪಿ ಗೀತೆ (ಸಂಸ್ಕೃತ) ವಾಚನ: ಡಾ ಸನತ್‌ಕುಮಾರ್ ಸೋಮಯಾಜಿ, ವ್ಯಾಖ್ಯಾನ: ಶ್ರೀ ನಾರಾಯಣ ದೇಸಾಯಿ. ಸಂಜೆ 6.45ಕ್ಕೆ ವಿದ್ವಾನ್ ಟಿ.ಎಂ. ಕೃಷ್ಣ–ಗಾಯನ, ವಿದ್ವಾನ್ ತ್ರಿವೇಂಡ್ರಂ ಸಂಪತ್– ವಯೋಲಿನ್, ವಿದೂಷಿ ರಂಜನಿ ವೆಂಕಟೇಶ್– ಮೃದಂಗ, ವಿದೂಷಿ ಸುಕನ್ಯಾ ರಾಮಗೋಪಾಲ್–ಘಟಂ
- **ಸೆ. 22:** 5:30ರಿಂದ 6:40ರವರೆಗೆ ಕಾಳಿದಾಸನ ರಘುವಂಶ, ವಾಚನ : ಡಾ ಸನತ್‌ಕುಮಾರ್ ಸೋಮಯಾಜಿ, ವ್ಯಾಖ್ಯಾನ: ಶ್ರೀ ನಾರಾಯಣ ದೇಸಾಯಿ. ಸಂಜೆ 6.45ಕ್ಕೆ ವಿದ್ವಾನ್ ಎನ್ ಆರ್ ನೆಮ್ಮಾರ ಕಣ್ಣನ್, ವಿದ್ವಾನ್ ಎನ್ ಆರ್ ಆನಂದ ಬ್ರಹ್ಮ – ನಾದಸ್ವರ–ವಯೋಲಿನ್, ವಿದ್ವಾನ್ ಮೈಸೂರು ಎಂ. ನಾಗರಾಜ್ (ಜುಗಲ್‌ಬಂದಿ), ವಿದ್ವಾನ್ ಅನಂತ ಆರ್.ಕೃಷ್ಣ–ಮೃದಂಗ, ವಿದ್ವಾನ್ ಅಮೃತ್ – ಖಂಜಿರ
- **ಸೆ. 23:** 5:30ರಿಂದ 6:40ರವರೆಗೆ ರಾಜಶೇಖರ ವಿಳಾಸ ವಾಚನ:ಕುಮಾರಿ ಧನ್ಯ ವ್ಯಾಖ್ಯಾನ: ಮೊರಬದ ಮಲ್ಲಿಕಾರ್ಜುನ ಸಂಜೆ 6.45ಕ್ಕೆ ವಿದ್ವಾನ್ ವಿಷ್ಣುದೇವ್ ನಂಬೂದರಿ – ಗಾಯನ, ವಿದ್ವಾನ್ ಕಾರ್ತಿಕ್ ನಾಗರಾಜ್–ವಯೋಲಿನ್, ವಿದ್ವಾನ್ ರಮಣ ಮೂರ್ತಿ–ಮೃದಂಗ, ವಿದ್ವಾನ್ ಅಮೃತ್ – ಖಂಜಿರ
- **ಸೆ. 24:** ಬೆಳಗ್ಗೆ 9ಕ್ಕೆ ಶ್ರೀ ಸತ್ಯನಾರಾಯಣ ಪೂಜೆ, 5:30ರಿಂದ 6:40ರವರೆಗೆ ಗೋಕರ್ಣ ಮಹಿಮಾ ದರ್ಶನ, ವಾಚನ: ಶ್ರೀಮತಿ ರಾಧಾ ಕೃಷ್ಣಸ್ವರೂಪ, ಹಾಸನ, ವ್ಯಾಖ್ಯಾನ: ಶ್ರೀಮತಿ ಸೌಮ್ಯಶ್ರೀ ಶ್ರೀಕಂಠ, ತಿಪಟೂರು, ಸಂಜೆ 6.45ಕ್ಕೆ ವಿದೂಷಿ ಅರುಣಾ ಸಾಯಿರಾಂ–ಗಾಯನ, ವಿದೂಷಿ ಎಚ್.ಎಂ.ಸ್ಮಿತಾ–ವಯೋಲಿನ್, ವಿದ್ವಾನ್ ಜೆ.ವೈದ್ಯನಾಥನ್–ಮೃದಂಗ, ವಿದ್ವಾನ್ ಗಿರಿಧರ ಉಡುಪ–ಘಟಂ
- **ಸೆ. 25:** 5:30ರಿಂದ 6:40ರವರೆಗೆ ಭರತೇಶ ವೈಭವ, ವಾಚನ: ವಿದೂಷಿ ವಸಂತ ವೆಂಕಟೇಶ, ವ್ಯಾಖ್ಯಾನ: ಎ.ನಿರಂಜನ, ಸಂಜೆ 6.45ಕ್ಕೆ ವಿದ್ವಾನ್ ಶಶಾಂಕ್ ಸುಬ್ರಹ್ಮಣ್ಯ, ಪಂಡಿತ್ ರಾಕೇಶ್ ಚೌರಾಷಿಯ ಅವರಿಂದ ಕೊಳಲು ಮತ್ತು ಬಾನ್ಸುರಿ ಜುಗಲ್‌ಬಂದಿ, ವಿದ್ವಾನ್ ಗಿರಿಧರ ಉಡುಪ–ಘಟಂ, ಪಂಡಿತ್ ಓಜಸ್–ತಬಲ
- **ಸೆ. 26:** 5:30ರಿಂದ 6:40ರವರೆಗೆ ಲಯವಾದ್ಯ ವಿದ್ವಾನ್ ಶಿವಶಂಕರಸ್ವಾಮಿ ಮತ್ತು ತಂಡದವರಿಂದ, ಸಂಜೆ 6.45ಕ್ಕೆ ಪಂಡಿತ್ ವೆಂಕಟೇಶ್ ಕುಮಾರ್–ಹಿಂದುಸ್ತಾನಿ ಗಾಯನ, ಪಂಡಿತ್ ರವೀಂದ್ರ ಕಾಟೋಟಿ–ಹಾರ್ಮೋನಿಯಂ, ಪಂಡಿತ್ ಕೇಶವ ಜೋಶಿ– ತಬಲ
- **ಸೆ. 27:** 5:30ರಿಂದ 6:40ರವರೆಗೆ ರಾಮಾಯಣ ದರ್ಶನಂ, ವಾಚನ: ವಿದ್ವಾನ್ ಶುಭಾ ರಾಘವೇಂದ್ರ ವ್ಯಾಖ್ಯಾನ : ಡಾ. ಜ್ಯೋತಿ ಶಂಕರ, ಸಂಜೆ 6.45ಕ್ಕೆ ಕೆರೆಮನೆ ಶಿವಾನಂದ ಹೆಗ್ಗಡೆ ಮತ್ತು ತಂಡದವರಿಂದ –ಯಕ್ಷಗಾನ
- **ಸೆ. 28:** 5:30ರಿಂದ 6:40ರವರೆಗೆ "ಕನಕ ಜಾನಕಿ"–ಏಕವ್ಯಕ್ತಿ ತಾಳಮದ್ದಳೆ, ಪ್ರಸ್ತುತಿ: ದಿವಾಕರ ಹೆಗಡೆ, ಆಕಾಶವಾಣಿ, ಮೈಸೂರು, ಹಿನ್ನೆಲೆಯಲ್ಲಿ: ಭಾಗವತರು ಅನಂತ ಹೆಗಡೆ, ದಂತಳಿಗೆ, ಮದ್ದಳೆ: ಶ್ರೀ ಅನಂತ ಪದ್ಮನಾಭ ಫಾಟಕರು, ಸಂಜೆ 6.45ಕ್ಕೆ ವಿದ್ವಾನ್ ಮೈಸೂರು ಎಂ.ನಾಗರಾಜ್–ವಿದ್ವಾನ್ ಡಾ ಮೈಸೂರು ಎಂ.ಮಂಜುನಾಥ್–ದ್ವಂದ್ವ ವಯೋಲಿನ್, ವಿದ್ವಾನ್ ಉಮಯಾಳಪುರಂ ಕೆ. ಸಿವರಾಮನ್ – ಮೃದಂಗ, ವಿದ್ವಾನ್ ಗುರುಪ್ರಸನ್ನ – ಖಂಜಿರ
- **ಸೆ. 29:** 5:30ರಿಂದ 6:40ರವರೆಗೆ ರಂಗಗೀತೆಗಳು, ಶ್ರೀ ಜನಾರ್ಧನ್ (ಜೆನ್ನಿ) ಮತ್ತು ತಂಡದವರಿಂದ, ಸಂಜೆ 6.45ಕ್ಕೆ : ವಿದ್ವಾನ್ ಭರತ್ ಸುಂದರ್–ಗಾಯನ, ವಿದ್ವಾನ್ ಎಚ್.ಎನ್ ಭಾಸ್ಕರ್–ವಯೋಲಿನ್, ವಿದ್ವಾನ್ ಉಮಯಾಳಪುರಂ ಕೆ. ಸಿವರಾಮನ್–ಮೃದಂಗ, ವಿದ್ವಾನ್ ಕಾರ್ತಿಕ್–ಘಟಂ
- **ಸೆ. 30:** ಬೆಳಗ್ಗೆ 8 ಕ್ಕೆ ಶ್ರೀ ಗಣಪತಿ ಮತ್ತು ಪವಮಾನ ಹೋಮ, ಮಧ್ಯಾಹ್ನ 12 ಕ್ಕೆ ಪೂರ್ಣಾಹುತಿ, ಶ್ರೀ ಚಲ್ಲಕೆರೆ ಸಹೋದರರಿಂದ

ಕೇರಳದಲ್ಲಿ ನಿಫಾ ವೈರಸ್ ಪತ್ತೆ ಹಿನ್ನೆಲೆ

ಕೊಡಗು ಜಿಲ್ಲೆಯಲ್ಲಿ ಮುನ್ನೆಚ್ಚರಿಕಾ ಕ್ರಮ



ಕರಿಕೆ, ಕುಟ್ಟ ಚೆಕ್‌ಪೋಸ್ಟ್‌ಗಳಲ್ಲಿ ಕೇರಳದಿಂದ ಬರುವ ವಾಹನಗಳು, ಪ್ರಯಾಣಿಕರ ತಪಾಸಣೆ

ಮಡಿಕೇರಿ, ಸೆ.14– ಕೊಡಗು ಜಿಲ್ಲೆಯ ಗಡಿ ರಾಜ್ಯವಾದ ಕೇರಳದಲ್ಲಿ ನಿಫಾ ವೈರಸ್ ಜ್ವರ ಕಂಡು ಬಂದಿರುವ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲೂ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗಿದೆ.

ಗಡಿ ಗ್ರಾಮಗಳಾದ ಕರಿಕೆ ಮತ್ತು ಕುಟ್ಟದ ಚೆಕ್‌ಪೋಸ್ಟ್‌ಗಳಲ್ಲಿ ಆರೋಗ್ಯ ಇಲಾಖೆ ಮತ್ತು ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿದ್ದು, ಕೇರಳದಿಂದ ಜಿಲ್ಲೆಗೆ ಬರುವ ಪ್ರಯಾಣಿಕರ ಆರೋಗ್ಯ ತಪಾಸಣೆ ನಡೆಸಲಾಗುತ್ತಿದೆ. ವಾಹನಗಳಲ್ಲಿ ಆಗಮಿಸುವ ಪ್ರಯಾಣಿಕರ ದೇಹದ ಉಷ್ಣತೆಯ ತಪಾಸಣೆ ನಡೆಸಲಾಗುತ್ತಿದ್ದು, ನಿಫಾ ವೈರಸ್ ಜ್ವರದ ಕುರಿತು ಜಾಗೃತಿಯನ್ನೂ ಮೂಡಿಸಲಾಗುತ್ತಿದೆ. ಕೇರಳದಿಂದ ಜಿಲ್ಲೆಗೆ ಪ್ರವೇಶಿಸುವ ವಾಹನಗಳ ನೋಂದಣಿ ಸಂಖ್ಯೆಯನ್ನೂ ಪೊಲೀಸ್ ಸಿಬ್ಬಂದಿಗಳು ದಾಖಲು ಮಾಡುತ್ತಿದ್ದು, ಗಡಿಭಾಗಗಳಲ್ಲಿ ಎಲ್ಲಾ ರೀತಿಯ ವಾಹನ ಮತ್ತು ಜನ ಸಂಚಾರಕ್ಕೆ ಅನುವು ಮಾಡಿಕೊಡಲಾಗುತ್ತಿದೆ.

ಆರೋಗ್ಯ ಇಲಾಖೆ ವೈದ್ಯಾಧಿಕಾರಿ ಸತೀಶ್ ಕುಮಾರ್ ಸುದ್ದಿಗಾರರೊಂದಿಗೆ ಮಾತನಾಡಿ, ನಿಫಾ ವೈರಸ್ ಜ್ವರ ಪ್ರಕರಣ ಜಿಲ್ಲೆಯಲ್ಲಿ ವರದಿಯಾಗಿಲ್ಲ. ಆದರೂ ಗಡಿಭಾಗಗಳ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಮೇಲ್ನೋಟಕ್ಕೆ ನಿಫಾ ವೈರಸ್ ಜ್ವರ ಡೆಂಗ್ಯೂ ಲಕ್ಷಣಗಳನ್ನು ಹೊಂದಿದಂತೆ ಕಂಡುಬರುತ್ತದೆ. ಜ್ವರದ ಲಕ್ಷಣಗಳು ಕಂಡು ಬಂದಲ್ಲಿ ಸಮೀಪದ ಆರೋಗ್ಯ ಕೇಂದ್ರಗಳಿಗೆ ತೆರಳಿ ಸೂಕ್ತ ಚಿಕಿತ್ಸೆ ಪಡೆದು ಕೊಳ್ಳಬೇಕು ಎಂದು ಸಲಹೆ ನೀಡಿದರು. ನಿಫಾ ವೈರಸ್ ಜ್ವರ ಬಾವಲಿಗಳಿಂದ ಹರಡುತ್ತಿದ್ದು, ಈ ಹಿನ್ನೆಲೆಯಲ್ಲಿ ಬಾವಲಿಗಳು ಕಚ್ಚಿದ ಹಣ್ಣುಗಳನ್ನು ಸೇವಿಸಬಾರದು ಎಂದು ಮಾಹಿತಿ ನೀಡಿದರು.

ಇಂದು 'ಸಂವಿಧಾನ ಪೀಠಿಕೆ ವಾಚನ' ಕಾರ್ಯಕ್ರಮ

ಮಡಿಕೇರಿ, ಸೆ.14– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಪ್ರಯುಕ್ತ 'ಸಂವಿಧಾನ ಪೀಠಿಕೆ ವಾಚನ' ಕಾರ್ಯಕ್ರಮವು ಸೆ.15 ರಂದು ಬೆಳಗ್ಗೆ 9.30 ಗಂಟೆಗೆ ನಗರದ ಕೆಳಗಿನ ಗೌಡ ಸಮಾಜದಲ್ಲಿ ನಡೆಯಲಿದೆ ಎಂದು ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಗೋಣಿಕೊಪ್ಪ ದಸರೆಗೆ 1 ಕೋಟಿ ನಿರೀಕ್ಷೆ

ವಿಭಿನ್ನವಾಗಿ ದಸರಾ ಮಹೋತ್ಸವ ಆಚರಿಸಲು ಚಿಂತನೆ



ಗೋಣಿಕೊಪ್ಪ, ಸೆ.14– ಗೋಣಿಕೊಪ್ಪ ದಸರಾ ಆಚರಣೆಗೆ ಒಂದು ಕೋಟಿ ರೂ. ಅನುದಾನ ನಿರೀಕ್ಷೆ ಇಟ್ಟುಕೊಳ್ಳಲಾಗಿದೆ ಎಂದು ಗೋಣಿಕೊಪ್ಪ ದಸರಾ ಮಾತೃ ಸಂಸ್ಥೆಯಾಗಿರುವ ಶ್ರೀ ಕಾವೇರಿ ದಸರಾ ಸಮಿತಿ ಅಧ್ಯಕ್ಷ ಕುಲ್ಲಚಂಡ ಪ್ರಮೋದ್ ಗಣಪತಿ ಹೇಳಿದರು.

ಪೊನ್ನಂಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಸಿಲ್ವರ್‌ಸ್ಕೈ ಸಭಾಂಗಣದಲ್ಲಿ ಆಯೋಜಿಸಿದ್ದ ಮಾಧ್ಯಮ ಸಂವಾದದಲ್ಲಿ ಮಾತನಾಡಿ, ಈಗಾಗಲೇ ಅಧ್ಯಕ್ಷರಾಗಿ ನನಗೆ ಅವಕಾಶ ನೀಡಿದ್ದು, ಅಧಿಕಾರ ಸ್ವೀಕಾರದ ನಂತರ ಶಾಸಕರಿಗೆ ವಿಶೇಷವಾಗಿ ಮನವಿ ಮಾಡಿಕೊಳ್ಳಲಾಗುವುದು. ಒಂದು ಕೋಟಿ ಅನುದಾನ ನೀಡುವ ನಿರೀಕ್ಷೆ ಇದ್ದು, ಅಚ್ಚುಕಟ್ಟಾಗಿ ನಡೆಸಲು ಯೋಜನೆ ರೂಪಿಸಿಕೊಳ್ಳಲಾಗುವುದು ಎಂದರು.

ದಸರಾ ಕೇಂದ್ರಬಿಂದು ಆಗಿರುವ ಮಂಟಪ ಸಮಿತಿಗಳಿಗೆ ತಲಾ 3 ಲಕ್ಷ ರೂ. ಪ್ರೋತ್ಸಾಹ ಧನ ನೀಡುವ ಚಿಂತನೆ ಇದೆ. ಬರಗಾಲದ ಮುನ್ಸೂಚನೆ ಇರುವುದರಿಂದ ಅನುದಾನ ಕಡಿತಗೊಂಡಲ್ಲಿ ಪೂರಕವಾಗಿ ಯೋಜನೆ ರೂಪಿಸಬೇಕಾಗುತ್ತದೆ. ಸರ್ಕಾರ ಅನುದಾನದ ಮೊತ್ತದ ಮೇಲೆ ಅವಲಂಬಿತವಾಗಿದೆ ಎಂದರು.

ಸಾರ್ವಜನಿಕರ ಸಹಕಾರದಲ್ಲಿ ದಸರಾ ಆಚರಣೆ ನಡೆಯುತ್ತಿದೆ. ಸರ್ಕಾರದ ಅನುದಾನ ಆಚರಣೆಗೆ ಬೆನ್ನೆಲುಬು. ಇದರಂತೆ ವಿಭಿನ್ನ ಚಿಂತನೆಯಲ್ಲಿ ಆಚರಣೆ ಮಾಡಲಾಗವುದು. ಸ್ಥಳೀಯ ಶಾಸಕರು, ಮುಖ್ಯಮಂತ್ರಿ ಕಾನೂನು ಸಲಹೆಗಾರರೂ ಆಗಿರುವ ಎ.ಎಸ್. ಪೊನ್ನಣ್ಣ ಅವರಿಂದ ಹೆಚ್ಚಿನ ಅನುದಾನದ ನಿರೀಕ್ಷೆ ಇಟ್ಟುಕೊಳ್ಳಲಾಗಿದೆ. ಅವರಲ್ಲೂ ಕೂಡ ದಸರಾ ಆಚರಣೆಗೆ ವಿಶೇಷ ಚಿಂತನೆ ಇದ್ದು, ಅವುಗಳನ್ನು ಅಳವಡಿಸಿಕೊಳ್ಳಲಾಗುವುದು. ಮಂಟಪ ಸಮಿತಿಗಳ ನೋವು –ನಲಿವು ಕೂಡ ನನಗೆ ಅರಿವು ಇರುವುದರಿಂದ ಉತ್ತಮ ಅನುದಾನ ನೀಡಲಾಗುವುದು ಎಂದು ಅವರು ಹೇಳಿದರು.


ನಿಕಟಪೂರ್ವ ಅಧ್ಯಕ್ಷ ಬಿ. ಎನ್. ಪ್ರಕಾಶ್ ಮಾತನಾಡಿ, ದಸರಾ ಆಚರಣೆ ಮೂಲಕ ಗೋಣಿಕೊಪ್ಪ ಸಾಂಸ್ಕೃತಿಕ ನಗರಿ ಎಂದು ಕರೆಸಿಕೊಳ್ಳುವ ಹಂತಕ್ಕೆ ಬಂದಿದೆ. ಯುವ ಪೀಳಿಗೆ ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮಕ್ಕೆ ಬರುವಂತೆ ಆದ್ಯತೆ ನೀಡಬೇಕಿದೆ. ಅಧ್ಯಕ್ಷರ ಅಭಿರುಚಿ ಕೂಡ ಮುಖ್ಯವಾಗುತ್ತದೆ. ಸ್ತಬ್ಧಚಿತ್ರ ಕಾರ್ಯಕ್ರಮದಲ್ಲಿ ಇಲಾಖೆಗಳ ಪ್ರಗತಿ, ಸಂದೇಶ, ಪೌರಾಣಿಕ, ಸಾಮಾಜಿಕ ಚಿಂತನೆಗಳ ಮೂರು ಬಗೆಯ ಚಿತ್ರಗಳು ಅವಶ್ಯವಾಗಿದೆ ಎಂದರು.

ಗೋಣಿಕೊಪ್ಪ ಗ್ರಾಪಂ ಅಧ್ಯಕ್ಷೆ ಮನ್ನಕಮನೆ ಸೌಮ್ಯ ಬಾಲು ಮಾತನಾಡಿ, ದಸರಾ ಆಚರಣೆಗೆ ಎಲ್ಲರ ಸಹಕಾರ ಅಗತ್ಯ. ಪಂಚಾಯಿತಿ ಕೂಡ ಸೂಕ್ತ ರೀತಿಯಲ್ಲಿ ಬೆಂಬಲ ನೀಡಲಿದೆ ಎಂದರು. ಸಂಘದ ಅಧ್ಯಕ್ಷ ಸಣ್ಣುವಂಡ ಕಿಶೋರ್ ನಾಚಪ್ಪ, ಪ್ರ ಕಾರ್ಯದರ್ಶಿ ಎನ್. ಎನ್. ದಿನೇಶ್, ಸಂಘದ ಪ್ರಮುಖರಾದ ವಿ. ವಿ. ಅರುಣ್‌ಕುಮಾರ್, ಮಂಡೇಡ ಅಶೋಕ್, ದರ್ಶನ್ ದೇವಯ್ಯ, ಜಗದೀಶ್ ಜೋಡುಬೀಟಿ, ಡಿ. ನಾಗೇಶ್, ಸಿಂಗಿ ಸತೀಶ್, ಎಚ್. ಕೆ. ಜಗದೀಶ್ ಇದ್ದರು.

ಭಾಗಮಂಡಲ ಮೇಲ್ಸೇತುವೆ ಕಾಮಗಾರಿ ಚುರುಕುಗೊಳಿಸಿ

ಅಧಿಕಾರಿಗಳಿಗೆ ಉಸ್ತುವಾರಿ ಸಚಿವ ಭೋಸರಾಜು ಸೂಚನೆ

ಮಡಿಕೇರಿ, ಸೆ.14– ಭಾಗಮಂಡಲ ಮೇಲ್ಸೇತುವೆ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸುವ ನಿಟ್ಟಿನಲ್ಲಿ ಕಾಮಗಾರಿ ಚುರುಕುಗೊಳಿಸುವಂತೆ ಹಾಗೂ ಕೊಡಗು ಜಿಲ್ಲೆಯ ಹಾರಂಗಿ ಜಲಾಶಯದ ವ್ಯಾಪ್ತಿಯ ಕಾಲುವೆಗಳಿಗೆ ಸಮರ್ಪಕವಾಗಿ ನೀರು ಹರಿಸಿ ರೈತರಿಗೆ ಅನುಕೂಲ ಮಾಡಿ ಕೊಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್ ಭೋಸರಾಜು ಅಧಿಕಾರಿಗಳಿಗೆ ಸೂಚನೆ ನೀಡಿದರು.



ವಿಕಾಸಸೌಧದ ಕಚೇರಿಯಲ್ಲಿ ಗುರುವಾರ ನಡೆದ ಸಭೆಯಲ್ಲಿ ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕರೊಂದಿಗೆ ಮಾತುಕತೆ ನಡೆಸಿ ಮಾಹಿತಿ ಪಡೆದರು.

ಕೊಡಗು ಜಿಲ್ಲೆಯಲ್ಲಿ ಅತಿ ಹೆಚ್ಚು ಮಳೆ ಬೀಳುವ ಹಾಗೂ ಪುಣ್ಯ ಕ್ಷೇತ್ರವಾದ ಭಾಗಮಂಡಲಕ್ಕೆ ಪ್ರತಿವರ್ಷ ಮಳೆಗಾಲದಲ್ಲಿ 2–3 ತಿಂಗಳ ಕಾಲ ರಸ್ತೆ ಸಂಪರ್ಕ ಕಡಿತಗೊಂಡು ಸಮಸ್ಯೆ ಎದುರಿಸುತ್ತಿದ್ದ ಹಿನ್ನಲೆ ಮೇಲ್ಸೇತುವೆ ಕಾಮಗಾರಿ ಆರಂಭಿಸಲಾಯಿತು. ಆದರೆ ಕಾಮಗಾರಿ ಇನ್ನೂ ಪೂರ್ಣಗೊಳ್ಳದ ಹಿನ್ನಲೆಯಲ್ಲಿ ಜನರಿಗೆ ಸಂಚಾರಕ್ಕೆ ಅವಕಾಶ ದೊರೆತಿರಲಿಲ್ಲ. ಈ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣ ಗೊಳಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಮುಂದಿನ ಬಾರಿ ಜಿಲ್ಲಾ ಪ್ರವಾಸ ದಲ್ಲಿ ಈ ಬಗ್ಗೆ ಪರಿಶೀಲನೆ ನಡೆಸುವುದಾಗಿ ಸಚಿವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇದೇ ವೇಳೆ, ಹಾರಂಗಿ ಜಲಾಶಯದ ವ್ಯಾಪ್ತಿ ಕಾಲುವೆಗಳಲ್ಲಿ ಸಮರ್ಪಕವಾಗಿ ನೀರು ಹರಿಸುವ ಮೂಲಕ ಆ ಭಾಗದ ರೈತರುಗಳಿಗೆ ಅನುಕೂಲ ಮಾಡಿಕೊಡಬೇಕು. ಈ ಬಗ್ಗೆ ನೀರಾವರಿ ದಕ್ಷಿಣ ವಲಯದ ಮುಖ್ಯ ಎಂಜಿನಿಯರ್‌ಗೆ ನಿರಂತರ ನಿಗಾ ವಹಿಸುವಂತೆ ಸೂಚನೆ ನೀಡಿದರು.

ಸಭೆಯಲ್ಲಿ ಕಾವೇರಿ ನೀರಾವರಿ ಅಭಿವೃದ್ಧಿ ನಿಗಮ ಬೆಂಗಳೂರಿನ ವ್ಯವಸ್ಥಾಪಕ ನಿರ್ದೇಶಕ ಮಹೇಶ್, ಮುಖ್ಯ ಎಂಜಿನಿಯರ್ ನೀರಾವರಿ ದಕ್ಷಿಣ ವಲಯ ಮೈಸೂರು ವೆಂಕಟೇಶ್ ಉಪಸ್ಥಿತರಿದ್ದರು.

ಜಿಲ್ಲೆಯಲ್ಲಿ ಜಿಪಂ ಕ್ಷೇತ್ರಗಳನ್ನು 29 ಸ್ಥಾನಕ್ಕೆ ಹೆಚ್ಚಿಸಿ

ಮುಖ್ಯಮಂತ್ರಿ, ಪಂಚಾಯತ್ ರಾಜ್ ಸಚಿವರಿಗೆ ಕೊಡಗು ಜಿಲ್ಲಾ ಕಾಂಗ್ರೆಸ್ ನಿಯೋಗ ಮನವಿ



ಮಡಿಕೇರಿ, ಸೆ.14– ಕೊಡಗು ಜಿಲ್ಲಾ ಕಾಂಗ್ರೆಸ್ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ ಖರ್ಗೆ ಅವರನ್ನು ಭೇಟಿ ಮಾಡಿ, ಜಿಲ್ಲಾ ಪಂಚಾಯಿತಿ ಕ್ಷೇತ್ರಗಳನ್ನು ಈ ಹಿಂದಿನಂತೆ 29 ಸ್ಥಾನಕ್ಕೆ ಹೆಚ್ಚಳ ಮಾಡುವುದರೊಂದಿಗೆ ಜಿಲ್ಲೆಯ ಅಭಿವೃದ್ಧಿಗೆ ಒತ್ತು ನೀಡುವಂತೆ ಮನವಿ ಸಲ್ಲಿಸಲಾಯಿತು.

ಜಿಲ್ಲಾ ಉಸ್ತುವಾರಿ ಸಚಿವ ಬೋಸರಾಜು, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ, ವಿರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ ಮತ್ತು ಮಡಿಕೇರಿ ಶಾಸಕ ಡಾ.ಮಂಥರ್ ಗೌಡ ಹಾಗೂ ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಧರ್ಮಜ ಉತ್ತಪ್ಪ ಅವರ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದ ರಾಮಯ್ಯ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ ಖರ್ಗೆ ಅವರನ್ನು ಭೇಟಿ ಮಾಡಿದ ನಿಯೋಗ ಕೊಡಗು ಜಿಲ್ಲಾ ಪಂಚಾಯಿತಿ ಕ್ಷೇತ್ರಗಳನ್ನು ಈ ಹಿಂದಿನಂತೆ 29 ಸ್ಥಾನಕ್ಕೆ ಹೆಚ್ಚಳ ಮಾಡುವಂತೆ ಒತ್ತಾಯಿಸಿದರು.

ಜಿಲ್ಲೆಯ ಮುಂದಿನ ಜಿಲ್ಲಾ ಪಂಚಾಯತ್ ಚುನಾವಣೆಗೆ ಒಟ್ಟು 29 ಕ್ಷೇತ್ರಗಳ ಪೈಕಿ 4 ಕ್ಷೇತ್ರಗಳನ್ನು ಕೈ ಬಿಡಲಾಗಿದೆ. ಅದನ್ನು ಮರು ಪರಿಶೀಲಿಸಿ 29 ಕ್ಷೇತ್ರಗಳಿಗೂ ಚುನಾವಣೆ ನಡೆಸಬೇಕೆಂದು ನಿಯೋಗ ಮುಖ್ಯಮಂತ್ರಿಗಳ ಗಮನ ಸೆಳೆಯಿತು. ಅಭಿವೃದ್ಧಿ ವಿಚಾರದಲ್ಲಿ ಕೊಡಗು ಜಿಲ್ಲೆ ಹಿಂದುಳಿದಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಈ ಎರಡು ವಿಚಾರಗಳಿಗೆ ಸ್ಪಂದಿಸಬೇಕೆಂದು ಒತ್ತಾಯಿಸಿ ಮನವಿ ಸಲ್ಲಿಸಲಾಯಿತು.

ಜಿಲ್ಲೆಯ ಅಭಿವೃದ್ಧಿಗೆ ವಿಶೇಷ ಅನುದಾನ ನೀಡಲು ಕ್ರಮ ಕೈಗೊಳ್ಳಬೇಕು. ಮಳೆ ಕೊರತೆ ಹಿನ್ನೆಲೆ ಸರ್ಕಾರ ಘೋಷಣೆ ಮಾಡಿರುವ ಬರಪೀಡಿತ ಪ್ರದೇಶಗಳಿಗೆ ಹೆಚ್ಚಿನ ಅನುದಾನ ನೀಡಬೇಕೆಂದು ಮುಖ್ಯಮಂತ್ರಿಗಳ ಜೊತೆ ಚರ್ಚಿಸಲಾಯಿತು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ, ಮಾಜಿ ಜಿ.ಪಂ. ಅಧ್ಯಕ್ಷೆ ಕೆ.ಪಿ. ಚಂದ್ರಕಲಾ, ಸದಸ್ಯರಾದ ಸರಿತಾ ಪೂಣಚ್ಚ, ಶಿವು ಮಾದಪ್ಪ, ವಿ.ಪಿ. ಶಶಿಧರ್, ಕಾಂಗ್ರೆಸ್ ಮುಖಂಡರಾದ ಟಿ.ಪಿ.ರಮೇಶ್, ಚಂದ್ರಮೌಳಿ, ಯಾಕೂಬ್, ಕೆಪಿಸಿಸಿಯ ಪ್ರಮುಖರು ಮತ್ತು ಸದಸ್ಯರುಗಳು, ಬ್ಲಾಕ್ ಕಾಂಗ್ರೆಸ್ ಪದಾಧಿಕಾರಿಗಳು ಉಪಸ್ಥಿತರಿದ್ದರು.

ವಿರಾಜಪೇಟೆಯಲ್ಲಿ ಅದ್ದೂರಿ ಗೌರಿ–ಗಣೇಶೋತ್ಸವ



ವಿರಾಜಪೇಟೆ, ಸೆ.14– ವಿರಾಜಪೇಟೆ ನಗರದ ಜೈನರ ಬೀದಿಯಲ್ಲಿರುವ ಶ್ರೀ ಬಸವೇಶ್ವರ ದೇವಾಲಯ ಸಮಿತಿ ವತಿಯಿಂದ ಈ ವರ್ಷದ ಶ್ರೀ ಗೌರಿ–ಗಣೇಶೋತ್ಸವವನ್ನು ಅದ್ದೂರಿಯಿಂದ ಆಚರಿಸಲಾಗುವುದು ಎಂದು ದೇವಾಲಯದ ಉತ್ಸವ ಸಮಿತಿ ಅಧ್ಯಕ್ಷ ಎನ್.ಜಿ.ಕಾಮತ್ ತಿಳಿಸಿದರು.

ಇಲ್ಲಿನ ಪ್ರೆಸ್‌ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಸೆ.18 ರಂದು ಬೆಳಗ್ಗೆ 9 ಗಂಟೆಯಿಂದ ರಾತ್ರಿ 8 ಗಂಟೆವರೆಗೆ ಶ್ರೀ ಗೌರಮ್ಮನ ಪಲ್ಲಕ್ಕಿ ಉತ್ಸವ ನಗರದ ಮುಖ್ಯ ಬೀದಿಯಲ್ಲಿ ನಡೆಯಲಿದ್ದು, ಮುತ್ತೈದೆಯರು ಗೌರಮ್ಮ ದೇವಿಗೆ ಬಾಗಿನ ಅರ್ಪಿಸಲಿದ್ದಾರೆ. ನಂತರ ರಾತ್ರಿ 8.30ಕ್ಕೆ ವಿಜೃಂಭಣೆಯ ಪ್ರತಿಷ್ಠಾಪನೆ ನಡೆಯಲಿದೆ ಎಂದು ತಿಳಿಸಿದರು.

ದೇವಾಲಯ ಸಮಿತಿ ಉಪಾಧ್ಯಕ್ಷ ಸಂಪತ್ ಕುಮಾರ್ ಮಾತನಾಡಿ, ಈ ಬಾರಿ ಶ್ರೀ ಗಣೇಶ ಮೂರ್ತಿಯನ್ನು ಸೆ.19 ರಂದು ಮಹಾಗಣಪತಿ ಹೋಮದೊಂದಿಗೆ ಪ್ರತಿಷ್ಠಾಪನೆ ಮಾಡಲಾಗುವುದು. ಕೆಲವು ವರ್ಷಗಳಿಂದ ಕೊರೊನಾ ಇದ್ದ ಕಾರಣ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲು ಸಾಧ್ಯವಾಗಿಲ್ಲ. ಈ ಬಾರಿ ಸೆ. 20 ರಿಂದ 27ರವರೆಗೆ ಪ್ರತಿದಿನ ಸಂಜೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದೆ. ಸೆ.28 ರ ರಾತ್ರಿ ಗೌರಿ–ಗಣೇಶನ ವಿಸರ್ಜನೋತ್ಸವ ಅದ್ದೂರಿಯಾಗಿ ನಡೆಯಲಿದ್ದು ವಿದ್ಯುತ್ ಅಲಂಕೃತ ಮಂಟಪದೊಂದಿಗೆ ವಿವಿಧ ಚಂಡೆ ಮದ್ದಳೆ ಗೊಂಬೆ ಕುಣಿತ ಪಟ್ಟಣದ ಮುಖ್ಯಬೀದಿಯಲ್ಲಿ ಉತ್ಸವ ಮೂರ್ತಿಗಳ ಮೆರವಣಿಗೆ ನಡೆಸಿ ಪವಿತ್ರ ಗೌರಿ ಕೆರೆಯಲ್ಲಿ ವಿಸರ್ಜನೆ ನಡೆಸಲಾಗುವುದು ಎಂದರು. ಖಜಾಂಚಿ ನರೇಂದ್ರ ಕಾಮತ್ ಮಾತನಾಡಿದರು. ಗೋಷ್ಠಿಯಲ್ಲಿ ಸಮಿತಿಯ ಕಾರ್ಯದರ್ಶಿ ಪುಷ್ಪರಾಜ್, ಸದಸ್ಯ ರಾಜೇಂದ್ರ ಉಪಸ್ಥಿತರಿದ್ದರು.

ಕುಂದು ಕೊರತೆ ಸಭೆ

ಚಾಮರಾಜನಗರ, ಸೆ.14– ಜಿಲ್ಲಾ ಮಟ್ಟದ ವಿಕಲಚೇತನರ ಕುಂದು ಕೊರತೆ ಸಭೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸೆ.20 ರಂದು ಬೆಳಗ್ಗೆ 11 ಗಂಟೆಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಹಳೇ ಕೆಡಿಪಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿಗಳ ಕಚೇರಿ (ದೂ: 08226–223688, 224688) ಸಂಪರ್ಕಿಸಿ.

ಸಭೆ ಮುಂದೂಡಿಕೆ

ಚಾಮರಾಜನಗರ, ಸೆ.14– ಸಂಸದ ವಿ.ಶ್ರೀನಿವಾಸ ಪ್ರಸಾದ್ ಅಧ್ಯಕ್ಷತೆಯಲ್ಲಿ ಸೆ.15ರಂದು ನಿಗದಿಯಾಗಿದ್ದ ಕೇಂದ್ರ ಪುರಸ್ಕೃತ ಯೋಜನೆಗಳ ಜಿಲ್ಲಾ ಮಟ್ಟದ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ ಸಭೆಯನ್ನು ಕಾರಣಾಂತರಗಳಿಂದ ಮುಂದೂಡಲಾಗಿದೆ ಎಂದು ಜಿಲ್ಲಾಡಳಿತದ ಪ್ರಕಟಣೆ ತಿಳಿಸಿದೆ.

ಗಣೇಶೋತ್ಸವ: ಸುರಕ್ಷತಾ, ಮುಂಜಾಗ್ರತಾ ಕ್ರಮ ಪಾಲಿಸಿ

ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್ ಸೂಚನೆ



> ಗಣೇಶ ಪ್ರತಿಷ್ಠಾಪನೆ, ಉತ್ಸವ ಸಂದರ್ಭ ಧ್ವನಿವರ್ಧಕ ಬಳಕೆಗೆ ಅನುಮತಿ ಅಗತ್ಯ. ನಿಗದಿತ ಅವಧಿಯೊಳಗೆ ಮಾತ್ರ ಧ್ವನಿವರ್ಧಕ ಬಳಸಬೇಕು. ಗಣಪತಿ ವಿಸರ್ಜನಾ ಮೆರವಣಿಗೆಗೆ ಮೊದಲು ಮಾಹಿತಿ ನೀಡಬೇಕು. ಸಾರ್ವಜನಿಕ ಗಣೇಶ ಪ್ರತಿಷ್ಠಾಪನೆ ಸ್ಥಳಗಳಲ್ಲಿ ಆಯೋಜಕರು ಅವರ ಸ್ವಯಂ ಸೇವಕರನ್ನು ಸುರಕ್ಷತೆಗಾಗಿ ನಿಯೋಜಿಸಿಕೊಳ್ಳಬೇಕು. ಗ್ರಾಮೀಣ ಪ್ರದೇಶಗಳಲ್ಲಿಯೂ ಪಿಡಿಓಗಳೊಂದಿಗೆ ಇತರೆ ಅಧಿಕಾರಿಗಳು ಸಭೆ ನಡೆಸಿ ಗಣೇಶ ಉತ್ಸವ ಸಂದರ್ಭ ಪಾಲಿಸಬೇಕಿರುವ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸಬೇಕು.
>
> -ಪದ್ಮಿನಿ ಸಾಹು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ.

ಚಾಮರಾಜನಗರ, ಸೆ.14– ಗೌರಿ ಗಣೇಶೋತ್ಸವ ಆಯೋಜನೆ, ಪ್ರತಿಷ್ಠಾಪನೆ, ವಿಸರ್ಜನೆ, ಉತ್ಸವ ಕಾರ್ಯಗಳ ಸುಗಮ ನಿರ್ವಹಣೆಗಾಗಿ ಆಯೋಜಕರು ಸುರಕ್ಷತಾ ಹಾಗೂ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಬೇಕು ಎಂದು ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗೌರಿ ಗಣೇಶೋತ್ಸವ, ವಿಸರ್ಜನೆ ಸಂಬಂಧ ಜಿಲ್ಲೆಯ ಗಣೇಶಮೂರ್ತಿ ಪ್ರತಿಷ್ಠಾಪನೆ ಸಂಘ ಸಂಸ್ಥೆ ಪದಾಧಿಕಾರಿಗಳು, ಮುಖಂಡರು ಹಾಗೂ ಅಧಿಕಾರಿಗಳ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಾರ್ವಜನಿಕ ಸ್ಥಳಗಳಲ್ಲಿ ಗೌರಿ ಗಣೇಶ ಪ್ರತಿಷ್ಠಾಪನೆ, ವಿವಿಧ ಕಾರ್ಯಕ್ರಮ ಆಯೋಜನೆ, ವಿಸರ್ಜನಾ ಮೆರವಣಿಗೆಗೆ ಪರವಾನಗಿ ನೀಡಲು ತಾಲೂಕು ಮಟ್ಟದಲ್ಲಿ ತಹಸೀಲ್ದಾರ್ ಅಧ್ಯಕ್ಷತೆಯಲ್ಲಿ ವಿವಿಧ ಅಧಿಕಾರಿಗಳನ್ನೊಳಗೊಂಡ ಏಕಗವಾಕ್ಷಿ ಸಮಿತಿ ಕಾರ್ಯನಿರ್ವಹಿಸುತ್ತಿದೆ. ಈ ಸಮಿತಿಗೆ ಆಯೋಜಕರು ಅರ್ಜಿ ಸಲ್ಲಿಸಿ ಅನುಮತಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ ಎಂದರು.

ಸಾರ್ವಜನಿಕ ಸ್ಥಳಗಳಲ್ಲಿ ಗಣೇಶ ಪ್ರತಿಷ್ಠಾಪಿಸುವವರು ಯಾವುದೇ ಅವಘಡಕ್ಕೆ ಆಸ್ಪದವಾಗದಂತೆ ಮುನ್ನೆಚ್ಚರಿಕೆ ಹಾಗೂ ಸುರಕ್ಷತಾ ಕ್ರಮಗಳನ್ನು ಖಾತರಿಗೊಳಿಸಬೇಕು. ವಿದ್ಯುತ್ ಸಂಪರ್ಕ, ದೀಪಾಲಂಕಾರ ಸಂದರ್ಭ ಸುರಕ್ಷಿತ ಕ್ರಮಗಳನ್ನು ಅನುಸರಿಸಬೇಕು. ಏಕಗವಾಕ್ಷಿ ಸಮಿತಿಯಲ್ಲಿರುವ ವಿದ್ಯುತ್ ಸರಬರಾಜು ನಿಗಮದ ಅಧಿಕಾರಿಗಳು ಈ ಬಗ್ಗೆ ಪರಿಶೀಲಿಸಬೇಕು ಎಂದರು. ನಿಗದಿಪಡಿಸಿರುವ ಸ್ಥಳಗಳಲ್ಲಿ ಮಾತ್ರ ಗಣೇಶ ವಿಸರ್ಜನೆ ಮಾಡಬೇಕು. ವಿಸರ್ಜನೆ ಸಂದರ್ಭ ದಲ್ಲೂ ಸುರಕ್ಷತಾ ಕ್ರಮಗಳನ್ನು ಪಾಲಿಸಬೇಕು. ಸ್ಥಳೀಯ ಆಡಳಿತ, ಪೊಲೀಸ್ ಅಧಿಕಾರಿಗಳಿಗೆ ಮುಂಚಿತವಾಗಿ ಮಾಹಿತಿ ನೀಡಬೇಕು. ಏಕಗವಾಕ್ಷಿ ಸಮಿತಿ ಗಮನಕ್ಕೂ ತರಬೇಕು. ಸಮಿತಿಯಲ್ಲಿರುವ ಅಧಿಕಾರಿಗಳು ಗಣೇಶ ಉತ್ಸವ ಸಂಬಂಧ ಆಯೋಜಕರಿಗೆ ಸೂಕ್ತ ಮಾರ್ಗದರ್ಶನ ಮಾಡಬೇಕು ಎಂದರು.

ಪರಿಸರ ಸ್ನೇಹಿಯಾಗಿ ಗಣೇಶ ಚತುರ್ಥಿ ಆಚರಿಸಬೇಕು. ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿಒಪಿ), ಬಣ್ಣ ಲೇಪಿತ ಮೂರ್ತಿಗಳನ್ನು ನೀರಿನಲ್ಲಿ ವಿಸರ್ಜಿಸುವುದರಿಂದ ನೈಸರ್ಗಿಕ ಜಲ ಮೂಲಗಳು ಕಲುಷಿತಗೊಂಡು ಪ್ರಾಣಿ, ಪಕ್ಷಿ ಜಲಚರಗಳ ಜೀವಕ್ಕೆ ಅಪಾಯವಾಗುತ್ತದೆ. ಹೀಗಾಗಿ ಬಣ್ಣ ರಹಿತ ಮಣ್ಣಿನ ನೈಸರ್ಗಿಕ ಮೂರ್ತಿಗಳನ್ನು ಪ್ರತಿಷ್ಠಾಪಿಸಬೇಕು. ನಿಷೇಧಿತ ಪ್ಲಾಸ್ಟಿಕ್ ವಸ್ತುಗಳನ್ನು ಬಳಸಬಾರದು. ಮೂರ್ತಿ ವಿಸರ್ಜನೆ ಸಂದರ್ಭ ಅಲಂಕಾರಿಕ ವಸ್ತುಗಳು, ಹೂ, ಹಣ್ಣು ಇನ್ನಿತರ ಪದಾರ್ಥಗಳನ್ನು ಪ್ರತ್ಯೇಕಿಸಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಜಿಲ್ಲಾ ಅಗ್ನಿಶಾಮಕ ದಳ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ, ಪರಿಸರ ಅಧಿಕಾರಿಗಳು ಗಣೇಶ ಹಬ್ಬದ ಸಂದರ್ಭದಲ್ಲಿ ಅನುಸರಿಸಬೇಕಿರುವ ಮುಂಜಾಗ್ರತಾ ಕ್ರಮಗಳ ಬಗ್ಗೆ ವಿವರಿಸಿದರು.

ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ, ಎಡಿಸಿ ಗೀತಾ ಹುಡೇದ, ಎಸಿ ಮಹೇಶ್, ಡಿವೈಎಸ್‌ಪಿ ಲಕ್ಷ್ಮಯ್ಯ, ಸೋಮಣ್ಣಗೌಡ, ತಹಶೀಲ್ದಾರರು, ತಾಪಂ ಇಓಗಳು, ನಗರಸಭೆ, ಪುರಸಭೆ, ಪಪಂ ಆಯುಕ್ತರು, ಮುಖ್ಯಾಧಿಕಾರಿಗಳು, ಇತರೆ ಇಲಾಖೆಗಳ ಅಧಿಕಾರಿಗಳು, ಜಿಲ್ಲೆಯ ಗಣೇಶ ಮೂರ್ತಿ ಪ್ರತಿಷ್ಠಾಪನೆ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಇತರೆ ಮುಖಂಡರು ಸಭೆಯಲ್ಲಿ ಉಪಸ್ಥಿತರಿದ್ದರು.

ಲೋಕ್ ಅದಾಲತ್‌ನಲ್ಲಿ 16,035 ಪ್ರಕರಣ ಇತ್ಯರ್ಥ

ಜಿಲ್ಲಾ ನ್ಯಾಯಾಧೀಶರಾದ ಬಿ.ಎಸ್.ಭಾರತಿ ಮಾಹಿತಿ



ಚಾಮರಾಜನಗರ, ಸೆ.14– ಜನಸಾಮಾನ್ಯರ ಅನುಕೂಲಕ್ಕಾಗಿ ಶೀಘ್ರ ಪ್ರಕರಣಗಳು ಇತ್ಯರ್ಥವಾಗಬೇಕು ಎಂಬ ಸದುದ್ದೇಶದಿಂದ ಕಳೆದ ಸೆ.9ರಂದು ನಡೆದ ಮೆಗಾ ಲೋಕ್ ಅದಾಲತ್‌ನಲ್ಲಿ ಜಿಲ್ಲೆಯಲ್ಲಿ ಒಟ್ಟು 16,035 ಪ್ರಕರಣಗಳು ಇತ್ಯರ್ಥಗೊಂಡಿವೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್.ಭಾರತಿ ತಿಳಿಸಿದರು.

ನಗರದ ಜಿಲ್ಲಾ ನ್ಯಾಯಾಲಯ ಆವರಣದ ವ್ಯಾಜ್ಯ ಪೂರ್ವ ಪರಿಹಾರ ಕೇಂದ್ರದಲ್ಲಿ ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದ ಜಿಲ್ಲಾ ನ್ಯಾಯಾಧೀಶರು ಮೆಗಾ ಲೋಕ್ ಅದಾಲತ್‌ನಲ್ಲಿ 2,431 ನ್ಯಾಯಾಲಯದ ಪ್ರಕರಣಗಳು ಹಾಗೂ 13604 ವ್ಯಾಜ್ಯ ಪೂರ್ವ ಪ್ರಕರಣಗಳು ಸೇರಿದಂತೆ ಒಟ್ಟಾರೆ 16,035 ಪ್ರಕರಣಗಳು ಬಗೆಹರಿದಿವೆ. ಒಟ್ಟು 7,72,18,992 ರೂ. ದಂಡ ವಸೂಲಿ, ಪರಿಹಾರ, ವಿಮೆ ಮೌಲ್ಯ ಒಳಗೊಂಡಿದೆ ಎಂದರು.

ಚಾಮರಾಜನಗರದಲ್ಲಿ 804 ನ್ಯಾಯಾಲಯದ ಪ್ರಕರಣಗಳು, 7,654 ವ್ಯಾಜ್ಯ ಪೂರ್ವ ಪ್ರಕರಣಗಳು ಸೇರಿ 8,458 ಪ್ರಕರಣಗಳು, ಯಳಂದೂರಲ್ಲಿ 236 ನ್ಯಾಯಾಲಯದ ಪ್ರಕರಣಗಳು, 858 ವ್ಯಾಜ್ಯ ಪೂರ್ವ ಪ್ರಕರಣಗಳು ಸೇರಿ 1,094 ಪ್ರಕರಣಗಳು, ಕೊಳ್ಳೇಗಾಲದಲ್ಲಿ 1,148 ನ್ಯಾಯಾಲಯದ ಪ್ರಕರಣಗಳು, 3,732 ವ್ಯಾಜ್ಯ ಪೂರ್ವ ಪ್ರಕರಣಗಳು ಸೇರಿ 4,880 ಪ್ರಕರಣಗಳು ಗುಂಡ್ಲುಪೇಟೆಯಲ್ಲಿ 243 ನ್ಯಾಯಾಲಯದ ಪ್ರಕರಣಗಳು, 1,360 ವ್ಯಾಜ್ಯ ಪೂರ್ವ ಪ್ರಕರಣಗಳು ಸೇರಿ 1,603 ಪ್ರಕರಣಗಳು ಇತ್ಯರ್ಥಗೊಂಡಿವೆ ಎಂದು ತಿಳಿಸಿದರು.

ಲೋಕ್ ಅದಾಲತ್‌ನಲ್ಲಿ 20 ವರ್ಷಕ್ಕೂ ಹೆಚ್ಚಿನ ಲಿಟಿಗೇಶನ್ ಪ್ರಕರಣ ರಾಜಿಯಿಂದ ಬಗೆಹರಿದಿದೆ. ಅಲ್ಲದೇ ದಾಂಪತ್ಯ ಕಲಹದ 3 ವ್ಯಾಜ್ಯ ಪೂರ್ವ ಪ್ರಕರಣಗಳು ಸಹ ಇತ್ಯರ್ಥವಾಗಿದೆ. ಇದರಲ್ಲಿ ಚಾಮರಾಜನಗರದಲ್ಲಿ 2, ಕೊಳ್ಳೇಗಾಲದ 1 ಪ್ರಕರಣ ಸೇರಿವೆ. ಕಳೆದ ಜು.8ರಂದು ನಡೆದ ಲೋಕ್ ಅದಾಲತ್‌ನಲ್ಲಿ ಇತ್ಯರ್ಥವಾದ ಪ್ರಕರಣಗಳಿಗಿಂತ ಸೆ.9ರಂದು ನಡೆದ ಅದಾಲತ್‌ನಲ್ಲಿ ಹೆಚ್ಚಿನ ಪ್ರಕರಣಗಳು ವಿಲೇವಾರಿಯಾಗಿದೆ. ಇದರಿಂದ ಜನಸಾಮಾನ್ಯರಿಗೆ ಅನುಕೂಲವಾಗಿದೆ. ನ್ಯಾಯಾಲಯಗಳ ಮೇಲಿನ ಪ್ರಕರಣಗಳ ಹೊರೆ ತಗ್ಗಿದೆ. ಲೋಕ್ ಅದಾಲತ್ ಯಶಸ್ವಿಗೆ ಶ್ರಮಿಸಿದ ಎಲ್ಲಾ ನ್ಯಾಯಾಧೀಶರು, ವಕೀಲರು, ನ್ಯಾಯಾಲಯದ ಸಿಬ್ಬಂದಿ, ಜಿಲ್ಲಾಡಳಿತ, ಜಿಪಂ, ಪೊಲೀಸ್, ಕಂದಾಯ, ಅಬಕಾರಿ, ಕಾರ್ಮಿಕ ಇಲಾಖೆ, ಆಹಾರ ಇಲಾಖೆ, ಇತರ ಇಲಾಖೆಗಳು, ಮಾಧ್ಯಮ ಪ್ರತಿನಿಧಿಗಳಿಗೆ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಶ್ರೀಧರ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್, ಪ್ರಧಾನ ಕಾರ್ಯದರ್ಶಿ ಎನ್.ಕೆ.ವಿರೂಪಾಕ್ಷ ಉಪಸ್ಥಿತರಿದ್ದರು.

ಇಂದು ಜನಸಂಪರ್ಕ ಸಭೆ

ಚಾಮರಾಜನಗರ, ಸೆ.14– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು ಮೈಸೂರು ವಿಭಾಗದ ಅಧೀಕ್ಷಕ ಇಂಜಿನಿಯರ್ ಅವರ ಅಧ್ಯಕ್ಷತೆಯಲ್ಲಿ ಸೆ.15ರಂದು ಮಧ್ಯಾಹ್ನ 3 ರಿಂದ 4 ಗಂಟೆವರೆಗೆ ಸಂತೇಮರಹಳ್ಳಿ ಉಪವಿಭಾಗದ ಕಚೇರಿಯಲ್ಲಿ ತ್ರೈಮಾಸಿಕ ಜನಸಂಪರ್ಕ ಸಭೆ ಏರ್ಪಡಿಸಿದೆ.

ಸಾರ್ವಜನಿಕರು ಸಭೆಗೆ ಹಾಜರಾಗಿ ವಿದ್ಯುತ್ ಸಂಬಂಧಿತ ಕುಂದು ಕೊರತೆಗಳಿದ್ದಲ್ಲಿ ಪರಿಹರಿಸಿಕೊಳ್ಳುವಂತೆ ನಿಗಮದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ಕೋರಿದ್ದಾರೆ.

ಬೀದಿನಾಯಿ ದಾಳಿ: ಮಗುವಿಗೆ ತೀವ್ರ ಗಾಯ



ಯಳಂದೂರು, ಸೆ.14– ಬೀದಿನಾಯಿ ದಾಳಿಗೆ ಮಗು ತೀವ್ರ ಗಾಯಗೊಂಡಿರುವ ಘಟನೆ ತಾಲೂಕಿನ ಯರಿಯೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಉಪ್ಪಾರ ಬಡಾವಣೆ ನಿವಾಸಿ ಚಿಕ್ಕಸ್ವಾಮಿ, ಮೀನಾಕ್ಷಿ ದಂಪತಿ ಪುತ್ರಿ ಶ್ರಾವಣಿ (3) ತೀವ್ರ ಗಾಯಗೊಂಡ ಮಗು. ಈಕೆ ಮನೆ ಬಳಿ ಆಟವಾಡುತ್ತಿದ್ದ ವೇಳೆ ಬೀದಿ ನಾಯಿ ದಾಳಿ ನಡೆಸಿ ಕಚ್ಚಿ ತೀವ್ರವಾಗಿ ಗಾಯಗೊಳಿಸಿದೆ. ತಕ್ಷಣ ಶ್ರಾವಣಿಯನ್ನು ಯಳಂದೂರು ಸಾರ್ವಜನಿಕ ಆಸ್ಪತ್ರೆಗೆ ಕರೆದೊಯ್ದು ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಆಗ್ರಹ: ಗ್ರಾಮದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದೆ. ನಾಯಿಗಳನ್ನು ಹಿಡಿಯುವಂತೆ ಗ್ರಾಪಂಗೆ ಈಗಾಗಲೇ ಸಾಕಷ್ಟು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ವಯಸ್ಕರು ಸೇರಿದಂತೆ ಮಕ್ಕಳ ಮೇಲೆ ಆಗಾಗ್ಗೆ ಬೀದಿ ನಾಯಿಗಳು ದಾಳಿ ನಡೆಸುತ್ತಿವೆ. ಇದರಿಂದ ರಸ್ತೆಯಲ್ಲಿ ಓಡಾಡಲು ಭಯ ಪಡುವಂತಾಗಿದೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ಬೀದಿ ನಾಯಿಗಳನ್ನು ಹಿಡಿಸುವಂತೆ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿರುವ ಪಿಡಿಓ ಮಮತಾ, ಬೀದಿ ನಾಯಿಗಳ ಹಾವಳಿ ಬಗ್ಗೆ ಗ್ರಾಮಸ್ಥರು ದೂರು ನೀಡಿದ್ದಾರೆ. ಈ ಬಗ್ಗೆ ಕ್ರಮ ಕೈಗೊಂಡು ಆದಷ್ಟು ಬೇಗ ಬೀದಿ ನಾಯಿಗಳ ಹಾವಳಿಗೆ ಕಡಿವಾಣ ಹಾಕಲಾಗುವುದು ಎಂದು ತಿಳಿಸಿದ್ದಾರೆ.

ಬೆನಕನ ಅಮಾವಾಸ್ಯೆ ಹಿನ್ನೆಲೆ: ಮಾದಪ್ಪನಿಗೆ ಕುಂಭಾಭಿಷೇಕ



ಹನೂರು, ಸೆ.14– ಪ್ರಸಿದ್ಧ ಯಾತ್ರಾ ಸ್ಥಳ ಮಲೆ ಮಹದೇಶ್ವರ ಬೆಟ್ಟದ ಮಾದಪ್ಪನ ಸನ್ನಿಧಿಯಲ್ಲಿ ಬೆನಕನ ಅಮಾವಾಸ್ಯೆ ಪ್ರಯುಕ್ತ ಗುರುವಾರ ಸಾಲೂರು ಬೃಹನ್ಮಠಾಧ್ಯಕ್ಷ ವಿದ್ವಾನ್ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಸಮ್ಮುಖದಲ್ಲಿ ಸ್ವಾಮಿಗೆ ವಿಧಿ ವಿಧಾನಗಳೊಂದಿಗೆ ಕುಂಭಾಭಿಷೇಕ ನೆರವೇರಿಸಲಾಯಿತು.

ಅಮಾವಾಸ್ಯೆ ಹಿನ್ನೆಲೆಯಲ್ಲಿ ದೇಗುಲದ ಗರ್ಭಗುಡಿ ಸೇರಿದಂತೆ ದೇವಸ್ಥಾನದ ಹೊರಾಂಗಣ, ಬಸವ, ರುದ್ರಾಕ್ಷಿ ಹಾಗೂ ಹುಲಿವಾಹನ ಉತ್ಸವ ವಾಹನಗಳನ್ನು ವಿವಿಧ ಪುಷ್ಪ ಹಾಗೂ ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ಸಂಪ್ರದಾಯದಂತೆ ಬೇಡಗಂಪಣ ಅರ್ಚಕರಿಂದ ಸ್ವಾಮಿಗೆ ಎಣ್ಣೆ ಮಜ್ಜನ ಸೇವೆ ಹಾಗೂ ಕುಂಭಾಭಿಷೇಕ ನೆರವೇರಿಸಲಾಯಿತು.

108 ಕುಂಭಕಳಶ ಹೊತ್ತ ಅರ್ಚಕರು: ಗುರುವಾರ ಬೆಳಗ್ಗೆ ಬೇಡಗಂಪಣ ಸಮುದಾಯದ 108 ಅರ್ಚಕರು ಮಂಗಳವಾದ್ಯ, ಸತ್ತಿಗೆ, ಸರಪಾನಿ, ಛತ್ರಿ, ಚಾಮರದೊಂದಿಗೆ ದೇಗುಲದ ಸಮೀಪವಿರುವ ಮಜ್ಜನ ಬಾವಿಗೆ ತೆರಳಿ ಶಿವ ಪಾರ್ವತಿ ವಿಗ್ರಹಕ್ಕೆ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಹುಲಿವಾಹನ, ಬಸವ ಹಾಗೂ ರುದ್ರಾಕ್ಷಿ ವಾಹನಗಳು ಬಾವಿಯ ಸುತ್ತಲು ಪ್ರದಕ್ಷಿಣೆ ಹಾಕಿದವು. ಬಳಿಕ ಕಳಶಗಳಿಗೆ ನೀರು ತುಂಬಿ ಪೂಜೆ ಸಲ್ಲಿಸಿದ 108 ಕುಂಭಕಳಶವನ್ನು ಹೊತ್ತ ಅರ್ಚಕರು ಮೆರವಣಿಗೆ ಮೂಲಕ ದೇಗುಲಕ್ಕೆ ಆಗಮಿಸಿ ಪ್ರದಕ್ಷಣೆ ಹಾಕಿದರು. ನಂತರ ಕುಂಭ ಕಳಸವನ್ನು ಗರ್ಭಗುಡಿಗೆ ತಂದು ವಿಶೇಷ ಪೂಜೆ ಸಲ್ಲಿಸಿ ಸ್ವಾಮಿಗೆ ಅಭಿಷೇಕ ನೆರವೇರಿಸಿ ಮಹಾಮಂಗಳಾರತಿ ಮಾಡಲಾಯಿತು.

ಎಣ್ಣೆ ಮಜ್ಜನ ಸೇವೆ: ಅಮಾವಾಸ್ಯೆ ಹಿನ್ನೆಲೆ ಬುಧವಾರ ರಾತ್ರಿ ಮಾದಪ್ಪನ ಸನ್ನಿಧಿಯಲ್ಲಿ ಸ್ವಾಮಿಗೆ ಬೇಡಗಂಪಣ ಅರ್ಚಕರು ಎಣ್ಣೆ ಮಜ್ಜನ ಸೇವೆ ನೆರವೇರಿಸಿದರು. ಗುರುವಾರ ಮುಂಜಾನೆ 3.30ರಿಂದ 6 ಗಂಟೆವರೆಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ 108 ಬೇಡಗಂಪಣ ಅರ್ಚಕರಿಂದ ಮಾದಪ್ಪನಿಗೆ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಸಂಪ್ರದಾಯಕ ಕುಂಭಾಭಿಷೇಕ ನೆರವೇರಿಸಲಾಯಿತು.

ವಿಜ್ಞಾನ ವಸ್ತು ಪ್ರದರ್ಶನ: ಸಿಂಚನಾಗೆ 3ನೇ ಸ್ಥಾನ



ಚಾಮರಾಜನಗರ, ಸೆ.14– ನವೋದಯ ವಿದ್ಯಾಲಯ ಸಮಿತಿಯು ಜವಾಹರ್ ನವೋದಯ ವಿದ್ಯಾಲಯ ಗಾಸಿಂಯಾಬಾದ್‌ನಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನದಲ್ಲಿ ತಾಲೂಕಿನ ಹೊಂಡರಬಾಳು ಜವಾಹರ್ ನವೋದಯ ವಿದ್ಯಾಲಯದ ವಿದ್ಯಾರ್ಥಿನಿ ಎಸ್.ಸಿಂಚನಾ 3ನೇ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾಳೆ. ಅಲ್ಲದೇ ಎನ್‌ಸಿಇಆರ್‌ಟಿ ನಡೆಸಲಿರುವ ರಾಷ್ಟ್ರೀಯ ಮಟ್ಟದ ವಸ್ತು ಪ್ರದರ್ಶನಕ್ಕೆ ಆಯ್ಕೆ ಆಗಿದ್ದಾಳೆ. ಬ್ಯಾಟರಿ ರಹಿತ ಹಗಲು ದೀಪದ ವ್ಯವಸ್ಥೆಯ (battery less day lighting system) ಮಾದರಿಯನ್ನು ಇಲ್ಲಿಯ ಜೀವಶಾಸ್ತ್ರ ಅಧ್ಯಾಪಕ ಟಿ.ಆರ್. ಶಶಿಧರ ಮಾರ್ಗದರ್ಶನದಲ್ಲಿ ಪ್ರದರ್ಶಿಸಲಾಗಿತ್ತು. ವಿದ್ಯಾರ್ಥಿನಿ ಸಿಂಚನಾ ಗುಂಡ್ಲುಪೇಟೆಯ ಸೋಮಶೇಖರ ಮತ್ತು ಬಿ.ಎಂ.ರೇಖಾ ಅವರ ಪುತ್ರಿ. ವಿದ್ಯಾರ್ಥಿನಿ ಸಿಂಚನಾಳನ್ನು ವಿದ್ಯಾಲಯದ ಪ್ರಾಂಶುಪಾಲ ಪ್ರಸಾದ್, ಉಪಪ್ರಾಂಶುಪಾಲ ಡಾ. ದಿನೇಶ್ ಹಾಗೂ ಕಾಲೇಜಿನ ಎಲ್ಲಾ ಸಿಬ್ಬಂದಿ ವರ್ಗ ಹಾಗೂ ಪೋಷಕ, ಶಿಕ್ಷಕ ಸಂಘದ ಸದಸ್ಯರು ಅಭಿನಂದಿಸಿದ್ದಾರೆ.

ಬ್ಯಾಂಕ್‌ಗೆ ನಕಲಿ ದಾಖಲೆ ಸಲ್ಲಿಸಿ ಕಾರು ಖರೀದಿ

ಮೈಸೂರು, ಸೆ.14–ಕಾರು ಖರೀದಿಗೆ ಸಾಲ ಪಡೆದು ರಾಷ್ಟ್ರೀಕೃತ ಬ್ಯಾಂಕ್‌ಗೆ ನಕಲಿ ದಾಖಲೆಗಳನ್ನು ಸಲ್ಲಿಸಿ ವಂಚಿಸಿರುವ ಬಗ್ಗೆ ವ್ಯಕ್ತಿಯೋರ್ವನ ವಿರುದ್ಧ ಮೈಸೂರಿನ 4ನೇ ಹೆಚ್ಚುವರಿ ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ಆದೇಶದ ಮೇರೆಗೆ ದೇವರಾಜ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಹಾಸನದ ಕೆ.ಆರ್.ಪುರಂ ನಿವಾಸಿ ಹೆಚ್.ವಿ.ಅರುಣ್ ರಾಜ್(36) ಆರೋಪಕ್ಕೆ ಗುರಿಯಾದವನಾಗಿದ್ದು, ಈತ 2016ರ ಫೆ.26ರಂದು ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ರೆನಾಲ್ಡ್ ಡೆಸ್ಟರ್ ಹೊಸ ಕಾರು ಖರೀದಿಗಾಗಿ ಎಸ್‌ಬಿಐ ಕಾರ್ ಲೋನ್ ಯೋಜನೆಯಡಿ 11.50 ಲಕ್ಷ ರೂ. ಮಧ್ಯಮಾವಧಿ ಲೋನ್ ಪಡೆದಿದ್ದಾನೆ. ನಂತರ ಕೆಎ 49 ಎಂ 4972 ಸಂಖ್ಯೆಯ ಕಾರಿನ ದಾಖಲೆಗಳನ್ನು ಬ್ಯಾಂಕಿಗೆ ಸಲ್ಲಿಸಿದ್ದಾನೆ. ಕರಾರಿನ ಪ್ರಕಾರ ಈತ ಬ್ಯಾಂಕಿಗೆ ತಿಂಗಳಿಗೆ 25 ಸಾವಿರ ರೂ.ಗಳಂತೆ 60 ತಿಂಗಳು ಕಂತು ಪಾವತಿಸಬೇಕಾಗಿತ್ತು.

ಸಾಲ ಪಡೆದ ನಂತರ ಒಂದು ಕಂತನ್ನೂ ಕೂಡ ಕಟ್ಟದ ಕಾರಣ ಬ್ಯಾಂಕ್‌ನವರು ಕಾರನ್ನು ಸೀಜ್ ಮಾಡಲು ಹೋದಾಗ ಸದರಿ ಸಂಸ್ಥೆಯ ಕಾರು ಪತ್ತೆಯಾಗಿಲ್ಲ. ಕಾರಿನ ದಾಖಲೆ ಗಳನ್ನು ಫೋರ್ಜರಿ ಮಾಡಿ ನಕಲಿ ದಾಖಲೆಗಳನ್ನು ಬ್ಯಾಂಕಿಗೆ ನೀಡಿ ವಂಚಿಸಲಾಗಿದೆ ಎಂದು ಬ್ಯಾಂಕಿನ ಡೆಪ್ಯುಟಿ ಮ್ಯಾನೇಜರ್ ಬಿ.ಸಂಜೀವ ಮೂರ್ತಿ ದೂರು ಸಲ್ಲಿಸಿದ್ದು, ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಒಂದನೇ ಪುಟದಿಂದ

ಬಯಲಲ್ಲಿ ಬದುಕುತ್ತಿರುವ ಮಹಿಳೆ!!!

ಕಂಡವರ ಬಳಿ ಕೈಯೊಡ್ಡುತ್ತಿದ್ದಾನೆ. ಆಸ್ತಿಯನ್ನು ಮಕ್ಕಳಿಗೆ ಪಾಲು ಮಾಡಿಕೊಟ್ಟಿದ್ದೇ ತಾನು ಮಾಡಿದ ಮಹಾಪರಾಧ ಎಂದು ಈ ತಂದೆ ತನ್ನನ್ನು ತಾನೇ ಶಪಿಸಿಕೊಳ್ಳುತ್ತಿದ್ದಾನೆ.

ಮತ್ತೊಂದೆಡೆ ಮೈಸೂರು ನಗರ ಪಾಲಿಕೆ ಕಚೇರಿ ಮುಂಭಾಗ ತರಕಾರಿ ಮಾರುವ ಮಹಿಳೆಯೊಬ್ಬಳು ತನ್ನ ಸುಮಾರು 20 ವರ್ಷದ ಪುತ್ರಿಯೊಂದಿಗೆ ಅಗ್ರಹಾರದಲ್ಲಿರುವ ವಾಣಿವಿಲಾಸ ಮಾರುಕಟ್ಟೆ ಬಳಿ ಫುಟ್‌ಪಾತ್‌ನಲ್ಲಿ ಆಶ್ರಯ ಪಡೆದಿದ್ದಾಳೆ. ಈಕೆಯ ಮನೆಯವರು ಯಾವುದೋ ಕಾರಣಕ್ಕಾಗಿ ಆಕೆಯನ್ನು ಮನೆಯಿಂದ ಹೊರಗಟ್ಟಿದ್ದಾರೆ. ವಯಸ್ಸಿಗೆ ಬಂದಿರುವ ಮಗಳೊಂದಿಗೆ ಪ್ರತೀ ನಿತ್ಯ ರಾತ್ರಿ ಸರಿಯಾಗಿ ನಿದ್ದೆಯೂ ಮಾಡದೇ ಮಗಳನ್ನು ನೋಡಿಕೊಂಡು ನರಕಯಾತನೆ ಅನುಭವಿಸುತ್ತಿದ್ದಾಳೆ.

ಮೈಸೂರು ನಗರದಲ್ಲಿ ರಾತ್ರಿ ವೇಳೆ ಫುಟ್‌ಪಾತ್‌ಗಳಲ್ಲಿ ಮಲಗಿರುವವರು ನಮಗೆ ನಿರ್ಗತಿಕರಾಗಿ ಕಂಡು ಬಂದರೂ, ಅವರಲ್ಲಿ ಅನೇಕರು ತಮ್ಮ ಯೌವ್ವನದಲ್ಲಿ ಮೈಮುರಿದು ದುಡಿದು, ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಅವರ ಭವಿಷ್ಯವನ್ನು ರೂಪಿಸಿದ ನಂತರ ಅದೇ ಮಕ್ಕಳಿಂದ ಹೊರದಬ್ಬಿಸಿಕೊಂಡ ಅಮಾಯಕ ಜೀವಗಳು ಎಂಬುದು ಕಳೆದ ರಾತ್ರಿ ಮೈಸೂರು ನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್, ಉಪ ಆಯುಕ್ತೆ ಎಂ.ಜೆ.ರೂಪಾ, ವಲಯ ಕಚೇರಿಗಳ ಅಧಿಕಾರಿಗಳು, ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು ಸೇರಿದಂತೆ ಪಾಲಿಕೆಗೆ ಸಂಬಂಧಿಸಿದ ಎಲ್ಲಾ ವಿಭಾಗದ ಅಧಿಕಾರಿಗಳು, ಸ್ವಯಂ ಸೇವಾ ಸಂಸ್ಥೆಗಳಾದ ಕ್ರೆಡಿಟ್–ಐ, ನೆಹರು ಯುವ ಕೇಂದ್ರ, ಜೆಎಂಜೆ ಚಾರಿಟಬಲ್ ಟ್ರಸ್ಟ್, ಜನ ಜಾಗೃತಿ ಸಾಮಾಜಿಕ ವೇದಿಕೆ, ಮಡಿಲು ಗ್ರಾಮಾಭಿವೃದ್ಧಿ ಸಂಸ್ಥೆ, ಪಂಚಾಯತ್ ರಾಜ್ ಗ್ರಾಮಾಭಿವೃದ್ಧಿ ಮತ್ತು ರೈತರ ಸೇವಾ ಸಂಸ್ಥೆ, ಆರಾಧ್ಯ ಚಾರಿಟಬಲ್ ಟ್ರಸ್ಟ್, ಓಡಿಪಿ ಮತ್ತು ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಕಾರ್ಯಕ್ರಮ (RLHP) ಸಂಸ್ಥೆಗಳ ಕಾರ್ಯಕರ್ತರ ನೆರವಿನೊಂದಿಗೆ ನಡೆಸಿದ ಸಮೀಕ್ಷೆ ವೇಳೆ ಕಂಡು ಬಂದ ಮನ ಕಲಕುವ ದೃಶ್ಯಗಳು.

ಇಂತಹ ಹೀನ ಕೃತ್ಯಗಳನ್ನು ಮನಗಂಡೇ ಸರ್ಕಾರ ಹಿರಿಯ ನಾಗರಿಕರಿಗಾಗಿ ಕೆಲವು ಕಾನೂನುಗಳನ್ನು ರೂಪಿಸಿದೆ. ಮಕ್ಕಳಿಂದ ಕಡೆಗಣಿಸಲ್ಪಟ್ಟ ಹೆತ್ತವರ ನೆರವಿಗೂ ಕಾನೂನಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವು ಇಂತಹ ಹಿರಿಯರಿಗೆ ಉಚಿತವಾಗಿ ಕಾನೂನು ನೆರವು ನೀಡುತ್ತದೆ. ಅದೇ ರೀತಿ ತಾಲೂಕು ಮಟ್ಟದಲ್ಲೂ ಕಾನೂನು ಸೇವಾ ಪ್ರಾಧಿಕಾರವಿದೆ. ಹೆತ್ತವರ ದುಡಿಮೆಯಿಂದ ಶಿಕ್ಷಿತರಾಗಿ ಉತ್ತಮ ಉದ್ಯೋಗವನ್ನು ಪಡೆದು ಕೊನೆಗೆ ಹೆತ್ತವರನ್ನೇ ಬೀದಿ ಪಾಲು ಮಾಡುವ ಮಕ್ಕಳಿಂದ ಹೆತ್ತವರಿಗೆ ರಕ್ಷಣೆ ಒದಗಿಸಲಾಗುತ್ತೆ. ಅವರ ಜೀವನಾಂಶಕ್ಕಾಗಿ ಹಣಕಾಸು ನೆರವನ್ನು ಮಕ್ಕಳಿಂದ ಕೊಡಿಸಲಾಗುತ್ತದೆ. ಕಾನೂನು ಪ್ರಕಾರ ಇಳಿವಯಸ್ಸಿನಲ್ಲಿ ಹೆತ್ತವರ ಆರೈಕೆ ಮಕ್ಕಳ ಕರ್ತವ್ಯ. ಅದು ಮಗನಾದರೂ ಸರಿ, ಮಗಳಾದರೂ ಸರಿ, ಹೆತ್ತವರ ಜವಾಬ್ದಾರಿಯನ್ನು ಹೊರಲೇಬೇಕಾಗುತ್ತದೆ. ಮತ್ತೊಂದೆಡೆ ಹೆತ್ತವರಿಂದ ಆಸ್ತಿ ಪಡೆದು ಅವರನ್ನೇ ಬೀದಿಪಾಲು ಮಾಡುವ ಮಕ್ಕಳಿಂದ ಆಸ್ತಿಯನ್ನು ಹೆತ್ತವರಿಗೆ ವಾಪಸ್ ಕೊಡಿಸಲೂ ಕಾನೂನಿದೆ. ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಇಂತಹ ಸಮಸ್ಯೆಗೆ ಪರಿಹಾರ ದೊರೆಯುತ್ತದೆ. ಅಮಾಯಕರಾದ ಹೆತ್ತವರಿಂದ ಆಸ್ತಿ ಪಡೆದುಕೊಂಡು ಅವರನ್ನೇ ಬೀದಿಗೆ ತಳ್ಳಿದ ಮಕ್ಕಳಿಂದ ಹೆತ್ತವರಿಗೆ ಆಸ್ತಿಯನ್ನು ವಾಪಸ್ ಕೊಡಿಸಿರುವ ಹಾಗೂ ಅವರಿಗೆ ಎಲ್ಲಾ ರೀತಿಯ ರಕ್ಷಣೆಯನ್ನು ಒದಗಿಸಿರುವ ಉದಾಹರಣೆಗಳು ನಮ್ಮ ಮುಂದಿವೆ. ಆದರೆ ಅನೇಕ ಅಮಾಯಕ ಹಿರಿಯರು ಇದನ್ನರಿಯದೇ ಫುಟ್‌ಪಾತ್‌ಗಳಲ್ಲಿ ನರಕವನ್ನು ಅನುಭವಿಸುತ್ತಿದ್ದಾರೆ.

ಕಳೆದ ರಾತ್ರಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಮೈಸೂರು ನಗರ ಪಾಲಿಕೆ ಉಪ ಅಯುಕ್ತೆ ಎಂ.ಜೆ.ರೂಪಾ ಅವರು ಫುಟ್‌ಪಾತ್‌ಗಳಲ್ಲಿ ತಾವು ಕಂಡ ಮನಕಲಕುವ ದೃಶ್ಯಗಳ ಬಗ್ಗೆ ಸಂಕ್ಷಿಪ್ತವಾಗಿ 'ಮೈಸೂರು ಮಿತ್ರ'ನೊಂದಿಗೆ ಹಂಚಿಕೊಂಡರು.

ಕಳೆದ ರಾತ್ರಿ ನಡೆದ ಸಮೀಕ್ಷೆಯಲ್ಲಿ 378 ಮಂದಿ ಫುಟ್‌ಪಾತ್‌ನಲ್ಲಿ ಆಶ್ರಯ ಪಡೆದಿರುವವರನ್ನು ಗುರುತಿಸಲಾಗಿದೆ ಎಂದ ಅವರು, ಅಮಾನವೀಯ ಹಾಗೂ ಮನ ಕಲಕುವ ಅನೇಕ ಪ್ರಸಂಗಗಳು ಬೆಳಕಿಗೆ ಬಂದಿವೆ. ಈ ಹಿರಿಯರಲ್ಲಿ ಅನೇಕರಿಗೆ ಆರೋಗ್ಯ ತಪಾಸಣೆ ನಡೆಸಿ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ. ಹಿರಿಯರ ನೆರವಿಗೆ ಹಲವು ಇಲಾಖೆಗಳು ಕಾರ್ಯ ನಿರ್ವಹಿಸುತ್ತಿದ್ದು, ಆಯಾ ಇಲಾಖೆಗಳಿಗೆ ಸಂಬಂಧಿಸಿದಂತೆ ಅಗತ್ಯ ನೆರವು ನೀಡಲು ಕ್ರಮ ವಹಿಸಲಾಗುವುದು. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಮೂಲಕ ಹಿರಿಯ ಜೀವಿಗಳಿಗೆ ಕಾನೂನು ಪ್ರಕಾರ ನ್ಯಾಯ ಒದಗಿಸುವ ಪ್ರಯತ್ನವನ್ನೂ ಕೂಡ ಮಾಡಲಾಗುವುದು. ತಾತ್ಕಾಲಿಕವಾಗಿ ಅವರಿಗೆ ಆಶ್ರಯ ಕಲ್ಪಿಸುವ ಕೆಲಸವನ್ನು ಈಗ ಮಾಡುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಈ ನಿರಾಶ್ರಿತರನ್ನು ವರ್ಗಾವಾರು ವಿಂಗಡಿಸಿ, ಅವರಲ್ಲಿ ಯಾರ್ಯಾರನ್ನು ಅವರ ಮನೆಗೆ ತಲುಪಿಸಲು ಸಾಧ್ಯವೋ ಆ ಕೆಲಸವನ್ನೂ ಮಾಡಲಾಗುತ್ತದೆ. ಅದೇ ರೀತಿ ಕಾನೂನಿನ ಸಹಕಾರದಿಂದ ಯಾರಿಗೆ ರಕ್ಷಣೆ ಅವಶ್ಯವಿದೆಯೋ ಅಂತಹವರಿಗೆ ಕಾನೂನು ಸೇವಾ ಪ್ರಾಧಿಕಾರದ ಮೂಲಕ ಉಚಿತವಾಗಿ ರಕ್ಷಣೆ ನೀಡಲಾಗುವುದು. ನಗರಪಾಲಿಕೆಯೊಂದಿಗೆ ಈ ವಿಚಾರದಲ್ಲಿ ಅನೇಕ ಸ್ವಯಂ ಸೇವಾ ಸಂಸ್ಥೆಗಳು ಕೈಜೋಡಿಸುತ್ತಿವೆ ಎಂದ ಅವರು, ಮಕ್ಕಳಿಂದ ಹೊರದಬ್ಬಲ್ಪಟ್ಟ ಕೆಲವು ಹಿರಿಯರು 'ನಮ್ಮ ಮಕ್ಕಳು ಒಳ್ಳೆಯ ಸ್ಥಿತಿಯಲ್ಲಿದ್ದಾರೆ. ಅವರೊಂದಿಗೆ ನಾವಿರುವುದು ಸರಿ ಬರುವುದಿಲ್ಲ' ಎಂದು ಹೇಳುವ ಮೂಲಕ ತಮ್ಮನ್ನು ಬೀದಿಪಾಲು ಮಾಡಿದ ಮಕ್ಕಳನ್ನೇ ಬಿಟ್ಟುಕೊಡದೇ ಮಾತನಾಡುವುದನ್ನೂ ಕೂಡ ಕಂಡಿದ್ದೇನೆ ಎಂದರು.

ಜನನ ಪ್ರಮಾಣ ಪತ್ರ ಕಡ್ಡಾಯ

ನೋಂದಣಿ (ತಿದ್ದುಪಡಿ) ಕಾನೂನು ಶಿಕ್ಷಣ ಸಂಸ್ಥೆಗೆ ಪ್ರವೇಶ, ಡ್ರೈವಿಂಗ್ ಲೈಸೆನ್ಸ್ ನೀಡಿಕೆ, ಮತದಾರರ ಪಟ್ಟಿ ಸಿದ್ಧಪಡಿಸುವುದು, ಆಧಾರ್ ಸಂಖ್ಯೆ, ಮದುವೆ ನೋಂದಣಿ ಅಥವಾ ಸರ್ಕಾರಿ ಉದ್ಯೋಗಕ್ಕೆ ನೇಮಕಾತಿ ಮುಂತಾದ ಹಲವಾರು ಉದ್ದೇಶಗಳಿಗಾಗಿ ಜನನ ಪ್ರಮಾಣಪತ್ರವನ್ನು (Birth Certificate) ಒಂದೇ ದಾಖಲೆಯಾಗಿ ಬಳಸಲು ಅನುಮತಿಸುತ್ತದೆ. ನೋಂದಾಯಿತ ಜನನ ಮತ್ತು ಮರಣಗಳ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ದಾಖಲೆಯನ್ನು ರಚಿಸಲು ಕಾನೂನು ಸಹಾಯ ಮಾಡುತ್ತದೆ. ಇದು ಅಂತಿಮವಾಗಿ ಡಿಜಿಟಲ್ ನೋಂದಣಿ ಮೂಲಕ ಸಮರ್ಥ ಮತ್ತು ಪಾರದರ್ಶಕ ಸಾರ್ವಜನಿಕ ಸೇವೆಗಳು ಮತ್ತು ಸಾಮಾಜಿಕ ಪ್ರಯೋಜನಗಳನ್ನು ಖಚಿತಪಡಿಸುತ್ತದೆ.

ಇದಲ್ಲದೆ ಮತದಾರ ಪಟ್ಟಿಯೊಂದಿಗೆ ಜನನ/ಮರಣ ಮಾಹಿತಿ ಜೋಡಣೆಯಿಂದ ವೋಟರ್ ಲಿಸ್ಟ್ ಪರಿಷ್ಕರಣೆ ಸ್ವಯಂಚಾಲಿತವಾಗಲಿದೆ. ಯಾವುದೇ ವ್ಯಕ್ತಿಗೆ 18 ವರ್ಷ ವಯಸ್ಸು ತುಂಬುತ್ತಲೇ ಮತದಾರರ ಗುರುತಿನ ಚೀಟಿ (ವೋಟರ್ ಐಡಿ) ಮಾಡಿಸಿಕೊಳ್ಳುವಂತೆ ಚುನಾವಣಾ ಆಯೋಗದ ಕಡೆಯಿಂದ ಸೂಚನೆ ಬರಲಿದೆ. ಅದೇ ರೀತಿ ಯಾವುದೇ ವ್ಯಕ್ತಿ ಮೃತಪಟ್ಟಲ್ಲಿ, ಚುನಾವಣಾ ಆಯೋಗವು ತಾನೇ ಆ ವ್ಯಕ್ತಿಯ ಹೆಸರನ್ನು ಮತದಾರ ಪಟ್ಟಿಯಿಂದ ಡಿಲೀಟ್ ಮಾಡಲಿದೆ. ಆದರೆ ಇದಕ್ಕೂ ಮುನ್ನ ಆ ವ್ಯಕ್ತಿಯ ಕುಟುಂಬದ ಸದಸ್ಯರು 15 ದಿನದೊಳಗೆ ಮರಣದ ವಿಷಯವನ್ನು ದೃಢಪಡಿಸಬೇಕಾಗುತ್ತದೆ. ಯಾವುದೇ ಜನನ ಅಥವಾ ಮರಣದ ನಂತರ ರಿಜಿಸ್ಟ್ರಾರ್‌ಗೆ ವಿಳಂಬವಾದ ಮಾಹಿತಿಯ ಸಂದರ್ಭದಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಅಥವಾ ಉಪವಿಭಾಗೀಯ ಮ್ಯಾಜಿಸ್ಟ್ರೇಟ್ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟ್‌ನಿಂದ ಅಧಿಕಾರ ಪಡೆದ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್‌ನ ಮ್ಯಾಜಿಸ್ಟ್ರೇಟ್ ಅಥವಾ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ನಿಂದ ಆದೇಶದ ಅಧಿಕಾರವನ್ನು ಬದಲಾಯಿಸಲು ಕಾಯಿದೆ ಒದಗಿಸುತ್ತದೆ. 30 ದಿನಗಳ ನಂತರ ರಿಜಿಸ್ಟ್ರಾರ್‌ಗೆ ಯಾವುದೇ ಜನನ ಅಥವಾ ಮರಣದ ವಿಳಂಬದ ಮಾಹಿತಿಯ ಸಂದರ್ಭದಲ್ಲಿ ನೋಟರಿ ಸಾರ್ವಜನಿಕರ ಮುಂದೆ ಮಾಡಿದ ಅಫಿಡವಿಟ್‌ಗೆ ಬದಲಾಗಿ ಅದು ಸಂಭವಿಸಿದ ಒಂದು ವರ್ಷ ಮತ್ತು ಸ್ವಯಂ–ದೃಢೀಕರಿಸಿದ ದಾಖಲೆಯನ್ನು ಸಲ್ಲಿಸಬಹುದು. ಆದರೆ ಅದು ಸಂಭವಿಸಿದ ಒಂದು ವರ್ಷದೊಳಗೆ ಸಲ್ಲಿಸಬೇಕಾಗುತದೆ.

ದತ್ತು ಪಡೆದ, ಅನಾಥ, ಪರಿತ್ಯಕ್ತ, ಶರಣಾದ, ಬಾಡಿಗೆ ಮಗು ಮತ್ತು ಮಗುವಿನ ನೋಂದಣಿ ಪ್ರಕ್ರಿಯೆಯನ್ನು ಏಕ ಪೋಷಕರು ಅಥವಾ ಅವಿವಾಹಿತ ತಾಯಿಗೆ ನೋಂದಾಯಿಸಲು ಶಾಸನವು ಒದಗಿಸುತ್ತದೆ ಮತ್ತು ಎಲ್ಲಾ ವೈದ್ಯಕೀಯ ಸಂಸ್ಥೆಗಳು ಮರಣದ ಕಾರಣದ ಬಗ್ಗೆ ರಿಜಿಸ್ಟ್ರಾರ್‌ಗೆ ಪ್ರಮಾಣಪತ್ರವನ್ನು ನೀಡುವುದನ್ನು ಕಡ್ಡಾಯಗೊಳಿಸುತ್ತದೆ ಮತ್ತು ಹತ್ತಿರದ ಸಂಬಂಧಿಗೆ ಅದೇ ಪ್ರತಿ. ವಿಪತ್ತು ಅಥವಾ ಸಾಂಕ್ರಾಮಿಕ ಸಂದರ್ಭದಲ್ಲಿ ಸಾವಿನ ತ್ವರಿತ ನೋಂದಣಿ ಮತ್ತು ಪ್ರಮಾಣಪತ್ರಗಳ ವಿತರಣೆಗಾಗಿ ವಿಶೇಷ "ಸಬ್–ರಿಜಿಸ್ಟ್ರಾರ್"ಗಳನ್ನು ನೇಮಿಸಲು, ಜನ್ಮ ನೋಂದಣಿಯ ಸಂದರ್ಭದಲ್ಲಿ ಪೋಷಕರು ಮತ್ತು ಮಾಹಿತಿದಾರರ ಆಧಾರ್ ಸಂಖ್ಯೆಗಳನ್ನು ಸಂಗ್ರಹಿಸಲು ಇದು ಒದಗಿಸುತ್ತದೆ. ರಿಜಿಸ್ಟ್ರಾರ್ ಅಥವಾ ಜಿಲ್ಲಾ ರಿಜಿಸ್ಟ್ರಾರ್‌ರ ಯಾವುದೇ ಕ್ರಮ ಅಥವಾ ಆದೇಶದಿಂದ ಬಾಧಿತರಾದ ಸಾಮಾನ್ಯ ಸಾರ್ವಜನಿಕರ ಕುಂದುಕೊರತೆಗಳನ್ನು ಪರಿಹರಿಸುವುದನ್ನು ಇದು ಖಚಿತಪಡಿಸುತ್ತದೆ ಮತ್ತು ಕಾಯಿದೆಯಲ್ಲಿ ಒದಗಿಸಲಾದ ದಂಡವನ್ನು ಹೆಚ್ಚಿಸುತ್ತದೆ ಎಂದು ಹೇಳಿದರು.

ದಸರಾ ಗಜಪಡೆ ಸೇರಿದ ಮಾಜಿ ನಾಯಕ 'ಅರ್ಜುನ'

● ಹುಲಿ ಸೆರೆ ಕಾರ್ಯಾಚರಣೆಗೆ ತೆರಳಿದ್ದ ಅರ್ಜುನ ● ಪೂಜೆ ಮಾಡಿ ಬರಮಾಡಿಕೊಂಡ ಅರಣ್ಯ ಸಿಬ್ಬಂದಿ



ಅರ್ಜುನ ಆನೆಯ ಕುಶಲೋಪರಿ ವಿಚಾರಿಸಿದ ಡಿಸಿಎಫ್ ಸೌರಭ್ ಕುಮಾರ್



ಭೀಮ ಆನೆಯನ್ನು ಮುದ್ದಾಡುತ್ತಿರುವ ಅರ್ಜುನ

ಮೈಸೂರು,ಸೆ.14(ಎಂಟಿವೈ)– ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸಿದ ಬಳಿಕ ಹುಲಿ ಸೆರೆ ಕಾರ್ಯಾಚರಣೆಗೆ ಹೆಚ್.ಡಿ. ಕೋಟೆ ತೆರಳಿದ್ದ ಗಜಪಡೆಯ ಮಾಜಿ ನಾಯಕ ಅರ್ಜುನ ಗುರುವಾರ ಮೈಸೂರು ಅರಮನೆ ಆವರಣ ತಲುಪಿತು.

ಪ್ರಸಕ್ತಸಾಲಿನ ದಸರಾ ಮಹೋತ್ಸವದ ಜಂಬೂ ಸವಾರಿ ಮೆರವಣಿಗೆಯ ಮುಂಚೂಣಿಯಲ್ಲಿ ನಿಶಾನೆ ಆನೆಯಾಗಿ ಹೆಜ್ಜೆ ಹಾಕಲು ಆಯ್ಕೆಯಾಗಿರುವ ಅರ್ಜುನನನ್ನು ಸೆ.1ರಂದು ಗಜಪಯಣದ ಮೂಲಕ ಮೈಸೂರಿನ ಅರಣ್ಯ ಭವನಕ್ಕೆ ಕರೆತರಲಾಗಿತ್ತು. ಮೂರು ದಿನ ಮೈಸೂರಿನ ಅರಣ್ಯ ಭವನದಲ್ಲೇ ವಾಸ್ತವ್ಯ ಹೂಡಿದ್ದ ಅರ್ಜುನನ್ನು ಸೆ.4ರಂದು ರಾತ್ರಿ ಹೆಚ್.ಡಿ.ಕೋಟೆ ತಾಲೂಕು ವ್ಯಾಪ್ತಿಯ ನಾಗರಹೊಳೆ ಅಭಯಾರಣ್ಯದ ಮೇಟಿಕುಪ್ಪೆ ವನ್ಯಜೀವಿ ವಲಯಕ್ಕೆ ಸೇರಿರುವ ಕಲ್ಲಟ್ಟಿ ಗ್ರಾಮದಲ್ಲಿ ಬಾಲಕನ ಮೇಲೆ ದಾಳಿ ನಡೆಸಿದ್ದ ಹುಲಿಯ ಸೆರೆ ಕಾರ್ಯಾಚರಣೆಗೆ ಕಳುಹಿಸಲಾಗಿತ್ತು.

ಇದರಿಂದ ಸೆ.5ರಂದು ಅರಣ್ಯ ಭವನದಿಂದ ಅರಮನೆ ಪ್ರವೇಶಿಸಿದ ಗಜಪಡೆಯಲ್ಲಿ ಅರ್ಜುನ ಅವಕಾಶ ವಂಚಿತವಾಗಿತ್ತು. ಕಳೆದ 9 ದಿನದಿಂದಲೂ ಹುಲಿ ಕಾರ್ಯಾಚರಣೆಯಲ್ಲಿ ತೊಡಗಿದ್ದ ಅರ್ಜುನ, ಇಂದು ಬೆಳಗ್ಗೆ ಮೈಸೂರಿಗೆ ವಾಪಸ್ಸಾಗಿದೆ. ಹುಲಿ ಸುಳಿವು ಸಿಗದ ಕಾರಣ ಹಾಗೂ ದಸರಾ ಆರಂಭಕ್ಕೆ ಇನ್ನು ಒಂದು ತಿಂಗಳು ಮಾತ್ರ ಇರುವುದರಿಂದ ಗಜಪಡೆಯಲ್ಲಿ ಹಿರಿಯ ಗಂಡಾನೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಅರ್ಜುನ ಆನೆಯನ್ನು ಮೈಸೂರಿಗೆ ಕರೆತಂದು ತಾಲೀಮು ನೀಡಬೇಕೆಂಬ ಅಭಿಪ್ರಾಯ ಕೇಳಿ ಬಂದ ಹಿನ್ನೆಲೆಯಲ್ಲಿ ಇಂದು ಅರ್ಜುನನನ್ನು ಕರೆತರಲಾಗಿದೆ. ಹೆಚ್.ಡಿ.ಕೋಟೆಯಿಂದ ಲಾರಿ ಮೂಲಕ ಬೆಂಗಾವಲು ವಾಹನದ ಭದ್ರತೆಯಲ್ಲಿ ಮೈಸೂರು ಅರಮನೆಯ ಜಯಮಾರ್ತಾಂಡ ದ್ವಾರಕ್ಕೆ ಆಗಮಿಸಿದ ಅರ್ಜುನನನ್ನು ಅರಣ್ಯಾಧಿಕಾರಿಗಳು ಬರಮಾಡಿಕೊಂಡರು.

ಲಾರಿಯಿಂದ ಕೆಳಗಿಳಿಸಿದ ಬಳಿಕ ಕೋಡಿ ಸೋಮೇಶ್ವರ ದೇವಾಲಯದ ಮುಂದೆ ದೇವಾಲಯದ ಅರ್ಚಕರಿಂದ ಪೂಜೆ ಮಾಡಿಸಿ, ಸ್ವಾಗತಿಸಲಾಯಿತು. ಈ ವೇಳೆ ಡಿಸಿಎಫ್ ಸೌರಭ್ ಕುಮಾರ್, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಡಾ.ಮುಜೀಬ್ ರೆಹಮಾನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೊದಲ ಮಜ್ಜನದಲ್ಲಿ ಮಿಂದೆದ್ದ ಅರ್ಜುನ: ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಅರಮನೆ ಆವರಣಕ್ಕೆ ಆಗಮಿಸಿದ ಅರ್ಜುನನಿಗೆ ಇಂದು ಮೊದಲ ಬಾರಿಗೆ ಅರಮನೆ ಆವರಣದಲ್ಲಿ ಮಜ್ಜನ ಮಾಡಿಸಲಾಯಿತು. ಸುಮಾರು ಒಂದು ಗಂಟೆಗೂ ಹೆಚ್ಚು ಸಮಯ ನೀರಲ್ಲಿ ಮಿಂದೆದ್ದ ಅರ್ಜುನ ಸಂಭ್ರಮಿಸಿತು.

ಭೀಮನನ್ನು ಮುದ್ದಾಡಿದ: ಅರಮನೆ ಆವರಣ ಪ್ರವೇಶಿಸಿದ ನಂತರ ಅರ್ಜುನನನ್ನು ಶೆಡ್‌ನಲ್ಲಿ ವಿರಮಿಸಲು ಕಟ್ಟಿ ಹಾಕಲಾಯಿತು. ಪಕ್ಕದಲ್ಲಿದ್ದ ಭೀಮನನ್ನು ಗಮನಿಸಿದ ಅರ್ಜುನ, ತನಗಿಂತ 40 ವರ್ಷ ಕಿರಿಯ ಆನೆಯಾದ ಭೀಮನನ್ನು ಸೊಂಡಿಲಿನಿಂದ ತಲೆ ಸವರಿ ಮುದ್ದಾಡ ತೊಡಗಿತು. ಅರ್ಧ ಗಂಟೆಗೂ ಹೆಚ್ಚು ಸಮಯ ಭೀಮ ಆನೆಯೊಂದಿಗೆ ಸೋದರತ್ವ ಭಾವದಿಂದ ಮುದ್ದಾಡಿ ಎಲ್ಲರ ಗಮನ ಸೆಳೆಯಿತು. 2017ರಲ್ಲಿ ಮೊದಲ ಬಾರಿಗೆ ಬಂದಿದ್ದ ಭೀಮ ಆನೆಯನ್ನು, ಗಜಪಡೆಯ ಮಾಜಿ ನಾಯಕ, 13 ಬಾರಿ ಅಂಬಾರಿ ಹೊತ್ತು ಸೈ ಎನಿಸಿಕೊಂಡಿದ್ದ ಬಲರಾಮ ಆನೆಯೂ ಮುದ್ದಾಡಿ ಮಾರ್ಗದರ್ಶನ ನೀಡುತ್ತಿತ್ತು. ಈಗ ಅರ್ಜುನ, ಭೀಮನನ್ನು ಮುದ್ದಾಡುತ್ತಾ ಗಮನ ಸೆಳೆಯುತ್ತಿದೆ.

ಅಮಾವಾಸ್ಯೆ ಎಫೆಕ್ಟ್, ಅರಮನೆಯಿಂದ ಹೊರಬರದ ಗಜಪಡೆ

ಗುರುವಾರ ಅಮಾವಾಸ್ಯೆಯಾದ ಹಿನ್ನೆಲೆಯಲ್ಲಿ ದಸರಾ ಗಜಪಡೆಯನ್ನು ತಾಲೀಮಿಗೆ ಅರಮನೆಯಿಂದ ಹೊರಗೆ ಕರೆತರಲಿಲ್ಲ. ಪ್ರತಿ ವರ್ಷವೂ ಅಮಾವಾಸ್ಯೆ ದಿನ ಗಜಪಡೆಗೆ ತಾಲೀಮಿನಿಂದ ವಿನಾಯಿತಿ ನೀಡಲಾಗುತ್ತದೆ. ಮಾವುತ ಹಾಗೂ ಕಾವಾಡಿಗಳು ಆನೆಗಳ ಮೇಲೆ ಇಟ್ಟಿರುವ ನಂಬಿಕೆ ಹಾಗೂ ಬಾಂಧವ್ಯದ ಹಿನ್ನೆಲೆಯಲ್ಲಿ ಅಮಾವಾಸ್ಯೆ ದಿನ ತಾಲೀಮು ನಡೆಸುವುದಕ್ಕೆ ಮಾತ್ರವಲ್ಲದೆ, ಅರಮನೆಯಿಂದ ಹೊರಗೆ ಆನೆಗಳನ್ನು ಕರೆತರಲು ಹಿಂದೇಟು ಹಾಕುವುದರಿಂದ ಇಂದು ಎಲ್ಲಾ ಆನೆಗಳು ಅರಮನೆ ಆವರಣದಲ್ಲೇ ವಿರಮಿಸಿದವು.

ಗಣೇಶ ಚತುರ್ಥಿ, ಈದ್ ಮಿಲಾದ್ ಹಿನ್ನೆಲೆ ಶಾಂತಿ, ಸುವ್ಯವಸ್ಥೆ ದೃಷ್ಟಿಯಿಂದ ಪೊಲೀಸ್ ಆಯುಕ್ತರಿಂದ ಸಭೆ




ಮೈಸೂರು, ಸೆ.14(ಜಿಎ)–ಶಾಂತಿಯುತ ಹಾಗೂ ನಿಯಮಾನುಸಾರ ಗಣಪತಿ ಹಬ್ಬ ಆಚರಿಸುವಂತೆ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಸೂಚಿಸಿದ್ದಾರೆ.

ನಗರದ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಗುರುವಾರ ಹಿಂದೂ ಮತ್ತು ಮುಸ್ಲಿಂ ಮುಖಂಡರ ಶಾಂತಿ ಸಭೆ ನಡೆಸಿದ ಅವರು, ಗಣಪತಿ ಹಬ್ಬ ಮತ್ತು ಈದ್ ಮಿಲಾದ್ ಹಬ್ಬವನ್ನು ಆಚರಿಸುವಾಗ ಶಾಂತಿ ಮತ್ತು ನಿಯಮಗಳನ್ನು ಪಾಲಿಸುವಂತೆ ತಿಳಿಸಿ, ಕಾನೂನು ಸುವ್ಯವಸ್ಥೆ ಕಾಯ್ದುಕೊಳ್ಳುವ ವಿಚಾರದಲ್ಲಿ ಇಲಾಖೆಯೊಂದಿಗೆ ಸಹಕರಿಸುವಂತೆ ತಿಳಿಸಿದರು.

ಈ ಹಿಂದೆ ದೇಶದ ವಿವಿಧ ಭಾಗಗಳಲ್ಲಿ ಗಣಪತಿ ವಿಸರ್ಜನೆ ಸಂದರ್ಭದಲ್ಲಿ ಅನೇಕ ಅವಘಡಗಳು ಸಂಭವಿಸಿರುವ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಕೆಲ ಸೂಚನೆಗಳನ್ನು ನೀಡಿದ್ದಾರೆ. ಅದರಂತೆ ಸೆ.18ರಿಂದ ದೇಶದಾದ್ಯಂತ ಗೌರಿ–ಗಣೇಶ ಹಬ್ಬ ಆಚರಣೆ ಇದ್ದು, ಸೆ.28ರಂದು ಈದ್ ಮಿಲಾದ್ ಇರುವ ಹಿನ್ನೆಲೆಯಲ್ಲಿ ಎರಡು ಧರ್ಮದ ಮುಖಂಡರಿಗೆ ಕೆಲ ಸೂಚನೆ ನೀಡಿದ್ದು, ಅದರಂತೆ ಗಣಪತಿಯನ್ನು ಕೂರಿಸುವವರು ಕಡ್ಡಾಯವಾಗಿ ಚೆಸ್ಕಾಂ, ಪಾಲಿಕೆ ಮತ್ತು ಪೊಲೀಸರ ನೇತೃತ್ವದಲ್ಲಿ ಮೆರವಣಿಗೆ ನಡೆಸಬೇಕು. ಡಿಜೆ ಬಳಕೆಗೆ ಅವಕಾಶವಿಲ್ಲ ಎಂದು ತಿಳಿಸಿದ್ದಾರೆ.

ಸೆ.24ರಂದು ಮೈಸೂರಿನ ಅಶೋಕ ರಸ್ತೆಯಲ್ಲಿ ಅದ್ದೂರಿಯಾಗಿ ಗಣಪತಿ ವಿಸರ್ಜನಾ ಮೆರವಣಿಗೆ ನಡೆಯಲಿದ್ದು, ಈ ವೇಳೆ ಯಾವುದೇ ಅವಘಡಗಳಿಗೆ ಆಸ್ಪದವಾಗದಂತೆ ಎರಡು ಧರ್ಮದ ಮುಖಂಡರ ಸಭೆಯನ್ನು ನಡೆಸಿದ್ದು, ನಿಯಮಗಳನ್ನು ಪಾಲಿಸಲು ಎಲ್ಲರೂ ಸಮ್ಮತಿಸಿದ್ದಾರೆ ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಾಳೆ ಪರಿಸರ ಸ್ನೇಹಿ ಮಣ್ಣಿನ ಗಣಪತಿ ಮೂರ್ತಿ ತಯಾರಿಕೆ ಕುರಿತು ಉಚಿತ ಕಾರ್ಯಾಗಾರ



ಮೈಸೂರು, ಸೆ.14(ಜಿಎ)–ಮೈಸೂರು ಧಾರ್ಮಿಕ ಪ್ರತಿಷ್ಠಾನದಿಂದ ಸೆ.16 ರಿಂದ 24ರವರೆಗೆ ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಮಾಧವ ಕೃಪಾದಲ್ಲಿ ಮೈಸೂರು ಗಣೇಶ ಉತ್ಸವ ಆಯೋಜಿಸಲಾಗಿದ್ದು, ಅದರ ಅಂಗವಾಗಿ ಸೆ.16ರಂದು ಮಧ್ಯಾಹ್ನ 3ರಿಂದ ಪರಿಸರ ಸ್ನೇಹಿ ಮಣ್ಣಿನ ಗಣಪತಿ ಮೂರ್ತಿ ತಯಾರಿಕೆಯ ಉಚಿತ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಉತ್ಸವ ಸಮಿತಿಯ ಚರಣ್ ಶಿವರಾಜ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ಲಾಸ್ಟರ್ ಆಫ್ ಪ್ಯಾರಿಸ್ ಮತ್ತು ಸಿಂಥೆಟಿಕ್ ಬಣ್ಣದ ಗಣೇಶಮೂರ್ತಿಗಳಿಂದ ಪರಿಸರಕ್ಕೆ ಆಗುವ ದುಷ್ಪರಿಣಾಮ ಕುರಿತು ಜಾಗೃತಿ ಮೂಡಿಸುವುದು ಕಾರ್ಯಕ್ರಮದ ಉದ್ದೇಶವಿದ್ದು, ನಗರದ ವಿವಿಧ ಶಾಲೆಗಳ ಸಾವಿರಕ್ಕೂ ಹೆಚ್ಚು ಮಕ್ಕಳಿಗೆ ತರಬೇತಿ ನೀಡುವ ಗುರಿ ಹೊಂದಿದ್ದೇವೆ. ಮೂರ್ತಿಗಳಲ್ಲಿ ಬೀಜದ ಉಂಡೆಗಳನ್ನು ಇರಿಸಲಿದ್ದು, ಅವುಗಳನ್ನು ಮನೆಯಲ್ಲಿ ಪೂಜಿಸಿ ಬಳಿಕ ಗಿಡ ಬೆಳೆಯುವಂತೆ ವಿಸರ್ಜಿಸುವುದಕ್ಕೂ ಪ್ರೋತ್ಸಾಹಿಸಲಿದ್ದೇವೆ ಎಂದರು.

ಉತ್ಸವದ ದಿನದಲ್ಲಿ ಅನೇಕ ಸಾಂಸ್ಕೃತಿಕ ಚಟುವಟಿಕೆ, ಸ್ಪರ್ಧೆಗಳು ಮತ್ತು ಪೂಜಾ ಕಾರ್ಯಗಳು ನಡೆಯಲಿದ್ದು, ಬೃಹತ್ ಮೆರವಣಿಗೆ ಮೂಲಕ ಸೆ.24ರಂದು ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ನಗರದ ವಿವಿಧ 50 ಗಣೇಶ ಪೆಂಡಾಲ್‌ಗಳ ಗಣಪತಿಗಳೊಂದಿಗೆ ಸಾಮೂಹಿಕ ಮೆರವಣಿಗೆ ಮತ್ತು ವಿಸರ್ಜನೆ ಕಾರ್ಯಕ್ರಮ ನಡೆಯಲಿದೆ. ಮಾಹಿತಿಗೆ ಮೊ. 83109 44372 ಸಂಪರ್ಕಿಸಿ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಮಿತಿಯ ಸಂಚಾಲಕ ಎನ್.ಆರ್.ಮಂಜುನಾಥ್, ಸಹ ಸಂಚಾಲಕ ನಿಗಿನ್ ಸದಸ್ಯರಾದ ಸಿ.ಕೆ.ರುದ್ರಮೂರ್ತಿ ಉಪಸ್ಥಿತರಿದ್ದರು.

ಜಂಬೂಸವಾರಿ ಮೆರವಣಿಗೆ; ಕಲಾತಂಡಗಳಿಂದ ಅರ್ಜಿ ಆಹ್ವಾನ



ಮೈಸೂರು,ಸೆ.14(ಪಿಎಂ)– ದಸರಾ ಮಹೋತ್ಸವದ ಅಂಗವಾಗಿ ಅ.24 ರಂದು ನಡೆಯಲಿರುವ ವಿಶ್ವವಿಖ್ಯಾತ ಜಂಬೂಸವಾರಿ ಮೆರವಣಿಗೆಯಲ್ಲಿ ಭಾಗವಹಿಸಲು ರಾಜ್ಯದ ಎಲ್ಲಾ ಜಿಲ್ಲೆಗಳ ಆಸಕ್ತ ಜಾನಪದ ಕಲಾ ತಂಡಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಮೆರವಣಿಗೆಯಲ್ಲಿ ಭಾಗವಹಿಸಲಿಚ್ಛಿಸುವ ಕಲಾತಂಡಗಳು ತಮ್ಮ ತಂಡದ ಉತ್ತಮ ಭಾವಚಿತ್ರ, ತಂಡದ ಸದಸ್ಯರ ವಿವರ, ಅಂಚೆ ವಿಳಾಸ ಮತ್ತು ಮುಖ್ಯಸ್ಥರ ಮೊಬೈಲ್/ದೂರವಾಣಿ ಸಂಖ್ಯೆ ವಿವರಗಳು ಒಳಗೊಂಡಂತೆ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಸೆ.30 ಕೊನೆ ದಿನವಾಗಿದೆ.

ಉಪ ವಿಶೇಷಾಧಿಕಾರಿಗಳು, ದಸರಾ ಮೆರವಣಿಗೆ ಮತ್ತು ಪಂಜಿನ ಕವಾಯತು ಉಪಸಮಿತಿ ಉಪ ವಿಶೇಷಾಧಿಕಾರಿಗಳು ಹಾಗೂ ನಗರ ಪೊಲೀಸ್ ಆಯುಕ್ತರು, ಮೈಸೂರು ಇವರಿಗೆ ಅಥವಾ ಸಂಚಾಲಕರು, ದಸರಾ ಮೆರವಣಿಗೆ ಉಪಸಮಿತಿ ಹಾಗೂ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಇವರಿಗೆ ಅರ್ಜಿಗಳನ್ನು ಸಲ್ಲಿಸಬೇಕು.

ಅರ್ಜಿ ಸಲ್ಲಿಸಿದ ಕಲಾತಂಡಗಳ ಪೈಕಿ ಉತ್ತಮ ಪೋಷಾಕು, ಸಾಂಪ್ರದಾಯಿಕ ಮತ್ತು ವಿಶಿಷ್ಟ ಶೈಲಿ ಹಾಗೂ ವಿಭಿನ್ನ ಕಲಾ ಪ್ರಕಾರವನ್ನು ಹೊಂದಿರುವ ತಂಡಗಳನ್ನು ನುರಿತ ತಜ್ಞರ ಸಮಿತಿಯು ಆಯ್ಕೆ ಮಾಡಲಿದೆ ಎಂದು ನಗರ ಪೊಲೀಸ್ ಆಯುಕ್ತರೂ ಆದ ದಸರಾ ಮೆರವಣಿಗೆ ಮತ್ತು ಪಂಜಿನ ಕವಾಯತು ಉಪಸಮಿತಿ ಉಪ ವಿಶೇಷಾಧಿಕಾರಿ ಬಿ.ರಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಟಾಕಿ ಮಾರಾಟ ಮಳಿಗೆ ; ರಹದಾರಿ ಪಡೆಯಲು ಸೂಚನೆ

ಮೈಸೂರು,ಸೆ.14(ಪಿಎಂ)– ಪ್ರಸಕ್ತ ಸಾಲಿನ ದೀಪಾವಳಿ ಹಬ್ಬವನ್ನು ನ.12ರಿಂದ 14ರವರೆಗೆ ಆಚರಿಸುತ್ತಿರುವ ಹಿನ್ನೆಲೆಯಲ್ಲಿ ಮೈಸೂರು ನಗರದ ವಿವಿಧ ಬಡಾವಣೆಗಳಲ್ಲಿ ತಾತ್ಕಾಲಿಕ ಪಟಾಕಿ ಮಾರಾಟ ಮಳಿಗೆ ತೆರೆಯಲಿಚ್ಛಿಸುವವರು ರಹದಾರಿ ಪಡೆಯಬೇಕೆಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದ್ದಾರೆ.

ರಹದಾರಿ ಪಡೆಯುವ ಸಂಬಂಧ ಭರ್ತಿ ಮಾಡಿದ ನಮೂನೆ ಫಾರಂ ಎಲ್‌ಇ–5 ಅನ್ನು ಅ.10ರೊಳಗೆ 'ಪೊಲೀಸ್ ಆಯುಕ್ತರ ಕಚೇರಿ, ಮೈಸೂರು ನಗರ, ಮಿರ್ಜಾ ರಸ್ತೆ, ನಜರ್‌ಬಾದ್, ಮೈಸೂರು' ಇಲ್ಲಿಗೆ ಸಲ್ಲಿಸಬೇಕು. ಕೊನೆಯ ದಿನಾಂಕದ ನಂತರ ಸ್ವೀಕೃತವಾದ ಅರ್ಜಿಗಳನ್ನು ಪರಿಗಣಿಸುವುದಿಲ್ಲ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ವಿದ್ಯುತ್ ಗ್ರಾಹಕರ ಸಂವಾದ ಸಭೆ

ಮೈಸೂರು, ಸೆ.14– ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮ ನಿಯಮಿತದ ವತಿಯಿಂದ ಮೈಸೂರು ತಾಲೂಕು ವಿ.ವಿ ಮೊಹಲ್ಲಾ ಕಾ ಮತ್ತು ಪಾ ವ್ಯಾಪ್ತಿಯ ಚಾ.ವಿ.ಸ.ನಿ.ನಿ ಉಪವಿಭಾಗಗಳಾದ ವಿ.ವಿ ಮೊಹಲ್ಲಾ, ಹೂಟಗಳ್ಳಿ, ಕುವೆಂಪುನಗರ ಮತು ರಾಮಕೃಷ್ಣನಗರ ಉಪವಿಭಾಗಗಳಲ್ಲಿ ವಿದ್ಯುತ್ ಇಲಾಖೆಗೆ ಸಂಬಂಧಿತ ಸಮಸ್ಯೆಗಳ ಬಗ್ಗೆ ಹಾಗೂ ಗ್ರಾಹಕರಿಗೆ ವಿದ್ಯುತ್ ಸುರಕ್ಷಾ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ಸೆ.16 ರಂದು ಬೆಳಿಗ್ಗೆ 11 ಗಂಟೆಗೆ ವಿದ್ಯುತ್ ಗ್ರಾಹಕರ ಸಂವಾದ ಸಭೆಯನ್ನು ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು ಉಪ ವಿಭಾಗ ಕಚೇರಿಯಲ್ಲಿ ನಡೆಯುವ ವಿದ್ಯುತ್ ಗ್ರಾಹಕರ ಸಂವಾದ ಸಭೆಗೆ ಭಾಗವಹಿಸಿ ವಿದ್ಯುತ್ ಇಲಾಖೆಗೆ ಸಂಬಂಧಿತ ಸಮಸ್ಯೆಗಳೇನಾದರೂ ಇದ್ದಲ್ಲಿ, ಲಿಖಿತ ಅರ್ಜಿಗಳನ್ನು ಸಲ್ಲಿಸಿ ವಿದ್ಯುತ್ ಸಮಸ್ಯೆ ಹಾಗೂ ವಿದ್ಯುತ್ ಸುರಕ್ಷತಾ ಜಾಗೃತಿಯ ಬಗ್ಗೆ ಯಾವುದೇ ಪ್ರಶ್ನೆಗಳಿದ್ದಲ್ಲಿ ಬಗೆಹರಿಸಿಕೊಳ್ಳುವಂತೆ ವಿ.ವಿ ಮೊಹಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾನಸಿಕ ಖಿನ್ನತೆಯಿಂದ ಬಳಲುವವರಿಗೆ ಮನೋಸ್ಥೈರ್ಯ ತುಂಬಬೇಕು

● ಹಿರಿಯ ಸಿವಿಲ್ ನ್ಯಾಯಾಧೀಶ ದಿನೇಶ್ ಸಲಹೆ ● ಮೈಸೂರಿನಲ್ಲಿ ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ



ಮೈಸೂರು, ಸೆ.14(ಬಿಎಲ್‌ಯು)– ಮಾನಸಿಕ ಖಿನ್ನತೆಯಿಂದ ಬಳಲುವ ಹಾಗೂ ಸ್ವಹತ್ಯೆ ಭಾವನೆ ವ್ಯಕ್ತಪಡಿಸುವ ವ್ಯಕ್ತಿಗಳನ್ನು ಏಕಾಂತದಲ್ಲಿರಲು ಬಿಡದೆ, ಅವರಲ್ಲಿ ಮನೋಸ್ಥೈರ್ಯ ತುಂಬಬೇಕು ಎಂದು ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳೂ ಆದ ಹಿರಿಯ ಸಿವಿಲ್ ನ್ಯಾಯಾಧೀಶ ದಿನೇಶ್ ಬಿ.ಜಿ. ಸಲಹೆ ನೀಡಿದರು.

ಮೈಸೂರಿನ ಜಿಲ್ಲಾ ಆರೋಗ್ಯಾಧಿಕಾರಿಗಳ ಕಚೇರಿಯ ವೈದ್ಯರ ಭವನದಲ್ಲಿ ಇಂದು ನಡೆದ ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಹಲವು ಕಾರಣಗಳಿಂದ ಮಾನಸಿಕ ಖಿನ್ನತೆಯಿಂದ ಬಳಲುತ್ತಿರುವ ಶೇಕಡ 60 ರಷ್ಟು ಜನರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಇಂತಹವರು ಸಾಮಾನ್ಯವಾಗಿ ಆತ್ಮಹತ್ಯೆ ಮಾಡಿಕೊಳ್ಳುವ ಭಾವನೆ ವ್ಯಕ್ತಪಡಿಸುತ್ತಿರುತ್ತಾರೆ. ಮನೆಯವರು ಹಾಗೂ ಸುತ್ತಲಿನ ಸಮಾಜ ಅವರ ವರ್ತನೆಯನ್ನು ಸೂಕ್ಷ್ಮವಾಗಿ ಅವಲೋಕಿಸಿ ಅವರಿಗೆ ಮನೋಸ್ಥೈರ್ಯ ತುಂಬಬೇಕು. ಯಾವುದೇ ಕಾರಣಕ್ಕೂ ಅವರನ್ನು ಏಕಾಂತಕ್ಕೆ ಬಿಡದೆ, ಎಲ್ಲರಲ್ಲಿ ಅವರನ್ನು ಒಬ್ಬರಾಗಿ ಮಾಡಬೇಕು. ಈ ಮೂಲಕ ಅವರನ್ನು ಆತ್ಮಹತ್ಯೆಯ ಅಪಾಯದಿಂದ ಪಾರು ಮಾಡಬೇಕು ಎಂದು ಹೇಳಿದರು.

ಆತ್ಮಹತ್ಯೆ ಪ್ರಕರಣವನ್ನು ನಿಯಂತ್ರಣ ಮಾಡುವುದಲ್ಲ. ಆತ್ಮಹತ್ಯೆ ಪ್ರಕರಣಗಳ ಸಂಖ್ಯೆಯನ್ನು ಶೂನ್ಯಕ್ಕಿಳಿಸಬೇಕು. ಈ ಹಿನ್ನೆಲೆಯಲ್ಲಿ ಆತ್ಮಹತ್ಯೆ ವಿರುದ್ಧ ಪರಿಣಾಮಕಾರಿ ಜಾಗೃತಿ ಮೂಡಿಸಬೇಕು ಎಂದು ದಿನೇಶ್ ಕರೆ ನೀಡಿದರು.

ಆತ್ಮಹತ್ಯೆ ಮಾಡಿಕೊಳ್ಳುವುದು ಕಾನೂನಿನ ಪ್ರಕಾರ ಅಪರಾಧ. ಐಪಿಸಿ ಸೆಕ್ಷನ್ 309ರ ಪ್ರಕಾರ ಆತ್ಮಹತ್ಯೆಗೆ ಯತ್ನಿಸಿದವರಿಗೆ ಒಂದು ವರ್ಷ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಬಹುದು. ಆತ್ಮಹತ್ಯೆಗೆ ಯತ್ನಿಸಿದವನು ಈಗಾಗಲೇ ಮಾನಸಿಕವಾಗಿ ಶಿಕ್ಷೆ ಅನುಭವಿಸಿರುತ್ತಾನೆ. ಹಾಗೆಂದ ಮಾತ್ರಕ್ಕೆ ಮಾನವೀಯತೆ ದೃಷ್ಟಿಯಿಂದ ಶಿಕ್ಷೆ ನೀಡದೆ ಇರಲು ಸಾಧ್ಯವಿಲ್ಲ. ಕಾನೂನಿನ ಪ್ರಕಾರ ಶಿಕ್ಷೆ ವಿಧಿಸಲೇಬೇಕಾಗುತ್ತದೆ. ಈ ಕಾರಣದಿಂದ ಆತ್ಮಹತ್ಯೆ ಅಪರಾಧ ಎಂಬುದನ್ನು ಅರಿತಾದರೂ ಸ್ವಹತ್ಯೆ ಪ್ರಯತ್ನಕ್ಕೆ ಯಾರೂ ಕೈ ಹಾಕಬಾರದು ಎಂದು ದಿನೇಶ್ ಸಲಹೆ ನೀಡಿದರು.

ಮಕ್ಕಳಲ್ಲಿ ಕೂಡ ಆತ್ಮಹತ್ಯೆ ಪ್ರಕರಣ ಹೆಚ್ಚಾಗುತ್ತಿದೆ. ಶಾಲೆಗಳು ಹಾಗೂ ತಂದೆ–ತಾಯಿಗಳು ಮಕ್ಕಳ ಮೇಲೆ ಶೈಕ್ಷಣಿಕವಾಗಿ ತಮ್ಮ ಹಿತಾಸಕ್ತಿಗಳನ್ನು ಹೇರುತ್ತಾರೆ. ಇಂತಹ ಸಂದರ್ಭದಲ್ಲಿ ಒತ್ತಡ ತಡೆಯಲಾರದ ಮಕ್ಕಳು ಆತ್ಮಹತ್ಯೆಗೆ ಶರಣಾಗುತ್ತವೆ. ಈ ಹಿನ್ನೆಲೆಯಲ್ಲಿ ಮಕ್ಕಳ ಮನಸ್ಸನ್ನು ಅರ್ಥ ಮಾಡಿಕೊಂಡು ಪೋಷಕರು ಹಾಗೂ ಶಾಲೆಗಳು ಮಕ್ಕಳ ಮೇಲೆ ಅತಿಯಾದ ಒತ್ತಡ ಹೇರಬಾರದು ಎಂದು ದಿನೇಶ್ ಕಿವಿಮಾತು ಹೇಳಿದರು.

ವಿಶ್ವ ಆರೋಗ್ಯ ಸಂಸ್ಥೆ ಘೋಷವಾಕ್ಯ 'ಕ್ರಿಯೆ ಮೂಲಕ ಭರವಸೆ ಮೂಡಿಸುವುದು'ಅಡಿ ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ ಹಮ್ಮಿಕೊಳ್ಳಲಾಗಿತ್ತು. ಜಿಲ್ಲಾ ಆರೋಗ್ಯಾಧಿಕಾರಿ ಡಾ. ಪಿ.ಸಿ.ಕುಮಾರಸ್ವಾಮಿ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿ ಡಾ.ಬಿ. ಬೃಂದಾ, ಮನೋರೋಗ ತಜ್ಞೆ ಡಾ. ಮಾಲಿನಿ, ಅನುಷ್ಠಾನಾಧಿಕಾರಿ ಡಾ. ಸಿರಾಜ್ ಅಹಮ್ಮದ್ ಹಾಗೂ ಶಾಲಾ ಶಿಕ್ಷಣಾಧಿಕಾರಿ ಪುಷ್ಪಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.



‘ರಾವೆನ್’ ಕಾಗೆಯೇ ಚಿತ್ರದ ಹೀರೋ

ಹಿಂದೂ ಸಂಸ್ಕೃತಿಯಲ್ಲಿ ಕಾಗೆ ಎಂದರೆ ಅಪಶಕುನ, ಕೆಟ್ಟದ್ದರ ಸಂಕೇತ ಎನ್ನುವ ಮಾತಿದೆ. ಅದರೆ ಅದನ್ನೇ ಪಾಸಿಟಿವ್ ಆಗಿ ತೋರಿಸಹೊರಟಿದ್ದಾರೆ ನಿರ್ದೇಶಕ ವೇದ್. ಕಾಗೆಯಿಂದ ಒಳ್ಳೆಯದೂ ನಡೆಯಬಹುದಲ್ಲವೇ ಎನ್ನುವುದು ಇವರ ಅಭಿಪ್ರಾಯ. ವಿಶ್ವನಾಥ್.ಜಿ.ಪಿ. ಹಾಗೂ ಪ್ರಬಿಕ್ ಮೊಗವೀರ್ ಸೇರಿ ನಿರ್ಮಿಸುತ್ತಿರುವ ‘ರಾವೆನ್’ ಚಿತ್ರದಲ್ಲಿ ಕಾಗೆಯ ಪಾತ್ರವೇ ಪ್ರಧಾನವಾಗಿರುತ್ತದೆ. ಮೊನ್ನೆ ಈ ಚಿತ್ರಕ್ಕೆ ಚಾಲನೆ ದೊರೆತಿದೆ, ಇಲ್ಲಿ ಒಂದಷ್ಟು ಮಾಹಿತಿಗಳನ್ನೂ ಚಿತ್ರತಂಡ ನೀಡಿದೆ.

ಹಾರರ್, ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಇರುವ ‘ರಾವೆನ್’ ಚಿತ್ರದಲ್ಲಿ ಕಾಗೆಯೇ ಪ್ರಮುಖ ಪಾತ್ರಧಾರಿ. ‘ರಾವೆನ್’ ಎಂಬ ಕಾಗೆಯ ಸುತ್ತ ನಡೆಯುವ ಘಟನೆಗಳನ್ನು ಇಟ್ಟುಕೊಂಡು, ಕಾಗೆಯಿಂದಲೂ ಒಳ್ಳೆಯದಾಗುತ್ತದೆ ಎಂದು ನಿರ್ದೇಶಕ ವೇದ್ ಹೇಳಹೊರಟಿದ್ದಾರೆ. ಇದೇ 21ರಿಂದ ಶೂಟಿಂಗ್ ಆರಂಭವಾಗಲಿರುವ, ಈ ಚಿತ್ರದಲ್ಲಿ ದಿಲೀಪ್ ಪೈ, ಸ್ವಪ್ನ ಶೆಟ್ಟಿಗಾರ್ ಹಾಗೂ ಕುಂಕುಮ ಪ್ರಮುಖ ಪಾತ್ರಗಳಲ್ಲಿ ನಟಿಸಲಿದ್ದಾರೆ. ಸುಚೇಂದ್ರ ಪ್ರಸಾದ್, ಲೀಲಾ ಮೋಹನ್, ಶ್ರೇಯಾ ಆರಾಧ್ಯ ಉಳಿದ ತಾರಾಗಣದಲ್ಲಿದ್ದಾರೆ.

ಕನ್ನಡಪರ ಹೋರಾಟಗಾರ ವಿಶ್ವನಾಥ್ ಅವರು ಈ ಚಿತ್ರದ ಮೂಲಕ ನಿರ್ಮಾಪಕರಾಗುತ್ತಿದ್ದಾರೆ. ಈವರೆಗೆ ಪ್ರಾಣಿ ಪಕ್ಷಿಯ ಮೇಲೆ ಮಾಡಿದ ಯಾವುದೇ ಚಿತ್ರವೂ ಸೋತಿಲ್ಲ. ನಿರ್ದೇಶಕ ವೇದ್ ಹೇಳಿದ ಕಥೆ ನನಗೆ ತುಂಬಾ ಇಷ್ಟವಾಗಿ, ಪ್ರಬಿಕ್ ಮೊಗವೀರ್ ಜೊತೆ ಸೇರಿ ನಿರ್ಮಾಣಕ್ಕೆ ಮುಂದಾಗಿದ್ದೇನೆ ಎಂದರು.

ಮತ್ತೊಬ್ಬ ನಿರ್ಮಾಪಕ ಪ್ರಬಿಕ್ ಮೊಗವೀರ್ ಮಾತನಾಡುತ್ತಾ, ನಾನು ಹತ್ತು ವರ್ಷಗಳಿಂದ ಚಿತ್ರರಂಗದಲ್ಲಿದ್ದೇನೆ. ಹೀರೋಗಳ ಡೇಟ್ ತಗೊಂಡು ಸಿನಿಮಾ ಮಾಡೋದು ಕಷ್ಟ, ನಾಯಿ ಇದೆ ಎಚ್ಚರಿಕೆ ಸೇರಿದಂತೆ ಪ್ರಾಣಿಗಳ ಮೇಲೇ ಸಿನಿಮಾ ಮಾಡಿಕೊಂಡು ಬಂದಿದ್ದೇನೆ ಎಂದು ಹೇಳಿದರು. ನಾಯಕ ದಿಲೀಪ್ ಮಾತನಾಡುತ್ತಾ, ‘ಈಗ’ ಚಿತ್ರದ ನಂತರ ಪಕ್ಷಿಯೊಂದನ್ನು ಪ್ರದಾನವಾಗಿಟ್ಟುಕೊಂಡು ಮಾಡುತ್ತಿರುವ ಚಿತ್ರ. ವೇದ್ ಒಂದೊಳ್ಳೇ ಕ್ರಿಯೇಟಿವ್ ಕಾನ್ಸೆಪ್ಟ್ ಮಾಡಿಕೊಂಡಿದ್ದಾರೆ. ಕಾಗೆ ಶನಿಮಹಾತ್ಮನ ವಾಹನ. ಅಂಥ ಕಾಗೆ ಇಡೀ ಚಿತ್ರದಲ್ಲಿರುತ್ತದೆ. ಚಿತ್ರದ ಎಲ್ಲಾ ಪಾತ್ರಗಳು ಕಾಗೆಯ ಜೊತೆ ಕನೆಕ್ಟ್ ಆಗುತ್ತದೆ ಎಂದು ಹೇಳಿದರು. ಚಿತ್ರದಲ್ಲಿ ಲಾರೆನ್ಸ್ ಎಂಬ ವಿಲನ್ ಪಾತ್ರವನ್ನು ಬಿಗ್‌ಸ್ಟಾರ್ ಒಬ್ಬರು ಮಾಡಲಿದ್ದು, ಮುಂದಿನ ದಿನಗಳಲ್ಲಿ ಅದರ ಕುರಿತು ಮಾಹಿತಿ ಹೊರಬೀಳಲಿದೆ,



ಮಾಧ್ಯಮ-ಉದ್ಯಮದ ಕಥೆ ‘ಭಗೀರಥ’

ಯಾವುದೇ ಕೆಲಸವನ್ನಾದರೂ ಛಲಬಿಡದೆ ಸಾಧಿಸುವವರನ್ನು ಭಗೀರಥ ಎನ್ನುತ್ತಾರೆ. ಅಂಥದ್ದೇ ಕಥೆ ಇರುವ ಚಿತ್ರವೊಂದು ಇತ್ತೀಚೆಗೆ ಸೆಟ್ಟೇರಿದೆ. ಅದರ ಹೆಸರು ‘ಭಗೀರಥ’. ಸಾಯಿ ರಮೇಶ್ ಪ್ರೊಡಕ್ಷನ್ ಲಾಂಛನದಲ್ಲಿ ಕೆ.ರಮೇಶ್ ಹಾಗೂ ಬಿ.ಬೈರಪ್ಪ ಮೈಸೂರು ಸೇರಿ ನಿರ್ಮಿಸುತ್ತಿರುವ ಈ ಚಿತ್ರದ ಮುಹೂರ್ತ ಸಮಾರಂಭ ಬಂಡೆ ಮಹಾಕಾಳಿ ದೇವಸ್ಥಾನದಲ್ಲಿ ನೆರವೇರಿತು. ರಾಮ್ ಜನಾರ್ಧನ್ ಈ ಚಿತ್ರಕ್ಕೆ ಆಕ್ಷನ್‌ಕಟ್ ಹೇಳುತ್ತಿದ್ದಾರೆ.

ನಿರ್ದೇಶಕ ರಾಮ್ ಜನಾರ್ಧನ್ ಮಾತನಾಡುತ್ತಾ, ಬಾಯ್ ಫ್ರೆಂಡ್ ಚಿತ್ರದ ಮೂಲಕ ಅಭಿನಯ ಆರಂಭಿಸಿ, ಕೆಲಚಿತ್ರಗಳಿಗೆ ನಿರ್ದೇಶನ ಸಹ ಮಾಡಿದ್ದೇನೆ. ಯಾವುದಾದರೂ ಒಂದು ಕೆಲಸ ಮಾಡಲು ಹೊರಟಾಗ ಬಿಡದೆ ಸಾಧಿಸುವುದನ್ನು ಭಗೀರಥ ಪ್ರಯತ್ನ ಎನ್ನುತ್ತಾರೆ. ಈ ಪದಕ್ಕೂ ನಮ್ಮ ಚಿತ್ರದ ಕಥೆಗೂ ಸಂಬಂಧವಿದೆ. ಅದೇನೆಂದು ಚಿತ್ರದಲ್ಲಿ ಹೇಳಿದ್ದೇವೆ. ಮಾಧ್ಯಮ ಹಾಗೂ ಉದ್ಯಮದ ನಡುವೆಯೇ ‘ಭಗೀರಥ’ ಚಿತ್ರದ ಬಹುತೇಕ ಕಥೆ ನಡೆಯುತ್ತದೆ. ಮೈಸೂರಿನಲ್ಲಿ ಚಿತ್ರೀಕರಣ ಆರಂಭಿಸಿ ಒಂದೇ ಹಂತದಲ್ಲಿ ಮುಗಿಸುತ್ತಿದ್ದೇವೆ, ಸುಧಾ ಬೆಳವಾಡಿ, ಶಿವರಾಜ್ ಕೆಆರ್.ಪೇಟೆ, ರವಿಕಾಳೆ, ಬಲ ರಾಜವಾಡಿ ಪ್ರಮುಖ ಪಾತ್ರ ವರ್ಗದಲ್ಲಿದ್ದಾರೆ. ನಿರ್ದೇಶಕ ಸಾಯಿಪ್ರಕಾಶ್ ಅವರು ಮಠಾಧಿಪತಿಗಳ ಪಾತ್ರ ನಿರ್ವಹಿಸುತ್ತಿದ್ದಾರೆ ಎಂದು ಹೇಳಿದರು.

ಚಿತ್ರದ ನಾಯಕ ಜಯಪ್ರಕಾಶ್ ಮಾತನಾಡುತ್ತಾ, ಈ ಹಿಂದೆ ‘ಜಮಾನೆ’ ಚಿತ್ರದಲ್ಲಿ ನಟಿಸಿದ್ದೆ, ನಿರ್ದೇಶಕರು ಚಿತ್ರಕ್ಕಾಗಿ ವಿಶೇಷವಾದ ಕಥೆ ಮಾಡಿಕೊಂಡಿದ್ದಾರೆ. ನನ್ನ ಪಾತ್ರವೂ ಸಹ ಅಷ್ಟೇ ಸೊಗಸಾಗಿದೆ ಎಂದರು. ಪತ್ರಕರ್ತೆಯಾಗಿ ಕಾಣಿಸಿಕೊಳ್ಳುತ್ತಿರುವ ನಾಯಕಿ ಚಂದನ ರಾಘವೇಂದ್ರ ತಮ್ಮ ಪಾತ್ರದ ಕುರಿತು ಸಂಕ್ಷಿಪ್ತವಾಗಿ ಹೇಳಿಕೊಂಡರು. ಉಳಿದಂತೆ ನಟಿ ನಯನ ಹಾಗೂ ಚೇತನ್ ತಮ್ಮ ಪಾತ್ರದ ಬಗ್ಗೆ ಮಾತನಾಡಿದರು. ನಾನು ಸಿನಿಮಾ ನಿರ್ದೇಶನ ಮಾಡಿರುವುದೇ ಹೆಚ್ಚು. ಅಭಿನಯ ತುಂಬಾ ಕಡಿಮೆ. ನಿರ್ದೇಶಕರು ಮಠಾಪತಿಯ ಪಾತ್ರವನ್ನು ನೀವೇ ಮಾಡಬೇಕೆಂದು ನನಗೆ ಕಥೆ ಹೇಳಿದರು. ಪಾತ್ರವೂ ಇಷ್ಟವಾಯಿತು, ಹಾಗಾಗಿ ಬಣ್ಣ ಹಚ್ಚುತ್ತಿದ್ದೇನೆ ಎಂದು ಸಾಯಿಪ್ರಕಾಶ್ ಹೇಳಿದರು. ಪ್ರದೀಪ್ ವರ್ಮ ಅವರ ಸಂಗೀತ ನಿರ್ದೇಶನವಿರುವ ಈ ಚಿತ್ರಕ್ಕೆ ಸೂರಿ ಚಿತ್ತೂರು ಅವರ ಛಾಯಾಗ್ರಹಣವಿದೆ.

‘ಕ್ರೇಜಿ ಕೀರ್ತಿ’ಯ ಕ್ರೇಜಿ ಸ್ಟೋರಿ..!

‘ಕ್ರೇಜಿ ಕೀರ್ತಿ’ ಕನ್ನಡದಲ್ಲಿ ಹೀಗೊಂದು ವಿಭಿನ್ನ ಶೀರ್ಷಿಕೆಯ ಸಿನಿಮಾ ತಯಾರಾಗಿದೆ. ಈ ಚಿತ್ರಕ್ಕೆ ಬಾಲಾಜಿ ಮಾಧವ ಶೆಟ್ಟಿ ನಿರ್ದೇಶಕರು. ಅವರೇ ಚಿತ್ರದ ನಿರ್ಮಾಪಕರೂ ಹೌದು. ಇದೀಗ ಚಿತ್ರದ ಟ್ರೈಲರ್ ಬಿಡುಗಡೆಯಾಗಿದ್ದು, ಚಿತ್ರದ ಬಗ್ಗೆ ಹೊಸ ಕುತೂಹಲ ಹುಟ್ಟುಹಾಕಿದೆ. ಈ ಸಂದರ್ಭದಲ್ಲಿ ಮಾತನಾಡಿದ ಬಾಲಾಜಿ ಮಾಧವ ಶೆಟ್ಟಿ ಯುವಜನತೆಯ ಮನಸ್ಥಿತಿಯ ಮೇಲೆ ಮಾಡಿರುವ ಚಿತ್ರವಿದು. ಕಾಲೇಜಿನ ವಿದ್ಯಾರ್ಥಿಗಳ ಲೈಫ್‌ಸ್ಟೈಲ್ ಜೊತೆಗೆ ಒಂದೊಳ್ಳೆ ರೊಮ್ಯಾಂಟಿಕ್ ಕಥೆ ಈ ಸಿನಿಮಾದಲ್ಲಿದೆ. ಮನಸಿಗೆ ಇಷ್ಟವಾಗುವಂತಹ ಹಾಡುಗಳು ಸಿನಿಮಾದ ಪ್ಲಸ್. ಚಿತ್ರ ಇಷ್ಟೊಂದು ಚೆನ್ನಾಗಿ ಮೂಡಿಬರಲು ನಿರ್ದೇಶಕ ಓಂಪ್ರಕಾಶ್‌ರಾವ್ ಕಾರಣ, ಸಿನಿಮಾ ಹೇಗೆ ಬರಬೇಕು, ಹೇಗಿರಬೇಕು ಎಂದು ತಿಳಿಹೇಳುವ ಮೂಲಕ ಸಿನಿಮಾ ಅಚ್ಚುಕಟ್ಟಾಗಿ ಮೂಡಿಬರಲು ಕಾರಣರಾಗಿದ್ದಾರೆ ಎಂದರು. ಓಂಪ್ರಕಾಶ್ ರಾವ್ ಮಾತನಾಡುತ್ತಾ, ಈ ಸಿನಿಮಾದ ನಿರ್ದೇಶಕರು ನಿಮಗೊಂದು ಪಾತ್ರವಿದೆ. ಅದನ್ನು ನೀವೇ ಮಾಡಬೇಕು ಅಂತ ಬಂದರು. ಕಥೆ ಚೆನ್ನಾಗಿತ್ತು. ಒಪ್ಪಿಕೊಂಡೆ. ಕೊರೊನಾ ಸಮಯದಲ್ಲಿ ನನಗೆ ಕೆಲಸ ಕೊಟ್ಟಿದ್ದು ವಿಶೇಷ. ಆ ಕಾರಣಕ್ಕೆ ನಾನು ಸಿನಿಮಾದ ತೆರೆಯಮೇಲೆ ಮತ್ತು ಹಿಂದೆಯೂ ಇದ್ದು, ಒಂದೊಳ್ಳೆಯ ಸಿನಿಮಾ ಆಗಲು ಅವರ ಜೊತೆ ಕೈಜೋಡಿಸಿದ್ದೇನೆ ಎಂದು ಹೇಳಿದರು.

ನಾಯಕ ಅಭಿಲಾಶ್ ಮಾತನಾಡಿ, ಚಿತ್ರದಲ್ಲಿ ಸಾಕಷ್ಟು ಟ್ವಿಸ್ಟ್‌ಗಳಿವೆ. ಕೇವಲ ವಿದ್ಯಾರ್ಥಿಗಳು ಮಾತ್ರವಲ್ಲ, ಎಲ್ಲಾ ವರ್ಗದವರು ನೋಡಬಹುದಾದ ಚಿತ್ರವಿದು. ಮನರಂಜನೆಗೆ ಸಾಕಷ್ಟು ಜಾಗವಿದೆ. ಕ್ರೇಜಿ ಹುಡುಗಿ ಏನೆಲ್ಲಾ ಮಾಡಬಹುದೆಂದು ಸಿನಿಮಾದಲ್ಲಿ ಹೇಳಿದ್ದೇವೆ ಎಂದರು.

ನಾಯಕಿ ಸಾರಿಕರಾವ್ ಮಾತನಾಡಿ, ಕೀರ್ತಿ ಎಂಬ ಲವಲವಿಕೆಯ ಹುಡುಗಿಯಾಗಿ ನಾನು ಕಾಣಿಸಿಕೊಂಡಿದ್ದೇನೆ. ಓಂಪ್ರಕಾಶ್‌ರಾವ್ ಅವರಿಂದ ಸಾಕಷ್ಟು ತಿಳಿದುಕೊಳ್ಳಲು ಸಾಧ್ಯವಾಗಿದೆ. ಅವರಿಲ್ಲಿ ಕ್ರಿಯೇಟಿವ್ ಡೈರೆಕ್ಟರ್ ಆಗಿ ಕೆಲಸ ಮಾಡಿದ್ದಾರೆ. ಹೊಸತನ ಕಥೆ, ಹೊಸ ಜಾನರ್‌ನ ಚಿತ್ರ ಎಂದರು. ಸಂಗೀತ ನಿರ್ದೇಶಕ ಲಯಕೋಕಿಲ ಮಾತನಾಡಿ ಹಾಡುಗಳು ಹಾಗೂ ಹಿನ್ನೆಲೆ ಸಂಗೀತದ ಬಗ್ಗೆ ಮಾಹಿತಿ ನೀಡಿದರು. ಚಿತ್ರದಲ್ಲಿ ರಂಗಾಯಣ ರಘು, ಪದ್ಮಜಾರಾವ್, ಪ್ರಕಾಶ್ ಶೆಣೈ, ಆಶಾ ಸುಜಯ್ ಇತರರು ನಟಿಸಿದ್ದಾರೆ. ಮನೋಹರ ಅವರ ಛಾಯಾಗ್ರಹಣ, ಲಕ್ಷ್ಮಿನಾರಾಯಣ ರೆಡ್ಡಿ ಅವರ ಸಂಕಲನ ಈ ಚಿತ್ರಕ್ಕಿದೆ.




‘ಸೌಂಡ್ಸ್ ಆಫ್ ಕಾಲಾಪತ್ಥರ್’ ಹಾಡುಗಳ ಗುಚ್ಛ!

ಸೂರಿ ಅವರ ‘ಕೆಂಡಸಂಪಿಗೆ’ ಚಿತ್ರದಲ್ಲಿ ಮುಗ್ಧ ಯುವಕನ ಪಾತ್ರದಲ್ಲಿ ಕಾಣಿಸಿಕೊಂಡಿದ್ದ ನಟ ವಿಕ್ಕಿ ವರುಣ್ ಈಗ ನಿರ್ದೇಶಕನಾಗಿದ್ದಾರೆ. ಹೌದು, ಸೂರಿ ಗರಡಿಯಲ್ಲಿ ಪಳಗಿದ ವಿಕ್ಕಿ ನಿರ್ದೇಶಕನಾಗಬೇಕೆಂದೇ ಬಂದವರು. ಆದರೆ ಸೂರಿ ಹೀರೋ ಕೂಡ ಮಾಡಿಬಿಟ್ಟರು. ಆಗಲೇ ನಿರ್ದೇಶನದ ಎಲ್ಲಾ ಆಯಾಮಗಳನ್ನು ಅರಿತಿದ್ದ ವಿಕ್ಕಿ ನಿರ್ದೇಶಕನಾಗಿ ಗುರುತಿಸಿಕೊಳ್ಳಲು ‘ಕಾಲಾಪತ್ಥರ್’ ಎನ್ನುವ ಸಿನಿಮಾ ಬರೋವರೆಗೆ ಕಾಯಬೇಕಾಯ್ತು. ವಿಕ್ಕಿ ವರುಣ್ ಅವರೇ ನಾಯಕನಾಗಿಯೂ ನಟಿಸಿರುವ ಈ ಚಿತ್ರದ ಹಾಡುಗಳ ಬಿಡುಗಡೆ ಸಮಾರಂಭ ಇತ್ತೀಚಿಗೆ ನಡೆಯಿತು. ಭುವನ್ ಸುರೇಶ್ ಹಾಗೂ ನಾಗರಾಜ್ ಬಿಲ್ಲಿನಕೋಟೆ ನಿರ್ಮಾಣದ, ಅನೂಪ್ ಸೀಳಿನ್ ಸಂಗೀತವಿರುವ ಈ ಚಿತ್ರದ ಐದು ಹಾಡುಗಳನ್ನು ‘ಸೌಂಡ್ಸ್ ಆಫ್ ಕಾಲಾಪತ್ಥರ್’ ಹಾಡುಗಳ ಗುಚ್ಛ ಮಾಡಲಾಗಿದೆ.

ಈ ಸಂದರ್ಭದಲ್ಲಿ ನಾಯಕ ವಿಕ್ಕಿ ವರುಣ್ ಮಾತನಾಡುತ್ತಾ, ನಿರ್ದೇಶಕನಾಗಬೇಕೆನ್ನುವುದು ನನ್ನ ದೊಡ್ಡ ಕನಸಾಗಿತ್ತು. ಸೂರಿ ಬಳಿ ಹತ್ತು ವರ್ಷ ಕೆಲಸ ಮಾಡಿದ ಅನುಭವದಿಂದ ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದೇನೆ. ನಿರ್ದೇಶನ ಹಾಗೂ ಅಭಿನಯ ಎರಡನ್ನೂ ಒಟ್ಟಿಗೆ ನಿಭಾಯಿಸುವುದು ಸ್ವಲ್ಪ ಕಷ್ಟ, ಆದರೆ ನಮ್ಮ ತಂಡದ ಸಹಕಾರದಿಂದ ಸುಲಭವಾಯಿತು, ಸಿನಿಮಾ ನಾವಂದುಕೊಂಡ ಹಾಗೆ ಅದ್ಭುತವಾಗಿ ಮೂಡಿ ಬಂದಿದೆ. ಏನಾದರೂ ಹೊಸತು ಮಾಡಬೇಕೆಂದು ಸೌಂಡ್ಸ್ ಆಫ್ ಕಾಲಾಪತ್ಥರ್ ಶೀರ್ಷಿಕೆಯ ವಿಡಿಯೋವೊಂದನ್ನು ಬಿಡುಗಡೆ ಮಾಡಿದ್ದೇವೆ. ‘ಕಾಲಾಪತ್ಥರ್’ ಶೀರ್ಷಿಕೆಯ ಬಗ್ಗೆ ಏನಾದರೂ ಸುಳಿವು ಹೇಳಿದರೆ, ಕಥೆಯನ್ನೇ ಬಿಟ್ಟುಕೊಟ್ಟಂತಾಗುತ್ತದೆ. ಅದೇಕೆಂದು ಸಿನಿಮಾ ಹೊರಬಂದ ಮೇಲೆ ಗೊತ್ತಾಗುತ್ತದೆ ಎಂದು ನಾಯಕ ಕಮ್ ನಿರ್ದೇಶಕ ವಿಕ್ಕಿ ವರುಣ್ ಹೇಳಿದರು.

‘ಕಾಲಾಪತ್ಥರ್’ ಚಿತ್ರದಲ್ಲಿ ಐದು ಹಾಡುಗಳಿದ್ದು, ಅನೂಪ್ ಸೀಳಿನ್ ಅವರು ಸಂಗೀತ ನೀಡಿದ್ದಾರೆ. ಡಾ॥ ವಿ.ನಾಗೇಂದ್ರಪ್ರಸಾದ್ ಹಾಗೂ ಪ್ರಮೋದ್ ಮರವಂತೆ ಅವರುಗಳು ಗೀತರಚನೆ ಮಾಡಿದ್ದಾರೆ. ವಿಜಯ್ ಪ್ರಕಾಶ್, ಸಾಯಿವಿಘ್ನೇಶ್, ಅಭಿಷೇಕ್, ಐಶ್ವರ್ಯ ರಂಗರಾಜನ್, ಶಿವಾನಿ ಹಾಗೂ ಸಿದ್ದಾರ್ಥ್ ಬೆಳ್ಮಣ್ಣು ಹಾಡುಗಳಿಗೆ ದನಿಯಾಗಿದ್ದಾರೆ. ಚಿತ್ರದಲ್ಲಿ ನಾಯಕಿಯಾಗಿ ಧನ್ಯ ರಾಮಕುಮಾರ್ ನಟಿಸಿದ್ದಾರೆ. ತನ್ನ ಪಾತ್ರದ ಬಗ್ಗೆ ಮಾತನಾಡುತ್ತಾ, ಇದೇ ಮೊದಲಬಾರಿಗೆ ನಾನೊಬ್ಬ ಹಳ್ಳಿ ಹುಡುಗಿಯಾಗಿ ಈ ಚಿತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಗಂಗಾ ಎಂಬ ಶಿಕ್ಷಕಿಯ ಪಾತ್ರ ನನ್ನದು ಎಂದು ಹೇಳಿದರು. ‘ಕಾಲಾಪತ್ಥರ್’ ಚಿತ್ರವು ತುಂಬಾ ಚೆನ್ನಾಗಿ ಮೂಡಿಬಂದಿದೆ. ಸದ್ಯದಲ್ಲೇ ಚಿತ್ರದ ಬಿಡುಗಡೆ ದಿನಾಂಕವನ್ನೂ ತಿಳಿಸುತ್ತೇವೆ ಎಂದು ಚಿತ್ರದ ಇಬ್ಬರು ನಿರ್ಮಾಪಕರಾದ ಭುವನ್ ಸುರೇಶ್ ಹಾಗೂ ನಾಗರಾಜ್ ಬಿಲ್ಲಿನಕೋಟೆ ಹೇಳಿದರು.

ಸಿನಿಪದಬಂಧ-491



ಹೆಸರು ______

ವಿಳಾಸ ______

______

ದೂರವಾಣಿ ಸಂಖ್ಯೆ ______

ವಿಜೇತರು: ಎಸ್.ವೆಂಕಟೇಶ್ 1128/5, 1ನೇ ಕ್ರಾಸ್, ಮಿಲ್ಕ್ ಸೆಂಟರ್ ರಸ್ತೆ, ವಿದ್ಯಾರಣ್ಯಪುರಂ, ಮೈಸೂರು-570008

ಎಡದಿಂದ ಬಲಕ್ಕೆ

1.	ಪರ್ವತನ ಮಗಳು ವ್ರತ ಆಚರಿಸಲು ಚಿನ್ನದೊಂದಿಗೆ ಬರುತ್ತಿದ್ದಾಳೆ!	4
3.	ವಿಷ್ಣು-ಭಾರತಿಯ ಗೌಪ್ಯತೆಯ ಇರುಳು	5
5.	ದರ್ಶನ್‌ನ ಹಿರಿಯ ಸಹೋದರ "ಜಗ್ಗೇಶ್"	3
7.	ಮಿಥುನ್-ಛಾಯಾಸಿಂಗ್ ಅಭಿನಯಕ್ಕೆ ದಿನೇಶ್‌ಬಾಬು ನಿರ್ದೇಶಕ	5
8.	ಪ್ರಮೋದ್ ಚಕ್ರವರ್ತಿ ಪ್ರೀತಿಗಾಗಿ ಜಪಿಸಿದನು	5
9.	ಇದೊಂದು ಚರ್ಮವಾದ್ಯ ಇಲ್ಲಿ ತಿರುಗಿದೆ	3
10.	ವೈಕುಂಠದ ಕದ ಕಾಯ್ದವರು	5
12.	ಪ್ರೇಮ ಪ್ರೇಮ ಪ್ರೇಮ ಚಿತ್ರದ ನಾಯಕಿ	5
17.	ಅಂಬಿ, ದೇವು, ರೂಪಗಂಗೂಲಿಯ "ಯುದ್ಧ"	3
18.	ಕರಾಟೆ ಕಿಂಗ್ ಭಾರೀ ವಾಹನವೊಂದರ ಚಾಲಕ	5
19.	ಶಿವನ ಸತಿಯರು ಲ್ಯಾಪ್-ಟಾಪ್‌ನಲ್ಲಿದ್ದಾರೆ	4

ಮೇಲಿನಿಂದ ಕೆಳಕ್ಕೆ

1.	ರಾಘಣ್ಣನ ಮುಂಗಳಕರ ಚಿಹ್ನೆ	3
2.	ಶಿವನೆಂಡತಿಯ ಜೊತೆ ಪುತ್ರನೂ ಇದ್ದಾನೆ	5
3.	'ಕಾಂತ'ನು ಕಾಣಿಸಿಕೊಂಡ ಇರುಳು	3
4.	ಶಿವನ ಆಯುಧ ಚೂಪಾಗಿದೆ	3
5.	ಮಗಳ ಗಂಡನ ಜೊತೆ ಆತನ ಸ್ನೇಹಿತನೂ ಇದ್ದಾನೆ	6
6.	ಒಳ್ಳೆಯ ಪ್ರಸೂತಿಯಲ್ಲಿ ಜನಿಸಿದ ನಟಿ	3
8.	ನವರಸ ನಾಯಕನ ಪ್ರೀತಿಯ ಗದ್ದುಗೆ	6
11.	ಧಣಿ ಚಿತ್ರದ ನಾಯಕಿ	3
13.	ಪ್ರಜ್ವಲ್ ದೇವರಾಜ್-ಐಂದ್ರಿತಾ ರೈ ನಡೆಸಿದ "ಉತ್ಸವ"	5
14.	ಪುಷ್ಪಕ ವಿಮಾನ ಏರಿದವಳಿಗೆ ಮತ್ತೇರಿದೆ	3
15.	_ _ _ ಸುಂದರ್	3
16.	ಪಿರಮಿಡ್ ಕಟ್ಟಿ ಆಡಿದ ದೇಶಿಯ ಆಟ	3



ಉಮ್ಮತ್ತೂರು ಇಂದುಶೇಖರ್

ಮೊ.9880820462

ಸಿನಿ ಪದಬಂಧ 490ರ ಉತ್ತರ

	ಉ	ತ್ತ	ರ	ಭೂ	ಪ		ಅ	ನು	ರಾ	ಧ
	ದ			ದಾ			ಮ		ವ	
ಪ	ಯ	ಣ		ನ	ವಿ	ಲೂ	ರ		ಣ	
	ಬಾ		ಹು				ಮ		ರಾ	ಶಿ
ಜೇ	ನು	ಗೂ	ಡು		ರಂ		ಧು		ಜ್ಯ	
			ಗಾ	ಳಿ	ಗೋ	ಪು	ರ			
	ರಾ		ಟ		ಲಿ		ಪ್ರೇ	ಮ	ಕ	ಥೆ
ರೋ	ಜಾ		ದ				ಮ		ಲ್ಯಾ	
	ಧಿ		ಹು	ಡು	ಗಾ	ಟ		ಅ	ಣ	ಕ
	ರಾ		ಡು			ಗ			ರೇ	
ಭ	ಜ	ರಂ	ಗಿ		ಗ	ರು	ಡ	ರೇ	ಖೆ	

ವಿಳಾಸ: ‘ಸಿನಿಬಂಧ’ ವಿಭಾಗ, ‘ಮೈಸೂರು ಮಿತ್ರ’ ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಸಿಂಪಲ್ ಸುನಿ ನಿರ್ಮಾಣದ ‘ಶಾಂಭವಿ’

ಒಂದಷ್ಟು ಸಿನಿಮಾ ನಿರ್ದೇಶಕರು ಇದೀಗ ಕಿರುತೆರೆಯತ್ತ ಗಮನ ಹರಿಸಿದ್ದಾರೆ ಆ ಸಾಲಿಗೆ ಈಗ ಸಿಂಪಲ್ ಸುನಿ ಸೇರಿದ್ದಾರೆ, ‘ಚಮಕ್’, ‘ಸಿಂಪಲ್ಲಾಗ್ ಒಂದ್ ಲವ್‌ಸ್ಟೋರಿ’, ‘ಬಜಾರ್’ ನಂಥ



ಯಶಸ್ವೀ ಚಿತ್ರಗಳನ್ನು ನೀಡಿದ ನಿರ್ದೇಶಕ ಸಿಂಪಲ್‌ಸುನಿ ಕಿರುತೆರೆಗಾಗಿ ಹೊಸ ಸೀರಿಯಲ್ ವೊಂದನ್ನು ನಿರ್ಮಿಸಿ ನಿರ್ದೇಶಿಸುತ್ತಿದ್ದಾರೆ. ಇದೇ ಮೊದಲ ಬಾರಿಗೆ ಅವರು ನಿರ್ದೇಶನ ಮಾಡುತ್ತಿರುವ ಸೀರಿಯಲ್ ಹೆಸರು ‘ಶಾಂಭವಿ’. ಸೆ.11ರಿಂದ ಉದಯ ವಾಹಿನಿಯಲ್ಲಿ ಮೂಡಿಬರಲಿರುವ ಶಾಂಭವಿ ಒಂದು ಸಾಮಾಜಿಕ ಸಬ್ಜೆಕ್ಟ್ ಇರುವ ಸೀರಿಯಲ್. ‘ಶಾಂಭವಿ’ ಎಂಬ ಮುದ್ದಾದ ಮಗುವಿನ ಸುತ್ತ ನಡೆಯುವ ಕುತೂಹಲಕರ ಘಟನೆಗಳೇ ಇದರ ಕಥಾವಸ್ತು. ಸಾವಿರಾರು ಕೋಟಿ ಆಸ್ತಿಯ ಒಡತಿಯಾದ ಶಿವಗಾಮಿ ಹಾಗೂ ಆಕೆಯ ಅಣ್ಣ ಹರಿಪ್ರಸಾದ್ ಶಿಕ್ಷಣ ಸಂಸ್ಥೆಯ ಜೊತೆ ಹಲವಾರು ಉದ್ಯಮಗಳನ್ನು ನಡೆಸಿಕೊಂಡು ಬಂದಿರುತ್ತಾರೆ. ಅದೇ ಶಿಕ್ಷಣ ಸಂಸ್ಥೆಗೆ ಶಿಕ್ಷಕನಾಗಿ ಎಂಟ್ರಿ ಕೊಡುವ ಅಶೋಕನ ಸರಳತೆಗೆ ಮಾರುಹೋದ ಶಿವಗಾಮಿ ಆತನನ್ನೇ ಪ್ರೀತಿಸಿ ಮದುವೆಯಾಗುತ್ತಾಳೆ. ಅವರಿಗೆ ಹುಟ್ಟಿದ ಮಗುವೇ ಶಾಂಭವಿ. ಅಶೋಕನ ಪೋಷಕರ ಧನದಾಹಕ್ಕೆ ಕುಟುಂಬ ಬಲಿಯಾಗುತ್ತದೆ, ಮುಂದೊಮ್ಮೆ ಇದ್ದಕ್ಕಿದ್ದ ಹಾಗೆ ಶಾಂಭವಿ ಕಾಣೆಯಾದಾಗ ಮಗಳನ್ನು ನೆನೆದು ತಾಯಿ ಶಿವಗಾಮಿ ಹುಚ್ಚಿಯಂತಾಗುತ್ತಾಳೆ. ಹೀಗೆ ಸಾಗುವ ಕಥೆ ಅನೇಕ ರೋಚಕ ತಿರುವುಗಳನ್ನು ಪಡೆಯುತ್ತ ಹೋಗುತ್ತದೆ.

ಮೂಲಸೌಕರ್ಯಕ್ಕೆ ಒತ್ತಾಯಿಸಿ ವಿದ್ಯಾರ್ಥಿಗಳ ಪ್ರತಿಭಟನೆ



ಹೆಚ್.ಡಿ. ಕೋಟೆ, ಸೆ.14– ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಮೂಲಸೌಕರ್ಯಗಳನ್ನು ಒದಗಿಸಿಕೊಡುವಂತೆ ಆಗ್ರಹಿಸಿ ತಾಲೂಕು ತಹಸೀಲ್ದಾರ್ ಕಚೇರಿ ಮುಂಭಾಗ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಎಐಡಿಎಸ್‌ಓ ಜಿಲ್ಲಾಧ್ಯಕ್ಷ ಸುಭಾಷ್ ಮಾತನಾಡಿ, ಹೆಚ್.ಡಿ. ಕೋಟೆ ಪಟ್ಟಣದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಅತಿ ಹೆಚ್ಚು ಬಡ ಕುಟುಂಬದ ರೈತಾಪಿ ವರ್ಗದ ಮಕ್ಕಳು ಹಾಗೂ ಆದಿವಾಸಿಯ ಮಕ್ಕಳು ಬರುತ್ತಾರೆ. ಆದರೆ ಕಾಲೇಜಿನಲ್ಲಿ ಮೂಲಸೌಕರ್ಯಗಳ ಕೊರತೆ, ಸೂಕ್ತ ಕೊಠಡಿಗಳೇ ಇಲ್ಲದಿರುವುದು ವಿದ್ಯಾರ್ಥಿಗಳ ಶೈಕ್ಷಣಿಕ ಕನಸಿಗೆ ತಿಲಾಂಜಲಿ ಇಟ್ಟಂತಾಗುತ್ತದೆ ಎಂದರು.

ಮಳೆಯಿಂದ ಕಟ್ಟಡಗಳು ಶಿಥಿಲಗೊಂಡಿವೆ, ಮಳೆ ನೀರಿನ ನಡುವೆಯೇ ವಿದ್ಯಾರ್ಥಿಗಳು ಪಾಠವನ್ನು ಕೇಳುವಂತಾಗಿದೆ. ಶಿಥಿಲಗೊಂಡಿರುವ ಕೊಠಡಿಗಳು ಕುಸಿಯುವ ಸಾಧ್ಯತೆ ಇದ್ದು, ವಿದ್ಯಾರ್ಥಿಗಳು ಆತಂಕದಿಂದಲೇ ಪಾಠ ಕೇಳಬೇಕಾಗಿದೆ. ಇದರಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತಿದೆ ಎಂದರು. ಕಾಲೇಜಿನಲ್ಲಿ ಸಮರ್ಪಕವಾದ ಶೌಚಾಲಯಗಳ ಕೊರತೆ ಇದ್ದು, ಹೆಣ್ಣುಮಕ್ಕಳಿಗೆ ಪ್ರತ್ಯೇಕವಾದ ಶೌಚಾಲಯವೇ ಇಲ್ಲ, ಹೆಣ್ಣು ಮಕ್ಕಳ ಹಿತದೃಷ್ಟಿಯಿಂದ ಪ್ರತ್ಯೇಕವಾದ ಶೌಚಾಲಯಗಳನ್ನು ನಿರ್ಮಿಸುವುದು ಅತ್ಯವಶ್ಯಕ ಎಂದರು.

ಪ್ರಸ್ತುತ ರಾಜ್ಯ ಸರ್ಕಾರವು ಬಜೆಟ್‌ನಲ್ಲಿ ಕಾಲೇಜುಗಳ ಕಟ್ಟಡಗಳ ದುರಸ್ತಿಗೆ ಹಣ ಬಿಡುಗಡೆ ಮಾಡಲಾಗುವುದು ಎಂದು ಘೋಷಿಸಲಾಗಿದೆ. ಆದ್ದರಿಂದ ಈ ಕೂಡಲೇ ಕಟ್ಟಡಗಳನ್ನು ದುರಸ್ತಿ ಮಾಡಿ ಅಥವಾ ಹೊಸ ಕಟ್ಟಡಗಳನ್ನು ನಿರ್ಮಿಸಿ, ಮೂಲ ಸೌಕರ್ಯಗಳನ್ನು ಒದಗಿಸಿ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅನುವು ಮಾಡಿಕೊಡಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿದರು.

ಅವಶ್ಯಕ ಕೊಠಡಿ, ಶೌಚಾಲಯಗಳನ್ನು ನಿರ್ಮಿಸಿ ಮೂಲಸೌಕರ್ಯಗಳನ್ನು ಒದಗಿಸಬೇಕೆಂದು ತಹಸೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು

ಪ್ರತಿಭಟನೆಯಲ್ಲಿ ಎಐಡಿಎಸ್‌ಓ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಚಂದ್ರಕಲಾ, ಪದಾಧಿಕಾರಿಗಳಾದ ನಿತಿನ್, ಸ್ವಾತಿ, ಮಣಿಕಂಠ, ಕುಮಾರಿ, ಮಧು, ಪ್ರೀತಮ್ ಮಹೇಶ್ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ನೆರಗ್ಯಾತನಹಳ್ಳಿ ಡೇರಿಗೆ ಬಸವರಾಜಪ್ಪ ಅಧ್ಯಕ್ಷ



ತಿ.ನರಸೀಪುರ, ಸೆ14– ತಾಲೂಕಿನ ನೆರಗ್ಯಾತನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಬಸವರಾಜಪ್ಪ, ಉಪಾಧ್ಯಕ್ಷರಾಗಿ ಮಂಜುಳಾ ಬುಧವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದರು.

ಚುನಾವಣಾ ಸಭೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಬಯಸಿ ಬಸವರಾಜಪ್ಪ, ಉಪಾಧ್ಯಕ್ಷ ಸ್ಥಾನಕ್ಕೆ ಮಂಜುಳಾ ಇಬ್ಬರೇ ನಾಮಪತ್ರ ಸಲ್ಲಿಸಿ ಅವಿರೋಧವಾಗಿ ಆಯ್ಕೆಗೊಂಡರು.

ನಿರ್ದೇಶಕರಾದ ಎನ್.ಆರ್. ಚಂದ್ರಶೇಖರ್, ನುದೀಶ್, ನಟರಾಜಪ್ಪ ಶಿವಕುಮಾರ್, ಚಂದ್ರಶೇಖರಪ್ಪ ಹಾಗೂ ಪುಟ್ಟತಾಯಮ್ಮ ಚುನಾವಣಾ ಸಭೆಗೆ ಹಾಜರಾಗಿ ನೂತನ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು. ಸಹಕಾರ ಅಭಿವೃದ್ಧಿ ಅಧಿಕಾರಿ ರಾಜಣ್ಣ ಅವಿರೋಧ ಆಯ್ಕೆಯನ್ನು ಪ್ರಕಟಿಸಿದರು.


ನೂತನ ಅಧ್ಯಕ್ಷ–ಉಪಾಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಹಾಗೂ ಪ್ರಥಮ ದರ್ಜೆ ಗುತ್ತಿಗೆದಾರ ಎನ್.ಎನ್.ಮಹದೇವಸ್ವಾಮಿ, ಸಹಕಾರ ಸಂಘದಲ್ಲಿ ಅಧ್ಯಕ್ಷ –ಉಪಾಧ್ಯಕ್ಷರನ್ನು ಅವಿರೋಧವಾಗಿ ಆಯ್ಕೆ ಮಾಡುವ ಮೂಲಕ ನಿರ್ದೇಶಕರು ಉತ್ತಮ ನಿರ್ಧಾರ ಕೈಗೊಂಡಿದ್ದಾರೆ. ನೂತನವಾಗಿ ಆಯ್ಕೆಯಾದ ಸಂಘದ ವರಿಷ್ಠರು ಸಂಘದ ಎಲ್ಲ ನಿರ್ದೇಶಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಡೈರಿಯ ಅಭಿವೃದ್ಧಿಗೆ ಕಾರ್ಯಪ್ರವೃತ್ತರಾಗಬೇಕು ಹಾಗೂ ಸರ್ಕಾರದಿಂದ ದೊರಕಬಹುದಾದ ಸವಲತ್ತುಗಳನ್ನು ರೈತರಿಗೆ ತಲುಪಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಸಲಹೆ ನೀಡಿದರು.

ಈ ವೇಳೆ ಪಿಎಸಿಸಿ ಅಧ್ಯಕ್ಷ ಎಂ.ಎನ್.ಜಯಪ್ಪ, ತಾಪಂ ಮಾಜಿ ಅಧ್ಯಕ್ಷ ಕುಮಾರಸ್ವಾಮಿ, ಡೈರಿ ಗುರುಮೂರ್ತಿ, ಕೊಳತ್ತೂರು ಗ್ರಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಗುಂಡಪ್ಪ, ಚಂದ್ರು, ಸಿದ್ದವೀರಪ್ಪ ಮತ್ತಿತರರಿದ್ದರು.

ಪತ್ನಿ ಕೊಂದ ಪತಿಯ ಬಂಧನ

ನಂಜನಗೂಡು ಪಟ್ಟಣದಲ್ಲಿ ಅಮಾನುಷ ಘಟನೆ





ನಂಜನಗೂಡು, ಸೆ.14– ಗಂಡನೇ ತನ್ನ ಗರ್ಭಿಣಿ ಹೆಂಡತಿಯ ಕುತ್ತಿಗೆಯನ್ನು ಬ್ಲೇಡಿನಿಂದ ಕುಯ್ದು ಕೊಲೆ ಮಾಡಿರುವ ಘಟನೆ ಗುರುವಾರ ನಗರದ ಚಾಮಲಾಪುರದ ಹುಂಡಿ ಬಡಾವಣೆಯಲ್ಲಿ ಜರುಗಿದೆ.

ನಗರದ ಚಾಮಲಾಪುರದ ಹುಂಡಿ ಬಡಾವಣೆಯ ಕಟ್ಟಡ ಕಾರ್ಮಿಕ ಮಂಜುನಾಥ್(27) ಆರೋಪಿ ಪತ್ನಿ ಶೋಭಾ(21) ಕೊಲೆಯಾದ ದುರ್ದೈವಿ. 8 ವರ್ಷಗಳ ಹಿಂದೆ ಚಾಮಲಾಪುರ ಬಡಾವಣೆಯ ಶೋಭಾಳನ್ನು ಅದೇ ಬಡಾವಣೆಯ ಕಟ್ಟಡ ಕಾರ್ಮಿಕ ಮಂಜುನಾಥ್ ಪ್ರೀತಿಸಿ ಮದುವೆಯಾಗಿದ್ದ. ಈ ದಂಪತಿಗೆ 2 ವರ್ಷದ ಗಂಡು ಮಗುವಿದೆ. ಮಂಜುನಾಥ್ ಮತ್ತು ಶೋಭಾ ನಡುವೆ ಮನಸ್ತಾಪ ಉಂಟಾಗಿ ಶೋಭಾ ತವರು ಮನೆಗೆ ಬಂದಿದ್ದಳು ಎನ್ನಲಾಗಿದೆ. ಆರೋಪಿ ಮಂಜುನಾಥ್ ಶೋಭಾಳ ತವರು ಮನೆಯ ಮುಂದೆ ಗುರುವಾರ ಮಧ್ಯಾಹ್ನ ಬಂದು ತನ್ನ 7 ತಿಂಗಳ ಗರ್ಭಿಣಿ ಹೆಂಡತಿಯನ್ನು ಕಳುಹಿಸುವಂತೆ ಜಗಳ ತೆಗೆದಿದ್ದಾನೆ. ಶೋಭಾ ಮನೆಯವರು ಕಳುಹಿಸಲು ಒಪ್ಪದಿದ್ದಾಗ ಶೋಭಾಳನ್ನು ಕೈಹಿಡಿದು ಎಳೆದು ಬ್ಲೇಡಿನಿಂದ ಕುತ್ತಿಗೆ ಕುಯ್ದಿದ್ದಾನೆ. ತೀವ್ರ ರಕ್ತಸ್ರಾವವಾಗಿದ್ದ ಶೋಭಾಳನ್ನು ತಕ್ಷಣ ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾಖಲಿಸಿದರೂ ಸಹ, ಚಿಕಿತ್ಸೆ ಫಲಕಾರಿಯಾಗದೆ ಶೋಭಾ ಮೃತಪಟ್ಟಿದ್ದಾರೆ.

ಈ ಸಂಬಂಧ ನಗರದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿ ಮಂಜುನಾಥ್‌ನನ್ನು ವಶಕ್ಕೆ ಪಡೆದು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಸಕಾಲಕ್ಕೆ ಸಾಲ ಮರುಪಾವತಿಸಿ



ಮಲ್ಲುಂಡಿ, ಸೆ.14– ರೈತರಿಂದ ರೈತರಿಗಾಗಿ ಆರಂಭಗೊಂಡಿರುವ ಸಹಕಾರ ಸಂಘವು ರೈತರಿಗೆ ಉತ್ತಮವಾದ ಸಾಲ ಸೌಲಭ್ಯ ನೀಡುತ್ತಿದೆ ಎಂದು ಸಂಘದ ಉಪಾಧ್ಯಕ್ಷ ಎಂ.ಪುಟ್ಟಸ್ವಾಮಿ ಹೇಳಿದರು.

ಸಮೀಪದ ಹುರ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2022–23ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಾಲ ಪಡೆದ ರೈತರು ಸಕಾಲಕ್ಕೆ ಸಾಲ ಮರುಪಾವತಿ ಮಾಡಿದರೆ ಸಂಘವು ಲಾಭ ಕಾಣಲು ಸಾಧ್ಯ. ಇಲ್ಲವಾದರೆ ಸಂಘ ನಷ್ಟ ಕಾಣುತ್ತದೆ ಎಂದರು.

ಈಗಾಗಲೇ ರೈತರು ಪಡೆದು ಸಾಲ ಮರುಪಾವತಿ ಮಾಡದೆ ಇರುವುದರಿಂದ ಸಂಘವು ನಷ್ಟದಲ್ಲಿದೆ. ಆದ್ದರಿಂದ ಪ್ರತಿಯೊಬ್ಬರು ಸಾಲ ಮರುಪಾವತಿ ಮಾಡಿ ಸಂಘವು ಲಾಭಾಂಶ ಕಾಣಲು ಎಲ್ಲರ ಸಹಕಾರ ಮುಖ್ಯವಾಗಿದೆ ಎಂದು ತಿಳಿಸಿದರು.

ಸಂಘದ ಅಧ್ಯಕ್ಷ ಸಣ್ಣಮಾದಪ್ಪ, ನಿರ್ದೇಶಕರುಗಳಾದ ಚಂದ್ರು, ಗುರುಮಲ್ಲಪ್ಪ, ಪಿಣ್ಣಪ್ಪ ಮಹದೇವನಾಯಕ, ತ್ಯಾಗರಾಜು, ಸಿಇಓ ನಾಗರಾಜಮೂರ್ತಿ, ಗುಮಾಸ್ತ ಮಹದೇವಸ್ವಾಮಿ ಸೇರಿದಂತೆ ಸದಸ್ಯರು ಮತ್ತು ಪ್ರಮುಖರು ಹಾಜರಿದ್ದರು.

ಪಿ.ಪಟ್ಟಣ ತಾಲೂಕು ಸೀತಾ ಬೆಟ್ಟದಲ್ಲಿ ಅಕ್ರಮ ಗಣಿಗಾರಿಕೆ



ಪಿರಿಯಾಪಟ್ಟಣ, ಸೆ14– ತಾಲೂಕಿನಹಾಡು ಹಳ್ಳಿ ಹಾಗೂ ಬೆಟ್ಟದಪುರ ಹೋಬಳಿ ವ್ಯಾಪ್ತಿಯಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದು ಸಂಬಂಧಪಟ್ಟ ಅಧಿಕಾರಿಗಳು ಕಾನೂನು ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ದಲಿತ ಚಳವಳಿ ನವ ನಿರ್ಮಾಣ ವೇದಿಕೆ ಆಗ್ರಹಿಸಿದೆ.

ಇಂದು ಪಟ್ಟಣದ ಪತ್ರಕರ್ತರ ಸಂಘದ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪದಾಧಿಕಾರಿಗಳು, ಪಿರಿಯಾಪಟ್ಟಣ ತಾಲೂಕು ಹಸುವಿನ ಕಾವಲು ಗ್ರಾಮದಲ್ಲಿರುವ ರಾಮಾಯಣದ ಇತಿಹಾಸವುಳ್ಳ ಸೀತ ಬೆಟ್ಟದಲ್ಲಿ ಹಾಗೂ ನಿಲವಾಡಿ ಗ್ರಾಮ ಸರ್ವೆ ನಂಬರ್ 139 ಹಾಗೂ ಹಮ್ಮಿನಾವಲ್ ಸರ್ವೆ ನಂಬರ್ 448ರಲ್ಲಿ ಅನೇಕ ಐತಿಹಾಸಿಕ ಪ್ರಸಿದ್ಧವಾದ ಚಾರಿತ್ರಿಕ ದೇವಸ್ಥಾನಗಳಿದ್ದು ಈ ಜಾಗದಲ್ಲಿ ಗಣಿ ಮಾಲೀಕರು ಅಕ್ರಮವಾಗಿ ಗಣಿಗಾರಿಕೆ ಮಾಡುತ್ತಿದ್ದು ಸರ್ಕಾರಕ್ಕೆ ಮೋಸ ಮಾಡುತ್ತಿರುವುದು ಒಂದೆಡೆಯಾದರೆ ಈ ಸುತ್ತಮುತ್ತಲ ಪ್ರದೇಶಗಳಾದ ದೇವಪುರ, ಬ್ಯಾಡರಬೆಳಗೊಳಿ, ರಾಗಿ ಆಳದಮರ, ಬೆಟ್ಟದಪುರ, ಕೂರಗಲ್ಲು ಹಾಗೂ ತರಿ ಕಲ್ಲು ಗ್ರಾಮಗಳು ಸೇರಿದಂತೆ ಇನ್ನಿತರ ಗ್ರಾಮದ ಬಡ ರೈತರ ಮನೆಗಳಿಗೆ ಇದರಿಂದ ಅಪಾಯವಾಗುತ್ತಿದೆ ಎಂದು ಅವರು ಆಪಾದಿಸಿದರು.

ಈ ಜಾಗದಲ್ಲಿ ಕೊಳವೆ ಬಾವಿಗಳು ಉಪಯೋಗಕ್ಕೆ ಬಾರದಂತೆ ನಿಷ್ಕ್ರಿಯವಾಗಿದ್ದು, ಈ ಪ್ರದೇಶದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಜನಾಂಗದ ಸ್ಮಶಾನ ಮತ್ತು ಸರ್ಕಾರಿ ಆಸ್ತಿಯನ್ನು ಈ ಗಣಿ ಉದ್ಯಮಿಗಳು ಅತಿಕ್ರಮಿಸಿಕೊಂಡಿರುವುದು ಕಂಡು ಬಂದಿದೆ. ಇದರ ಬಗ್ಗೆ ತಾಲೂಕು ದಂಡಾಧಿಕಾರಿ ಅವರಿಗೆ ನಾವು ಮನವಿ ಮಾಡಿದ ಹಿನ್ನೆಲೆಯಲ್ಲಿ ಅವರು ಸ್ಥಳಕ್ಕೆ ಭೇಟಿ ನೀಡಿ ಅಕ್ರಮ ಗಣಿಗಾರಿಕೆ ಮಾಡುತ್ತಿರುವುದನ್ನು ಪರಿಶೀಲಿಸಿ ಇದರ ಬಗ್ಗೆ ಮೇಲಾಧಿಕಾರಿಗಳಿಗೆ ವರದಿ ನೀಡುವುದಾಗಿ ಭರವಸೆ ನೀಡಿದ್ದಾರೆ. ಆದ್ದರಿಂದ ಅಧಿಕಾರಿಗಳು ಯಾವುದೇ ಪ್ರಭಾವಕ್ಕೆ ಒಳಗಾಗದೆ ಈ ರೀತಿಯ ಅಕ್ರಮ ಗಣಿಗಾರಿಕೆಗೆ ತಡೆ ನೀಡಿ ಕಾನೂನು ಕ್ರಮ ಕೈಗೊಳ್ಳಲು ಕರ್ನಾಟಕ ದಲಿತ ಚಳುವಳಿ ನವ ನಿರ್ಮಾಣ ವೇದಿಕೆ ಆಗ್ರಹಿಸಿದೆ

ಪತ್ರಿಕಾಗೋಷ್ಠಿಯಲ್ಲಿ ದಲಿತ ಚಳುವಳಿ ನವ ನಿರ್ಮಾಣ ವೇದಿಕೆಯ ಪದಾಧಿಕಾರಿಗಳಾದ ಸುರೇಶ್, ಪುಟ್ಟಯ್ಯ, ಈರಯ್ಯ, ವಿಜಯ್ ಕುಮಾರ್, ಎಚ್.ಡಿ. ರಮೇಶ್ ನಾರಾಯಣ್, ಗೋವಿಂದನಾಯಕ ಪುಟ್ಟಯ್ಯ, ಕಾಳೇಗೌಡ ಸೇರಿದಂತೆ ಇನ್ನಿತರರು ಹಾಜರಿದ್ದರು.

ಸಂಚಾರ ನಿಯಮಗಳನ್ನು ಪಾಲಿಸಿ, ಅಮೂಲ್ಯವಾದ ಜೀವವನ್ನು ಉಳಿಸಿ



ನಂಜನಗೂಡು, ಸೆ.14– ಹೆಲ್ಮೆಟ್ ರಹಿತ ಪ್ರಯಾಣ, ಸಂಚಾರಿ ನಿಯಮಗಳ ಉಲ್ಲಂಘನೆಯಿಂದಾಗಿ ದಿನನಿತ್ಯ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಸಾರ್ವಜನಿಕರು ಮತ್ತು ವಾಹನ ಸವಾರರು ಸಂಚಾರಿ ನಿಯಮಗಳನ್ನು ಪಾಲಿಸಿ, ಅಮೂಲ್ಯವಾದ ಜೀವವನ್ನು ಉಳಿಸಿಕೊಳ್ಳಬೇಕು ಎಂದು ಡಿವೈಎಸ್ಪಿ ಗೋವಿಂದರಾಜು ಹೇಳಿದರು.

ನಗರದ ಹುಲ್ಲಹಳ್ಳಿ ವೃತ್ತದ ಬಳಿ ಸಂಚಾರಿ ಪೊಲೀಸ್ ಠಾಣೆ, ಪಟ್ಟಣ ಪೊಲೀಸ್ ಠಾಣೆ ವತಿಯಿಂದ ಏರ್ಪಡಿಸಿದ್ದ ಹೆಲ್ಮೆಟ್ ಅಭಿಯಾನ ಮತ್ತು ಸಂಚಾರ ಅರಿವು ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಇತ್ತೀಚಿನ ಯುವಕರು ಸಂಚಾರಿ ನಿಯಮಗಳನ್ನು ಪಾಲಿಸದೆ ಅಡ್ಡಾದಿಡ್ಡಿಯಾಗಿ ವಾಹನ ಚಾಲನೆ ಮಾಡುವುದು, ಅಲ್ಲದೆ ಹೆಲ್ಮೆಟ್ ರಹಿತ ಪ್ರಯಾಣ ಮಾಡುವುದರಿಂದಾಗಿ ದಿನನಿತ್ಯ ರಸ್ತೆ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿದೆ. ಆದ್ದರಿಂದ ವಾಹನ ಸವಾರರು ಮತ್ತು ಸಾರ್ವಜನಿಕರು ಸಂಚಾರಿ ನಿಯಮಗಳನ್ನು ಪಾಲಿಸಲು ಮುಂದಾಗಬೇಕು, ಜೊತೆಗೆ ಹೆಲ್ಮೆಟ್ ಧರಿಸದಿದ್ದರೆ ಪೊಲೀಸರು ಹಿಡಿಯುತ್ತಾರೆ ಎಂಬ ಭಯದಿಂದ ಧರಿಸದೆ ನಿಮ್ಮ ಅಮೂಲ್ಯವಾದ ಜೀವವನ್ನು ಉಳಿಸಿಕೊಳ್ಳಲು ಬಳಸಲು ಮುಂದಾಗಬೇಕು ಎಂದು ಸಲಹೆ ನೀಡಿದರು.

ಸಂಚಾರಿ ಪೊಲೀಸ್ ಠಾಣೆಯ ಪಿಎಸ್‌ಐ ಜಯಪ್ರಕಾಶ್ ಮಾತನಾಡಿ, ಕುಡಿದು ವಾಹನ ಚಾಲನೆ ಮಾಡುವುದು ಅಪರಾಧ, ಅಲ್ಲದೆ ಅಪ್ರಾಪ್ತರ ಕೈಗೆ ವಾಹನಗಳನ್ನು ನೀಡುವುದು ಸಹ ಅಪರಾಧ. ಇದರಿಂದಾಗಿ ಅಪಘಾತ ಸಂಭವಿಸಿ ಕುಟುಂಬಗಳು ಬೀದಿ ಪಾಲಾಗಿವೆ. ಆದ್ದರಿಂದ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು, ಜೊತೆಗೆ ವಾಹನ ಚಾಲನೆ ಮಾಡುವಾಗ ಮೊಬೈಲ್ ಬಳಕೆ ಮಾಡಬಾರದು. ತಪ್ಪಿದಲ್ಲಿ ದಂಡ ತೆರಬೇಕಾಗುತ್ತದೆ. ಆದ್ದರಿಂದ ವಾಹನ ಸವಾರರು ಸಂಚಾರಿ ನಿಯಮಗಳನ್ನು ಪಾಲಿಸಿ, ಪೊಲೀಸರೊಂದಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಸಿಟಿಜನ್ ಶಾಲೆಯ ವಿದ್ಯಾರ್ಥಿಗಳ ಜೊತೆಗೂಡಿ ನಗರದ ಆರ್ಪಿ ರಸ್ತೆ, ಎಂಜಿಎಸ್ ರಸ್ತೆ ಸೇರಿದಂತೆ ನಗರದ ಪ್ರಮುಖ ರಸ್ತೆಗಳಲ್ಲಿ ಜಾಗೃತಿ ಜಾಥಾವನ್ನು ನಡೆಸಲಾಯಿತು.

ಇದೇ ಸಂದರ್ಭದಲ್ಲಿ ಪಿಎಸ್‌ಐಗಳಾದ ಯಾಸ್ಮಿನ್ ತಾಜ್, ಪ್ರಕಾಶ್ ಸಿದ್ದಪ್ಪ ಮದ್ದೂರು, ಎಎಸ್‌ಐ ಪಾಪೇಗೌಡ, ಸಿಬ್ಬಂದಿಗಳಾದ ಅನಂತು, ಶರಣಪ್ಪ ಇತರರಿದ್ದರು.

ಜಾತಿ, ಅನ್ಯಾಯದ ವಿರುದ್ಧ ದನಿಯಾಗಿದ್ದ ನಾರಾಯಣ ಗುರು



ಸರಗೂರು, ಸೆ14– ನಾರಾಯಣ ಗುರುಗಳು ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆಯ ಬಗ್ಗೆ ತೀವ್ರ ಅಸಮ್ಮತಿ ಹೊಂದಿದ್ದರು ಮತ್ತು ಅನ್ಯಾಯದ ವಿರುದ್ಧ ಯಾವಾಗಲೂ ದನಿಯಾಗಿದ್ದರು ಎಂದು ಜಿಲ್ಲಾ ದೈಹಿಕ ಶಿಕ್ಷಕ ಸಂಘದ ಅಧ್ಯಕ್ಷ ಜಿ.ನಾಗೇಶ್ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯ ವತಿಯಿಂದ ನಡೆಸಲಾದ ನಾರಾಯಣ ಗುರುಗಳ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ನಾರಾಯಣ ಗುರುಗಳು ಜಾತಿ, ಧರ್ಮದ ಭೇದವಿಲ್ಲದೆ ಪ್ರತಿಯೊಬ್ಬರಿಗೂ ದೇವರನ್ನು ಸಾಕ್ಷಾತ್ಕರಿಸಿಕೊಳ್ಳುವ ಹಕ್ಕಿದೆ ಎಂದು ಪ್ರತಿಪಾದಿಸಿದರು. ನಂತರದ ವರ್ಷಗಳಲ್ಲಿ, ಅವರು ಕೇರಳದ ವಿವಿಧ ಪ್ರದೇಶಗಳಲ್ಲಿ ಕ್ರಾಂತಿಕಾರಿ ಬದಲಾವಣೆಗಳಿಗೆ ಹಲವಾರು ದೇವಾಲಯಗಳನ್ನು ಅರ್ಪಿಸಿದರು. ಸಾಮಾಜಿಕ ಸ್ತರದ ವಿದ್ಯಾರ್ಥಿಗಳಿಗೆ ಶಾಲೆಯನ್ನು ಸ್ಥಾಪಿಸಿದರು ಮತ್ತು ಅವರ ಜಾತಿಯನ್ನು ಲೆಕ್ಕಿಸದೆ ಉಚಿತ ಶಿಕ್ಷಣವನ್ನು ನೀಡಿದರು. ಜಾತಿ ಆಧಾರಿತ ತಾರತಮ್ಯ ನಿಲ್ಲಲು ಶ್ರೀ ನಾರಾಯಣ ಗುರುಗಳ ಕೊಡುಗೆ. ಅಪಾರವಾದದು ಎಂದರು. ತಹಸೀಲ್ದಾರ್ ಪರಶಿವಮೂರ್ತಿ ನಾರಾಯಣ ಗುರುಗಳ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿ, ಮಾನವೀಯತೆ ಮಲಗಿ, ಮೂಢನಂಬಿಕೆಗಳು ಎದ್ದಿದ್ದ ಕಾಲದಲ್ಲಿ ಮಹಾನ್ ಮಾನವತಾವಾದಿಯಾಗಿ ಸಮಾಜದ ಕಣ್ಣರಳಿಸಿದ ದಾರ್ಶನಿಕ ಬ್ರಹ್ಮಶ್ರೀ ನಾರಾಯಣ ಗುರು ಎಂದರು. ಪಪಂ ಸ್ಥಾಯಿ ಸಮಿತಿ ಅಧ್ಯಕ್ಷೆ ಉಮಾ ರಾಮು, ಸದಸ್ಯರಾದ ಶ್ರೀನಿವಾಸ್, ನೂರಾಳಸ್ವಾಮಿ, ಸ್ವಾಮಿ, ವೀರೇಶ್, ಚಲುವ ಕೃಷ್ಣ, ವರ್ತಕರ ಸಂಘದ ಅಧ್ಯಕ್ಷ ಶ್ರೀನಿವಾಸ್, ಆರ್ಯಈಡಿಗ ಸಮಾಜದ ಯಜಮಾನರಾದ ತಮ್ಮಯ್ಯಗೌಡ್ರು, ರವಿಗೌಡ್ರು, ಅಧ್ಯಕ್ಷ ತಿಮ್ಮೇಗೌಡರು, ಮುಖಂಡರಾದ ವೆಂಕಟೇಶ್, ಪಾಪೇಗೌಡ್ರು, ಎಸ್.ಕೆ. ನಾಗರಾಜು, ಎಸ್.ಎನ್. ನಾಗರಾಜು, ಎಸ್.ಕೆ.ರಂಗಣ್ಣ, ನಾಗರಾಜು, ಶ್ರೀನಾಥ್, ಅಶ್ವತ, ಸುರೇಶ್, ಶಿವು, ಕಾಳಿಪ್ರಸಾದ್, ಹಾಗೂ ಕಂದಾಯ ಇಲಾಖೆ ಅಧಿಕಾರಿ ವರ್ಗದವರು ಭಾಗಿಯಾಗಿದ್ದರು.

ಪ್ರೀತಂಗೌಡ ಸ್ಮರಣೆ

ಬನ್ನೂರು, ಸೆ14– ಜೆಡಿಎಸ್ ಮುಖಂಡರಾಗಿ ಪಕ್ಷವನ್ನು ಸಂಘಟಿಸುವಲ್ಲಿ ಪ್ರಮುಖ ಕಾರ್ಯವನ್ನು ನಿರ್ವಹಿಸುತ್ತಿದ್ದ ಪ್ರೀತಂ ಗೌಡರ ಅಕಾಲಿಕ ಮರಣ ಕಾರ್ಯಕರ್ತರಲ್ಲಿ ನೋವನ್ನುಂಟು ಮಾಡಿದೆ ಎಂದು ಜೆಡಿಎಸ್ ಮುಖಂಡ ವೈ.ಎಸ್.ರಾಮಸ್ವಾಮಿ ತಿಳಿಸಿದರು. ಸಂತೇಮಾಳದಲ್ಲಿ ಹಮ್ಮಿಕೊಳ್ಳಲಾದ ಪ್ರೀತಂಗೌಡರ ನೆನಪು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಯಾವುದೇ ಕಾರ್ಯಕ್ರಮದಲ್ಲೂ ಸಕ್ರಿಯವಾಗಿ ಪಾಲ್ಗೊಂಡು ಜೆಡಿಎಸ್ ಅಭಿವೃದ್ಧಿಗೆ ತನ್ನನ್ನು ಅರ್ಪಿಸಿಕೊಳ್ಳುತ್ತ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು. ಅಂತಹ ವ್ಯಕ್ತಿ ಇಂದು ನಮ್ಮೊಂದಿಗೆ ಇಲ್ಲದಿರುವುದು ಬಹಳಷ್ಟು ನಷ್ಟವನ್ನುಂಟು ಮಾಡಿದೆ ಎಂದರು.

ಬಿಜೆಪಿ–ಜೆಡಿಎಸ್ ಮೈತ್ರಿಯಿಂದ ಕಾಂಗ್ರೆಸ್‌ಗೆ ಯಾವುದೇ ನಷ್ಟವಿಲ್ಲ



ತಿ.ನರಸೀಪುರ, ಸೆ.14– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಜನತಾದಳ ಮತ್ತು ಬಿಜೆಪಿ ಪಕ್ಷಗಳು ಮೈತ್ರಿ ಮಾಡಿಕೊಂಡರೂ ಕಾಂಗ್ರೆಸ್ ಪಕ್ಷಕ್ಕೆ ಯಾವುದೇ ನಷ್ಟವಿಲ್ಲ ಮತ್ತು 20ಕ್ಕೂ ಹೆಚ್ಚು ಸ್ಥಾನಗಳಲ್ಲಿ ಕಾಂಗ್ರೆಸ್ ಗೆಲುವು ಖಚಿತ ಎಂದು ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಕಾರ್ಯದರ್ಶಿ ಹಾಗೂ ಮಾಜಿ ಜಿಲ್ಲಾಧ್ಯಕ್ಷ ಮೊಸಿನ್ ಖಾನ್ ತಿಳಿಸಿದ್ದಾರೆ.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಜನತಾದಳ ಕೋಮುವಾದಿ ಬಿಜೆಪಿ ಪಕ್ಷದ ಜೊತೆ ಮೈತ್ರಿ ಮಾಡಿಕೊಳ್ಳುವ ವಿಚಾರ ಹೊಸದೇನಲ್ಲ, ಹಿಂದಿನಿಂದಲೂ ಜನತಾದಳದ ನಾಯಕರು ಅನೇಕ ಚುನಾವಣೆಗಳಲ್ಲಿ ಬಿಜೆಪಿಯವರ ಜೊತೆ ಒಳ ಒಪ್ಪಂದ ಮಾಡಿಕೊಂಡು ಚುನಾವಣೆಗಳನ್ನು ನಡೆಸಿರುವುದು ರಾಜ್ಯದ ಜನತೆಗೆ ತಿಳಿದಿರುವ ವಿಚಾರ,ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹೀನಾಯ ಸೋಲು ಅನುಭವಿಸಿರುವ ಈ ಎರಡೂ ಪಕ್ಷದ ನಾಯಕರು ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಮೈತ್ರಿ ಮಾಡಿಕೊಳ್ಳಲು ಮುಂದಾಗಿದ್ದಾರೆಯೇ ಹೊರತು ರಾಜ್ಯದ ಅನುಕೂಲಕ್ಕಾಗಿ ಅಲ್ಲ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿ ಜನಪರ ಆಡಳಿತ ನೀಡುತ್ತಿರುವುದನ್ನು ಕಂಡು, ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ತಮ್ಮ ಪಕ್ಷಗಳಿಗೆ ಉಳಿಗಾಲವಿಲ್ಲವೆಂದು ಅರಿತಿರುವ ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳು, ಮೈತ್ರಿ ಮಾಡಿಕೊಂಡು ಲೋಕಸಭಾ ಚುನಾವಣೆ ಎದುರಿಸಿದರೆ ಕಾಂಗ್ರೆಸ್ ಪಕ್ಷವನ್ನು ಸೋಲಿಸಬಹುದು ಎಂಬ ಭ್ರಮೆಯಲ್ಲಿದ್ದಾರೆ ಎಂದರು.

ಜೆಡಿಎಸ್ ಪಕ್ಷವು ಬಹಿರಂಗವಾಗಿ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳುವ ವಿಚಾರವನ್ನು ಮಾತನಾಡುವ ಮೂಲಕ ತಾವು ಬಿಜೆಪಿಯ ಬಿ.ಟೀಮ್ ಎಂಬುದನ್ನು ಸಾಬೀತು ಮಾಡಿದ್ದಾರೆ.

ಇವರು ಏನೇ ಮೈತ್ರಿ ಮಾಡಿಕೊಂಡರೂ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ಇಪ್ಪತ್ತಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು ಖಚಿತ ಎಂದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಮಾರ್ಕ್ ಆಂಟೋಣಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ತತ್ಸಮ ತದ್ಭವ(ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಜವಾನ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಸಪ್ತಸಾಗರದಾಚೆ ಎಲ್ಲೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಪ್ತಸಾಗರದಾಚೆ ಎಲ್ಲೋ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಮಾರ್ಕ್ ಆಂಟೋಣಿ (ತ)	4 ಪ್ರದರ್ಶನಗಳು
ಸಂಗಂ	
ಜವಾನ್ (ಹಿ)	4 ಪ್ರದರ್ಶನಗಳು
ಲಿಡೋ	
ಋಷಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಜವಾನ್ (ಹಿ)	4 ಪ್ರದರ್ಶನಗಳು
ಪ್ರಭಾ	
ನಮೋ ಭೂತಾತ್ಮ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಸಪ್ತಸಾಗರದಾಚೆ ಎಲ್ಲೋ (ಕ): ಬೆ.10.15ಕ್ಕೆ, ಮ.1.05ಕ್ಕೆ, ರಾ.7.05ಕ್ಕೆ, ರಾ.9.55ಕ್ಕೆ, ಜವಾನ್ (ಹಿಂ): ಮ.3.55ಕ್ಕೆ.
ಸ್ಕ್ರೀನ್ 2	ತತ್ಸಮ ತದ್ಭವ (ಕ): ಬೆ.11ಕ್ಕೆ, ರಾ.7.10ಕ್ಕೆ, ರಾ.9.45ಕ್ಕೆ, 13 ಪಾರ್ಟ್ 1 (ಕ): ಮ.1.45ಕ್ಕೆ, ಮಿಸ್ ಶೆಟ್ಟಿ ಮಿಸ್ಟರ್ ಪೊಲಿಶೆಟ್ಟಿ (ತೆ): ಸಂ.4.15ಕ್ಕೆ.
ಸ್ಕ್ರೀನ್ 3	ಪರಿಮಳಾ ಡಿಸೋಜಾ (ಕ): ಬೆ.11ಕ್ಕೆ, ದಿ ನನ್ 2 (ಇಂ): ಮ.1.45ಕ್ಕೆ, ಮಾರ್ಕ್ ಆಂಟೋನಿ (ತ): ಸಂ.4.15ಕ್ಕೆ, ಎ ಹಾಂಟಿಂಗ್ ಇನ್ ವೆನಿಸ್ (ಇಂ): ರಾ.7.15ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.9.45ಕ್ಕೆ, ಮ.1ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ತತ್ಸಮ ತದ್ಭವ (ಕ): ಬೆ.11.10ಕ್ಕೆ, ಸಂ.4.45ಕ್ಕೆ, ಸಪ್ತಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ರಾ.7.20ಕ್ಕೆ, ಮಾರ್ಕ್ ಆಂಟೋನಿ (ತ): ರಾ.10.20ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಬೆ.11.15ಕ್ಕೆ, ಮ.2.50ಕ್ಕೆ, ಸಂ.6.25ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ಜವಾನ್ (ಹಿಂ): ಬೆ.10.15ಕ್ಕೆ, ಮ.1.50ಕ್ಕೆ, ಸಂ.5.25ಕ್ಕೆ, ರಾ.9ಕ್ಕೆ.
ಸ್ಕ್ರೀನ್ 4	ಪರಿಮಳಾ ಡಿಸೋಜಾ (ಕ): ಬೆ.10.30ಕ್ಕೆ, 13 (ಕ): ಮ.1.20ಕ್ಕೆ, ಮಾರ್ಕ್ ಆಂಟೋನಿ (ತ): ಸಂ.4.20ಕ್ಕೆ, ಟೇಲ್ ಆಫ್ ಮಹಾನಗರ (ಕ): ರಾ.7.30ಕ್ಕೆ, ಕಾಸರ್‌ಗೋಲ್ಡ್ (ಮ): ರಾ.10.30ಕ್ಕೆ.

ಮೈಸೂರು ವಿಷನ್ ಸಿನಿಮಾ
MVC
ದೂ : 0821–2973519

ಸ್ಕ್ರೀನ್ 1	ಈ ಪಟ್ಟಣಕ್ಕೆ ಏನಾಗಿದೆ (ಕ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.15ಕ್ಕೆ, ಶೀಲಾ (ಕ): ಸಂ.4.15ಕ್ಕೆ, ಡಿಡಿ ರಿಟರ್ನ್ಸ್ (ತ): ಸಂ.6.30ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಕೌಸಲ್ಯ ಸುಪ್ರಜಾ ರಾಮ (ಕ): ಬೆ.1.15ಕ್ಕೆ, ರಾ.7ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ) ಸಂ.4.15ಕ್ಕೆ.
ಸ್ಕ್ರೀನ್ 3	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10.30ಕ್ಕೆ, ಸಂ.4ಕ್ಕೆ, ಮೆಗ್ 2 ದಿ ಟ್ರೆಂಚ್ (3ಡಿ) (ಇಂ): ಮ.1.20ಕ್ಕೆ, ಸಂ.6.55ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 4	ಮೆಗ್ 2 ದಿ ಟ್ರೆಂಚ್ (3ಡಿ)(ಇಂ): ಬೆ.10.45ಕ್ಕೆ, ನಮೋ ಭೂತಾತ್ಮ (ಕ): ಮ.1.10ಕ್ಕೆ, ಮ.3.50ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಸಂ.6.30ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, **ಜೈಲರ್ (ಕ):** ಬೆ.8.25ಕ್ಕೆ, ಮ.3.10ಕ್ಕೆ, **ಓಎಂಜಿ 2 (ಹಿಂ):** ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, **ಗದರ್ 2 (ಹಿಂ):** ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, **ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ):** ರಾ.9.45ಕ್ಕೆ, **ಆಚಾರ್ & ಕೋ (ಕ):** ಮ.3.55ಕ್ಕೆ, **ಕೌಸಲ್ಯ ಸುಪ್ರಜಾ ರಾಮ (ಕ):** ಮ.3.25ಕ್ಕೆ, ರಾ.10.30ಕ್ಕೆ, **ನಮೋ ಭೂತಾತ್ಮ (ಕ):** ಬೆ.11.55ಕ್ಕೆ, **ರಾಖಿ ಔರ್ ರಾಣಿ (ಹಿಂ):** ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, **ಓಪನ್‌ಹೈಮರ್ (ಇಂ):** ಸಂ.6.35ಕ್ಕೆ, **ಭೋಲಾ ಶಂಕರ್ (ತೆ):** ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, **ಮೆಗ್ 2 (ಇಂ):** ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ರೇಸುಗಳು

4ನೇ ದಿನ, ಶುಕ್ರವಾರ 15-9-2023

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಶಿವಕಾಶಿ ಪ್ಲೇಟ್–1200 ಮೀ. ರೇಟೆಡ್ 00 ರಿಂದ 25. (ಮೈಸೂರ್ ಬೇಸ್ಡ್ ಹಾರ್ಸ್). ಮ.2.00ಕ್ಕೆ
1. ವಾರ್‌ಸಾಂಗ್ 2. ಡಿ ಗೋಲ್ಡನ್ ಕಪ್ 3. ಇನ್‌ಫಿನಿಟಿ ಗ್ರೇಸ್

II. ಪಾಡ್ಡಕ್ ಪ್ಲೇಟ್–1600 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1. ಸದರನ್ ಅರಿಸ್ಟೋಕ್ರಾಟ್ 2. ಎಲೈಟ್ ಏಜೆಂಟ್ 3. ಟ್ವಿನ್ ಫ್ಲೇಮ್

III. ಪೊಲೀಸ್ ಟ್ರೋಫಿ–1200 ಮೀ. ರೇಟೆಡ್ 40 ರಿಂದ 65. ಮ.3.00ಕ್ಕೆ
1 ಆರ್ಚ್ ವೇ 2. ಗಲಾಟಿಕಸ್ 3 ಸ್ಪಿರಿಟ್ ಆಫ್ ರೋಸ್

IV. M.W.ಚಿನ್ನಪ್ಪ ಮೆಮೋರಿಯಲ್ ಟ್ರೋಫಿ ರೇಟೆಡ್ 60 ಮತ್ತು ಮೇಲ್ಪಟ್ಟ. ಮ.3.30ಕ್ಕೆ
1. ಆಲ್‌ಡಿ ಗೇಟ್ 2. ಇಂಗ್ಲೀಷ್ ಬೇ 3. ಮಿಚಿಗನ್ ಮೆಲೋಡಿ

V. F.K.ಇರಾಣಿ ಮೆಮೋರಿಯಲ್ ಮಿಲಿಯನ್–2023 (3 ವರ್ಷ ಟರ್ಮ್ಸ್). ಸಂ.4.00ಕ್ಕೆ
1. ಲೆದರ್ ಬ್ಯಾಕ್ 2. ಲಾಂಗ್ ಲೀಸ್

VI. ಯಲಹಂಕ ಪ್ಲೇಟ್–1100 ಮೀ. ರೇಟೆಡ್ 40 ರಿಂದ 65. (ಮೈಸೂರ್ ಬೇಸ್ಡ್ ಹಾರ್ಸ್) ಸಂ.4.30ಕ್ಕೆ
1 ಪ್ಯೂರಿಯಸ್ ಫನ್ 2. ಬಯೋಮೆಟ್ರಿಕ್ 3. ಮಾರ್ಕ್ ಒನ್

VII. ಜೋಗ್‌ಫಾಲ್ಸ್ ಪ್ಲೇಟ್–1600 ಮೀ. ರೇಟೆಡ್ 20 ರಿಂದ 45.(ಮೈಸೂರ್ ಬೇಸ್ಡ್ ಹಾರ್ಸ್). ಸಂ.5.00ಕ್ಕೆ
1. ಫ್ರೀ ಸ್ಪಿರಿಟ್ 2. ವಿಜಯ ಸಾರಥಿ 3. ಸ್ಕೈ ಸ್ಟ್ರಾಮ್

ದಿನದ ಅತ್ಯುತ್ತಮ	: ಲೆದರ್ ಬ್ಯಾಕ್
ಡಬ್ಬಲ್	: ಸದರನ್ ಅರಿಸ್ಟೋಕ್ರಾಟ್, ಪ್ಯೂರಿಯಸ್ ಫನ್
ಜಾಕ್‌ಪಾಟ್	: 3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	: 4, 5, 6 ಮತ್ತು 7
I ಟ್ರಿಬಲ್	: 2, 3 ಮತ್ತು 4
II ಟ್ರಿಬಲ್	: 5, 6 ಮತ್ತು 7
ಎಕ್ಸ್‌ಆಕ್ಟ್	: 1 ರಿಂದ 7

ಟಿಪ್‌ಸ್ಟರ್ ಪಿಜಿಸಿ

ಸ್ಥಾಪನೆ: 1923

ದಿ ಗ್ರಾಜ್ಯುಯೇಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ.,

ಚಾಮರಾಜ ಜೋಡಿ ರಸ್ತೆ, ಮೈಸೂರು–570024

ದೂರವಾಣಿ: 0821–2442864 ಮೊಬೈಲ್: 9972039899

99ನೇ ವಾರ್ಷಿಕ ಮಹಾಸಭೆಯ ಸೂಚನಾ ಪ್ರಕಟಣೆ

ಮಾನ್ಯ ಸದಸ್ಯರುಗಳೇ,

ಈ ಬ್ಯಾಂಕಿನ 2022–23 ನೇ ಸಾಲಿನ 99ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ 17.09.2023 ರಂದು ಭಾನುವಾರ ಬೆಳಗ್ಗೆ 10.00 ಗಂಟೆಗೆ ಸರಿಯಾಗಿ ಮೈಸೂರು ನಗರದ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ನಡೆಸಲು ಏರ್ಪಾಡು ಮಾಡಲಾಗಿರುತ್ತದೆ.

ನಮ್ಮ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎನ್.ಶ್ರೀನಿವಾಸ ಬಿ.ಕಾಂ.,ಎಲ್.ಎಲ್.ಬಿ. ಇವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಿರುತ್ತದೆ.

ಈಗಾಗಲೇ ಮಾನ್ಯ ಸದಸ್ಯರುಗಳಿಗೆ ವಾರ್ಷಿಕ ಮಹಾಸಭೆಯ ಸೂಚನಾ ಪ್ರಕಟಣೆಯನ್ನು ಅಂಚೆ ಮೂಲಕ ಕಳುಹಿಸಲಾಗಿದ್ದು, ಒಂದು ವೇಳೆ ಸೂಚನಾ ಪ್ರಕಟಣೆಯು ತಲುಪದೇ ಇದ್ದಲ್ಲಿ ಇದನ್ನೇ ಆಹ್ವಾನವೆಂದು ಪರಿಗಣಿಸಿ ಮಾನ್ಯ ಸದಸ್ಯರುಗಳು ತಮ್ಮ ಷೇರು ಪಾಸ್ ಪುಸ್ತಕವನ್ನು ಕಡ್ಡಾಯವಾಗಿ ತಂದು ಮಹಾಸಭೆಯಲ್ಲಿ ಭಾಗವಹಿಸಲು ಕೋರಲಾಗಿದೆ.

ದಿನಾಂಕ: 13.09.2023 ಸಹಿ:– ಶ್ರೀ.ಟಿ.ವಿ.ಮಹೇಶ್, ಪ್ರಭಾರ ವ್ಯವಸ್ಥಾಪಕರು

ಅಧ್ಯಕ್ಷರು : ಶ್ರೀ.ಎನ್.ಶ್ರೀನಿವಾಸ, **ಉಪಾಧ್ಯಕ್ಷರು** : ಶ್ರೀ.ಆರ್.ಅನಂತರಾಮು, **ನಿರ್ದೇಶಕರುಗಳಾದ** ಪ್ರೊ.ಪಿ.ವಿ.ನರಹರಿ, ಶ್ರೀ.ಕೆ.ಜಿ.ಸತೀಶ್, ಶ್ರೀಮತಿ ಎಂ.ಎ.ಹೇಮಲತ, ಶ್ರೀ.ಟಿ.ಎಸ್.ರವಿಶಂಕರ್, ಶ್ರೀ.ಎಸ್.ಎನ್.ಜಗದೀಶ್, ಶ್ರೀಮತಿ.ಸುಜಾತವೆಂಕಟರಾಜು, ಡಾ.ಕೆ.ವಿ.ಲಕ್ಷ್ಮೀದೇವಿ, ಡಾ–ಸುಜಾತ.ಎಸ್.ರಾವ್, ಶ್ರೀಮತಿ.ಸಿ.ಕಮಲಮ್ಮ, ಶ್ರೀ.ಎಂ.ಎಸ್.ರಾಜಾರಾಂ, ವೃತ್ತಿಪರ ನಿರ್ದೇಶಕರಾದ ಶ್ರೀ.ಟಿ.ಎನ್.ಸುಬ್ರಹ್ಮಣ್ಯ, ಶ್ರೀ.ಎಂ.ಆರ್.ಗೋವಿಂದರಾಜು.

ವಿಶೇಷ ಸೂಚನೆ :

1. ಬ್ಯಾಂಕಿನ 2022–23 ನೇ ಸಾಲಿನ ಲಾಭ–ನಷ್ಟದ ತಃಖ್ತೆ ಹಾಗೂ ಆಸ್ತಿ–ಜವಾಬ್ದಾರಿ ತಃಖ್ತೆಗಳನ್ನು ವೆಬ್‌ಸೈಟ್ www.gcbmys.in ರಲ್ಲಿಯೂ ಸಹ ಪರಿವೀಕ್ಷಿಸಲು ಲಭ್ಯವಿರುತ್ತದೆ.
2. ಮಾನ್ಯ ಸದಸ್ಯರುಗಳಿಗೆ ಶತಮಾನೋತ್ಸವ ಸಮಾರಂಭದ ಸವಿನೆನಪಿನಲ್ಲಿ ನೆನಪಿನ ಕಾಣಿಕೆ'ಯನ್ನು ದಿನಾಂಕ 16.09.2023 ರಿಂದ ನೀಡಲಾಗುತ್ತದೆ.
ಮಾನ್ಯ ಸದಸ್ಯರುಗಳು ಖಡ್ಡಾಯವಾಗಿ ತಮ್ಮ ಷೇರು ಪಾಸ್ ಪುಸ್ತಕವನ್ನು ಹಾಜರುಪಡಿಸಿ ನೆನಪಿನ ಕಾಣಿಕೆ ಯನ್ನು ಸ್ವೀಕರಿಸಲು ಕೋರಲಾಗಿದೆ.
3. ಸದಸ್ಯರು/ಸದಸ್ಯರೇತರುಗಳಿಗೆ ಅತ್ಯಂತ ಕಡಿಮೆ ಬಡ್ಡಿ ದರದಲ್ಲಿ ಅಂದರೆ ಶೇಕಡ 9% ರೀತ್ಯಾ ಚಿನ್ನದಾಭರಣ ಸಾಲವನ್ನು ಮಂಜೂರು ಮಾಡುತ್ತಲಿದ್ದು, ಅವಶ್ಯಕತೆಯುಳ್ಳವರು ಪಡೆಯಬಹುದಾಗಿರುತ್ತದೆ.

ಮೈಸೂರು ಮಿತ್ರ 44

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ರಿ.ನಂ: 24109/98–99. ದೂರವಾಣಿ ಸಂಖ್ಯೆ : 08223-297377

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿ., ನೌಕರರ ವಿವಿದೋದ್ದೇಶ ಸಹಕಾರ ಸಂಘ ನಿ.,

3ನೇ ಕ್ರಾಸ್, 17ನೇ ವಾರ್ಡ್, ಸುಭಾಷ್ ನಗರ, ಕೃಷ್ಣರಾಜನಗರ ಟೌನ್, ಮೈಸೂರು ಜಿಲ್ಲೆ

ಕ.ರಾ.ರ.ಸಾ.ನಿ..ನೌ.ವಿ.ಸ.ಸಂ.ನಿ/ಕೃ.ರಾ.ನ/192/2023–2024. ದಿನಾಂಕ:–14–09–2023

ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ಮಾನ್ಯರೆ, ಮೇಲ್ಕಂಡ ನಮ್ಮ ಸಹಕಾರ ಸಂಘದ 2022–2023 ನೇ ಸಾಲಿನ 24ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ:– 17–09–2023 ನೇ ಭಾನುವಾರ ಬೆಳಗ್ಗೆ 10–30 ಗಂಟೆಗೆ ಶ್ರೀ ವಾಲ್ಮೀಕಿ ನಾಯಕರ ಸಮುದಾಯ ಭವನ, ಸಿಲ್ವರ್ ಜ್ಯೂಬಿಲಿ ರಸ್ತೆ, ಕೃಷ್ಣರಾಜನಗರ, ಮೈಸೂರು ಜಿಲ್ಲೆ ನಮ್ಮ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ಶಿವಾನಂದ ಕುಂಬಾರ ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ನಿರ್ದೇಶಕ ಮಂಡಳಿ ತೀರ್ಮಾನಿಸಿದೆ. ಸಹಕಾರ ಸಂಘದ ಎಲ್ಲಾ ಸದಸ್ಯರಿಗೂ ಆಹ್ವಾನ ಪತ್ರಿಕೆಗಳನ್ನು ಅಂಚೆಯಲ್ಲಿ ಕಳುಹಿಸಲಾಗಿದೆ. ತಲುಪದೆ ಇದ್ದಲ್ಲಿ ಇದೇ ಅಹ್ವಾನ ಪತ್ರಿಕೆಯೆಂದು ತಿಳಿದು ದಯಮಾಡಿ ಸದರಿ ವಾರ್ಷಿಕ ಮಹಾಸಭೆಗೆ ಭಾಗವಹಿಸಬೇಕಾಗಿ ವಿನಂತಿ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ, ಸಹಿ/– ಮುಖ್ಯಕಾರ್ಯನಿರ್ವಾಹಣಾಧಿಕಾರಿ

ಮೀನುಗಾರಿಕೆ ಸಹಾಯಕ ನಿರ್ದೇಶಕರು ರವರ ಕಛೇರಿ

ತಿ.ನರಸೀಪುರ.

ಸಂಖ್ಯೆ:ಮೀಸನಿ.ತಿ.ನ/ಹೊಗುವಾ/01/2023–24 ದಿನಾಂಕ:12.09.2023

ಅಲ್ಪಾವಧಿ ಟೆಂಡರ್ ಪ್ರಕಟಣೆ – ದ್ವಿಲಕೋಟೆ ಪದ್ಧತಿ

2023–24ನೇ ಸಾಲಿಗೆ ಹೊರಗುತ್ತಿಗೆ ಅಧಾರದ ಮೇಲೆ ವಾಹನ ಸೇವೆಯನ್ನು ಪಡೆಯಲು ಅರ್ಹ ಏಜೆನ್ಸಿಸ್ ರವರಿಂದ ಕರ್ನಾಟಕ ಪಾರದರ್ಶಕ ಅಧಿನಿಯಮ 1999–2000ರ ಮೇರೆಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಮೀನುಗಾರಿಕೆ ಸಹಾಯಕ ನಿರ್ದೇಶಕರು ಕಛೇರಿ, ತಿ.ನರಸೀಪುರ ಇಲ್ಲಿ ಪಡೆದು ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದಾಗಿದೆ. ವಿವರ ಈ ಕೆಳಕಂಡಂತೆ ಇರುತ್ತದೆ.

ವಿಷಯ: ಕ್ರ.ಸಂ.1. ಟೆಂಡರ್ ಫಾರಂ ಪಡೆಯಲು ಕೊನೆಯ **ದಿನಾಂಕ: 26.09.2023** ಸಂಜೆ 04–00 ಗಂಟೆ. **2.** ದ್ವಿ–ಲಕೋಟೆ ಪದ್ಧತಿಯಂತೆ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 27.09.2023** ಸಂಜೆ 04–00 ಗಂಟೆ. **3.** ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ತೆರೆಯುವ ದಿನಾಂಕ ಮತ್ತು ಸ್ಥಳ: **29.09.2023** ಬೆಳಿಗ್ಗೆ 11–00 ಗಂಟೆ, ಮೀನುಗಾರಿಕೆ ಉಪ ನಿರ್ದೇಶಕರುರವರ ಕಛೇರಿ, ಮೈಸೂರು.

ವಿವರ: ಮೀನುಗಾರಿಕೆ ಸಹಾಯಕ ನಿರ್ದೇಶಕರು ಕಛೇರಿ, ತಿ.ನರಸೀಪುರ ರವರಿಗೆ 2020ನೇ ಸಾಲಿನ ಅಥವಾ ನಂತರದ ಮಾದರಿಯ ಒಂದು ಟಾಟ ಇಂಡಿಗೋ/ ಟಯೋಟೋ ಇಟಿಯೋಸ್ / ಶಿಫ್ಟ್ ಡಿಸೈರ್ ಅಥವಾ ತತ್ಸಮಾನ ಮಾದರಿಯ ವಾಹನವನ್ನು ಹೊರಗುತ್ತಿಗೆ ಆಧಾರದಲ್ಲಿ 6 ತಿಂಗಳ ಅವಧಿಗೆ, ಟೆಂಡರ್ ಆಹ್ವಾನ.

ಇಎಂಡಿ ಮೊತ್ತ ರೂ.4200/–

ಸಹಿ/– ಮೀನುಗಾರಿಕೆ ಸಹಾಯಕ ನಿರ್ದೇಶಕರು, ತಿ.ನರಸೀಪುರ

DIPR/MYS/KAVITA/348/2023-24

4ನೇ ವರ್ಷದ ಪುಣ್ಯಸ್ಮರಣೆ



ಸದಾ ನಿಮ್ಮ ನೆನಪಿನಲ್ಲಿರುವ ಶ್ರೀ ಆರ್. ನಾಗರಾಜು (ಪತಿ) ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಬಂಧು–ಬಳಗದವರು. ಬಿ.ಬಿ. ಕೇರಿ, ಪುಲಕೇಶಿ ರಸ್ತೆ, ಮಂಡಿಮೊಹಲ್ಲಾ, ಮೈಸೂರು

ಶ್ರೀಮತಿ ಶಾಂತಿ

ನಿಧನ: 15.09.2019